ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೪ - ೭ - ೪೯

★

ಬೆಲೆ ಎರಡಾಣೆ



ಕಾಶ್ಮೀರದ ಶಾಲಿಮಾರ್ ತೋಟ

ಸಂಪುಟ ೨೧ ಸಂಚಿಕೆ ೧೨

ಕರ್ಮವೀರ

ಸೋಮವಾರ ಆಷಾಢ ಶು. ೯

ತಾರೀಕು ೪—೭—೧೯೪೯

...ದಲ್ಲಿ

...ರವನ್ನು ಕಾಶ್ಮೀರದ ...ಟೆ ದ ದೃಶ್ಯ ಪೂತ ...ನಟನ ನೃತ್ಯಕ್ಷೇತ್ರವೆನಿಸಿದ ...ಂಥ ಕಾಶ್ಮೀರದಲ್ಲಿ ನಿಸರ್ಗದ ... ಭಾಗವನ್ನು ಸಂಸ್ಕರಿಸಿ ನಿರ್ಮಿಸಿದ ಈ ಕೋಟ— ಎಂದ ಮೇಲೆ ಅದರ ಅಂದವನ್ನು ಮತ್ತೆ ಉಲ್ಲೇಖಿಸಬೇಕೇ? ಭಾರತದ ಹಲವಾರು ಶ್ರೀಮಂತರು ಪ್ರತಿವರ್ಷವೂ ಕಾಶ್ಮೀರದ ಗಿರಿ ನದಿ, ತೋಟಗಳಲ್ಲಿ ಸಕುಟುಂಬ, ಸಪರಿವಾರವಾಗಿ ವಿಹರಿಸ ಬರುತ್ತಾರೆ; ಅರ್ಥಬಲದಿಂದ ಕಣ್ಣುಗಳನ್ನು ಸಾರ್ಥಕ ಪಡಿಸಿಕೊಂಡು ಹೋಗುತ್ತಾರೆ!

ಕಾಶ್ಮೀರದ ಅಗರು, ಚಂದನ, ಕೃಷ್ಣಸಾರ, ಕೇಸರಿ ಮುಂತಾದವು ಸುಪ್ರಸಿದ್ಧವಿವೆ. ಇಂಥ ಗಿಡಮರಗಳು ತುಂಬಿದ ಆ ನಾಡು ಹಿಂದೆ ಸಂಸ್ಕೃತ ರಸಿಕರ ನೆಲೆವಿಡಾಗಿತ್ತು. ಕಾಲಿದಾಸ ಕೂಡ ಅಲ್ಲಿಯ ಈ ವಸ್ತುಗಳನ್ನು ತನ್ನ ಕಾವ್ಯದಲ್ಲಿ ಬಳಸಿಕೊಂಡಿದ್ದಾನೆ. ಶಾಲಿಮಾರ್ ತೋಟದಲ್ಲಿಯ ಚಿಕ್ಕ ಕೆರೆತೊರೆ ದಿಣ್ಣೆದಿಬ್ಬಗಳನ್ನು ಕಂಡರೆ "ಅದರ ಪೊರವೊಳಲ ವಿಶಾಲಕನಕ ಕೃತಕಗಿರಿಗಳಿಂ, ಫಲಪ್ರಸೂನತರುಗಳಿಂ" ಎಂಬ ಮತ್ತು "ಅಲ್ಲಿ ಸೊಗಯಿಸುವ ಕೃತಕಗಿರಿಗಳಿಂ, ಕಲ್ಪತರುಗಳನೆ ಪೋಲ್ವ ಮರಗಳಿಂ" ಎಂಬ ಪಂಪನ ವರ್ಣನೆ ನೆನಪಿಗೆ ಬರುತ್ತದೆ.

ಕಾಶ್ಮೀರದ ಕಲಹದಲ್ಲಿ ಭಾರತದ ಸೈನಿಕರ ಸಾಹಸದಿಂದ ಇಂತಹ ಅನೇಕ ನಿಜಸೌಂದರ್ಯದ ನಿಕೇತನಗಳು ರಕ್ಷಿಸಲ್ಪಟ್ಟಿವೆ. ಆ ಗುಡ್ಡಗಾಡಿನ ಪ್ರದೇಶದಲ್ಲಿ ಈ ನಿಸರ್ಗ ಪ್ರಕಾರವೇ ಬಹುಜನರಿಗೆ ಅನ್ನ ಕೊಡುವ ಉದ್ಯೋಗವನ್ನು ಒದಗಿಸಿಕೊಟ್ಟಿದೆ. ವಿಹಾರಿಗಳಿಗೆ ಮಾರ್ಗದರ್ಶಕರಾಗಿ, ಜಲಯಾನಸಹಾಯಕರಾಗಿ, ವಸತಿ ಭೋಜನಾದಿಗಳಿಗೆ ಏರ್ಪಾಟು ಮಾಡಿ ಕೊಡುವವರಾಗಿ ಹಲವು ಜನರು ಜೀವನವನ್ನು ಸಾಗಿಸುತ್ತಿದ್ದಾರೆ. ಶಾಲಿಮಾರ್ ತೋಟವಾದರೂ ಇದೇ ಮೇರೆಗೆ ರಸಿಕಗಣಕೆಯಂತೆ ಅವಲಂಬಿಗಳ ಹೊಟ್ಟೆ ಹೊರೆಯುತ್ತಿದೆ; ಪಾಂಥರ ಕಣ್ಮನಗಳನ್ನು ತಣಿಸುತ್ತಿದೆ; ರಸಿಕರ ರಸಜ್ಞತೆಯನ್ನು ಒರೆಗೆ ಹಚ್ಚಿ ನೋಡುತ್ತದೆ; ಅವರ ಹೃದಯ ಸೌಂದರ್ಯವನ್ನುಂಡು ವರ್ಧಿಷ್ಣುವಾಗುತ್ತಿದೆ! ಹಿಂದುಸ್ತಾನದಲ್ಲಿ ಶಾಂತಿ ಸುವ್ಯವಸ್ಥೆ ಸಂಪೂರ್ಣವಾಗಿ ನೆಲೆಸಿಂತ ಮೇಲೆ "ಸೀಜನ್ ಟಿಕೆಟ್ಟಿನ" ವ್ಯವಸ್ಥೆಯನ್ನು ರೇಲ್ವೆಯವರು ಮಾಡಬಹುದು. ಆಗ ಸಾಮಾನ್ಯರು ಕನ್ಯಾಕುಮಾರಿಯಲ್ಲಿದ್ದರೂ ವರಕುಮಾರರಾಗಿ ಶಾಲಿಮಾರ್ ತೋಟವನ್ನು ಕಂಡು ಬರಬಹುದು!

ಆಹಾರ ಸಮಸ್ಯೆಯ ಬಗ್ಗೆ ಮುಖ್ಯ ಮಂತ್ರಿಗಳ ಭಾಷಣ

ಸರಳ, ಸ್ಪಷ್ಟ ಮತ್ತು ನೇರವಾದ ಮಾತುಗಳಿಂದ ಮೊನ್ನೆ ತಾ ೨೯ ರಾತ್ರಿ ಭಾರತದ ಮುಖ್ಯ ಮಂತ್ರಿ ಪಂ. ಜವಾಹರಲಾಲ ನೆಹರು ಅವರು ನಮ್ಮನ್ನೆದುರಿಸಿರುವ ಆಹಾರ ಸಮಸ್ಯೆಯನ್ನು ಕುರಿತು ರಾಷ್ಟ್ರವನ್ನುದ್ದೇಶಿಸಿ ಒಂದು ಆಕಾಶವಾಣಿ ಭಾಷಣ ಮಾಡಿದರು. ಸಮಸ್ಯೆಯ ಸ್ವರೂಪ, ಕೈಕೊಂಡ ಉಪಾಯಗಳು ಮತ್ತು ಜನತೆ ನೀಡಬಹುದಾದ ಸಹಕಾರದ ರೀತಿಗಳು—ಎಂದು ಅವರ ಭಾಷಣವನ್ನು ಮೂರು ಪರಿಚ್ಛೇದಗಳಾಗಿ ವಿಂಗಡಿಸಬಹುದು. ನಮಗೆ ಸದ್ಯಕ್ಕಿರುವ ಆಹಾರ ಕೊರತೆ ನೂರಕ್ಕೆ ೧೦ ರಷ್ಟು. ಅದು ೧೯೫೧ ರಷ್ಟು ಹೊತ್ತಿಗೆ ಏರಲಿರುವ ಜನಸಂಖ್ಯೆಯನ್ನು ಪರಿಗಣಿಸಿದರೆ ನೂರಕ್ಕೆ ೧೫ ಆಗಬಹುದು. ಇದು ಅಷ್ಟೇನೂ ದುರ್ನಿವಾರ್ಯವಾದ ಕೊರತೆಯಲ್ಲ. ೧೯೫೧ ರೊಳಗೆ ಅದನ್ನು ನಿವಾರಿಸಿ ಹೊರಗಿನಿಂದ ಆಹಾರ ತರಿಸುವದನ್ನು ನಿಲ್ಲಿಸಲು ಸರಕಾರ ಸಂಕಲ್ಪಿಸಿದೆ. ಸರಕಾರದವರು ಪ್ರಾರಂಭಿಸಲಿರುವ ಅನೇಕ ದೊಡ್ಡ ನೀರಾವರಿ ಯೋಜನೆಗಳು ೧೯೫೧ ರ ನಂತರ ಪ್ರತಿಫಲ ಕೊಡಲಾರಂಭಿಸುವದರಿಂದ ಅನಂತರದ ಪರಿಸ್ಥಿತಿಯ ಬಗ್ಗೆ ಚಿಂತಿಸಬೇಕಾದ್ದಿಲ್ಲ. ಇನ್ನು ಮುಂದಿನ ೨॥ ವರ್ಷಗಳ ಮಟ್ಟಿಗಷ್ಟೆ ನಾವು ವಿಶೇಷ ಎಚ್ಚರಿಕೆಯಿಂದ, ನಡುಕಟ್ಟಿ ಬಿಗಿದು ಸಾಗಬೇಕಾಗಿದೆ. ಈಗಿರುವ ನೂರಕ್ಕೆ ೧೦ ರ ಕೊರತೆಯಾದರೂ ಈ ವರ್ಷದ ಅತಿವೃಷ್ಟಿ, ಅನಾವೃಷ್ಟಿ ಮತ್ತು ಗುಜರಾಥ ಬರಗಾಲಗಳಿಂದ ಉದ್ಭವಿಸಿದ ಕೊರತೆಗಳನ್ನೊಳಗೊಂಡಿರುವದರಿಂದ ಸಾಮಾನ್ಯ ಕೊರತೆ ಅದಕ್ಕಿಂತಲೂ ಕಡಿಮೆಯೆ ಇರಬೇಕು.

ಈ ೧೦—೧೫ ಶತಾಂಶದ ಕೊರತೆಯನ್ನು ನೀಗಿಸುವದು ದೊಡ್ಡ ಕೆಲಸವಲ್ಲ. ಭಾರತದ ಕೃಷಿಭೂಮಿಯ ಎಕರೆವಾರು ಹುಟ್ಟುವಳಿ ಇತರ ದೇಶಗಳಲ್ಲಿರುವದಕ್ಕಿಂತ ತೀರ ಕಡಿಮೆಯಿದೆ. ಸುಧಾರಿಸಿದ ಕೃಷಿಪದ್ಧತಿ, ಹೆಚ್ಚು ಗೊಬ್ಬರ ಹಾಕುವದೇ ಮೊದಲಾದ ಉಪಾಯಗಳಿಂದ ಹುಟ್ಟುವಳಿಯನ್ನು ನೂರಕ್ಕೆ ೧೫ ಕ್ಕಿಂತಲೂ ಹೆಚ್ಚು ಹೆಚ್ಚಿಸಬಹುದೆಂಬ ವಿಶ್ವಾಸವನ್ನು ಮುಖ್ಯ ಮಂತ್ರಿಗಳು ವ್ಯಕ್ತಗೊಳಿಸಿದರು.

ಅಕ್ಕಿ ಗೋದಿಗಳೇ ಮುಖ್ಯ ಆಹಾರವಾಗಿರುವ ನಮ್ಮ ದೇಶದಲ್ಲಿ ಅವುಗಳ ಹೆಚ್ಚಳಕ್ಕೆ ಮಹತ್ವಕೊಡುವದಂತೂ ಆಯಿತು. ಆದರೆ ಅಷ್ಟೇ ಪೌಷ್ಟಿಕವಾದ ಇತರ ಆಹಾರ ವಸ್ತುಗಳನ್ನು ಮುಖ್ಯವಾಗಿ ಗೆಣಸು, ಬಾಳೆ ಮತ್ತು ಸಂಜೀವನಿ ಗಡ್ಡೆಗಳನ್ನು ನಾವು ಹೆಚ್ಚಾಗಿ ಬೆಳೆಸಬಹುದು. ಇವುಗಳು ಧಾನ್ಯಗಳಿಗಿಂತ ಹೆಚ್ಚು ಪರಿಮಾಣದಲ್ಲಿ ಬೆಳೆಯುವವಲ್ಲದೆ, ಅವುಗಳನ್ನು ಧಾನ್ಯಗಳೊಡನೆ ಸೇವಿಸುವದರಿಂದ ನಮ್ಮ ಆಹಾರ ಹೆಚ್ಚು ಸಮಧಾತುವಾಗಿ ಆರೋಗ್ಯವೂ ಸುಧಾರಿಸಬಲ್ಲದು. ಹಳ್ಳಿಗಳಲ್ಲಿ ರೈತರಂತೂ ಆಯಿತು. ನಗರಗಳಲ್ಲಿ ಹಿತ್ತಿಲುಳ್ಳ ಅನೇಕ ಮನೆಗಳಿದ್ದು, ಅಲ್ಲಿ ಕೂಡ ಬಾಳೆಗಿಡಗಳನ್ನು ಕಷ್ಟವಿಲ್ಲದೆ ಬೆಳೆಯಬಹುದು. ಇದಕ್ಕೂ ಗೊಬ್ಬರ ಮೊದಲಾದವುಗಳಿಂದ ಧಾನ್ಯದ ಬೆಳೆ ಹೆಚ್ಚಿಸಲಿಕ್ಕೂ ಸರಕಾರ ಕೈಲಾದ ಸಹಾಯ ನೀಡುವದು. ಬ್ರಿಟನ್ನಿನ ಆಹಾರ ತಜ್ಞರಾದ ಲಾರ್ಡ ಬಾಯ್ಡ ಓರರ ಸಲಹೆಯಂತೆ ದೇಶದ ಆಹಾರ ಉತ್ಪಾದನ-ವಿತರಣಗಳನ್ನು ತೂಗಿಕೊಂಡು ಹೋಗಲು ಒಬ್ಬ ಕೇಂದ್ರ ಆಹಾರ ನಿಯಂತ್ರಕನನ್ನು ನೇಮಿಸಿ ಅವನಿಗೆ ಪರ್ಯಾಪ್ತವಾದ ಅಧಿಕಾರಗಳನ್ನು ಕೊಡಲಾಗುವದೆಂದು ಮುಖ್ಯಮಂತ್ರಿಗಳು ಆಶ್ವಾಸನವಿತ್ತರು.

ಜನತೆಯ ಸಹಕಾರವನ್ನು ಅಪೇಕ್ಷಿಸುತ್ತ ಪಂ. ನೆಹರು ಅವರು, ಈ ಆಹಾರಕೊರತೆಯನ್ನು ಯಶಸ್ವಿಯಾಗಿ ಎದುರಿಸಬೇಕಾದರೆ ಆಹಾರ ಪ್ರಶ್ನೆಯನ್ನು ಯುದ್ಧಕಾಲದ ಸ್ಥಿತಿಯೆಂದು ಬಗೆದು ನಡೆದುಕೊಳ್ಳಬೇಕೆಂಬ ಲಾರ್ಡ ಬಾಯ್ಡರ ಸೂಚನೆಯನ್ನು ಜನರ ಗಮನಕ್ಕೆ ತಂದರು. ಜನರು ದೇಶಹಿತವನ್ನು ಲಕ್ಷದಲ್ಲಿಟ್ಟು ಅಕ್ಕಿ ಗೋದಿಗಳ ಉಪಯೋಗವನ್ನು ಕಡಿಮೆ ಮಾಡಿ ಬಾಳೆ, ಗೆಣಸುಗಳನ್ನು ಹೆಚ್ಚಾಗಿ ಬಳಸಬೇಕು. ಮುಖ್ಯವಾಗಿ ಅಕ್ಕಿಯ ಉಪಯೋಗವನ್ನು ಆದಷ್ಟು ಕಡಿಮೆ ಮಾಡಬೇಕು. ಏಕೆಂದರೆ ಹೊರಗಿಂದ ತರಿಸುವ ಅಕ್ಕಿಗೆ ಗೋದಿಗಿಂತ ಇಮ್ಮಡಿ ಬೆಲೆ ಕೊಡಬೇಕಾಗುತ್ತದೆ. ೧೯೪೫ ರಲ್ಲಿ ೨೦,೦೦೦, ೧೯೪೬ ರಲ್ಲಿ ೩,೩೧,೦೦೦, ೧೯೪೭ ರಲ್ಲಿ ೪,೫೪,೦೦೦ ಮತ್ತು ೧೯೪೮ ರಲ್ಲಿ ೮,೦೦,೦೦೦ ಟನ್ ಅಕ್ಕಿ ತರಿಸಲಾಯಿತು. ಅಕ್ಕಿಮುಖ್ಯ ಆಹಾರವಲ್ಲದವರು ಅದನ್ನು ಬಿಟ್ಟುಬಿಡಬೇಕು, ಮುಖ್ಯ ಆಹಾರವಾದವರು ಅದರ ಉಪಯೋಗವನ್ನು ಸ್ವಲ್ಪ ಕಡಿದು ಗೋದಿಯನ್ನೋ ಮತ್ತೇನನ್ನೋ ಬಳಸಬೇಕು. ೨೦೦ ಲಕ್ಷ ಟನ್ ಅಕ್ಕಿ ಬೆಳೆಸುವ ನಮಗೆ ೮ ಲಕ್ಷ ಟನ್ ಕೊರತೆಯನ್ನು ಬೇರೆ ವಸ್ತುಗಳಿಂದ ತುಂಬಿಕೊಳ್ಳುವ ಚಿಲ್ಲರೆ ಸ್ವಾರ್ಥತ್ಯಾಗ ಸಾಧ್ಯವಿಲ್ಲವೆ? ಎಂದವರು ಪ್ರಶ್ನಿಸಿದರು. ಅಧಿಕಾರಿಗಳು, ರೇಲ್ವೆ ಮತ್ತು ಧಕ್ಕೆ ಕೂಲಿಕಾರರು ಕೂಡ ಅಲ್ಪ ಸ್ವಲ್ಪ ಹೆಚ್ಚು ಶ್ರಮವಹಿಸಿದರೆ ಲೀಲಾ ಜಾಲವಾಗಿ ಆಹಾರ ವಿತರಣದ ಕೊರತೆಗಳನ್ನು ನೀಗಿಸಬಹುದು.

ಮುಖ್ಯಮಂತ್ರಿಗಳ ಈ ಸಂದೇಶಕ್ಕೆ ನಾವು ಸೇರಿಸಬಹುದಾದ್ದು ವಿಶೇಷವೇನೂ ಇಲ್ಲ. ಆಹಾರದ ಕೊರತೆ ಅಷ್ಟೇನೂ ಘೋರವಾಗಿಲ್ಲೆಂದು ಅವರು ತಿಳಿಸಿದ್ದು ಸಮಾಧಾನಕರವಾಗಿದೆ. ಕೆಲ ತಜ್ಞರು ಸರಕಾರವೆ ಸಂಗ್ರಹಿಸಿದ ಅಂಕೆ ಸಂಖ್ಯೆಗಳಿಂದ ಆಹಾರ ಕೊರತೆ ಭಾರತದಲ್ಲಿ ಇಲ್ಲವೇ ಇಲ್ಲವೆಂದು ತೋರಿಸಿಕೊಟ್ಟಿದ್ದಾರೆ. ಸರಕಾರ ಈ ವಿಚಾರಧಾರೆಯನ್ನು ಚನ್ನಾಗಿ ಅವಲೋಕಿಸಬೇಕೆಂದು ಸೂಚಿಸಬೇಕಾಗಿದೆ. ಅದು ನಿಜವಾಗಿದ್ದರೆ ಸೀದಾದಂಥ ದೊಡ್ಡ ಪೀಡೆಯಿಂದ ಜನರೂ ಸರಕಾರವೂ ತಪ್ಪಿಸಿಕೊಳ್ಳಬಹುದಾಗಿದೆ. ಆದರೆ ಆಹಾರ ಸಮಸ್ಯೆಯ ಗಂಭೀರತೆಯನ್ನು ದುರ್ಲಕ್ಷಿಸುವದು ಘಾತಕವೇ ಸರಿ. ಆಹಾರಉತ್ಪಾದನೆಯನ್ನು ಹೆಚ್ಚಿಸಿ ಈ ವಿಷಯದ ಪರಾಧೀನತೆಯಿಂದ ಪಾರಾಗಲು ದೇಶಕ್ಕೆ ನೆರವಾಗುವದು ರೈತರಿಂದ ಹಿಡಿದು ಬಳಕೆಗಾರರ ವರೆಗಿನ ಎಲ್ಲರ ಕರ್ತವ್ಯವೆಂದು ಬೇರೆ ಹೇಳಬೇಕಿಲ್ಲ. ಭೋಜನ ಸಮಾರಂಭಗಳು, ಆಹಾರ ವಸ್ತುಗಳನ್ನು ಹಾಳುಮಾಡುವದು ನಿಲ್ಲಬೇಕೆಂಬ ಅವರ ಬಿನ್ನಹಕ್ಕೆ ಕಿವಿಗೊಡದವರು ದ್ರೋಹಿಗಳೇ ಸರಿ. ಸರಕಾರದ ಧಾನ್ಯ ಸಂಗ್ರಹ ಪ್ರಯತ್ನಗಳಲ್ಲಿ ಕಾಂಗ್ರೆಸಿಗರು ನೆರವಾಗವಾಗಬೇಕೆಂಬ ಮುಖ್ಯಮಂತ್ರಿಗಳ ಕಳಕಳಿಯ ಬಿನ್ನಹಕ್ಕೆ ಯೋಗ್ಯ ಪುರಸ್ಕಾರ ದೊರೆಯಲೆಂದು ಹಾರೈಸುತ್ತೇವೆ. ಮುಖ್ಯಮಂತ್ರಿಗಳು ತಿಂಗಳಿಗೊಮ್ಮೆ ಈ ಬಗ್ಗೆ ನಮ್ಮನ್ನು ಮಾತಾಡಿಸುವರಂತೆ. ಅವರಿಂದ ಹೆಚ್ಚು ಆನಂದಕರ ವಾರ್ತೆಗಳು ಮುಂದೆ ನಮಗೆ ಲಭಿಸಲೆಂದು ಹಾರೈಸೋಣ.

× × ×

ಭಾರತ ವಿಭಜನೆಯ ಅನಂತರ ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಸ್ಥಳಾಂತರ ಮಾಡಿದ ಅನೇಕ ಪ್ರಜೆಗಳ ಆಸ್ತಿಯ ಪ್ರಶ್ನೆಯನ್ನು ಬಿಡಿಸಲಾಗಿದ್ದಿಲ್ಲ. ಅದಕ್ಕಾಗಿ ಕಳೆದ ವಾರ ಕರಾಚಿಯಲ್ಲಿ ಅಂತರ್ದೇಶಿಯ ಪರಿಷತ್ತೊಂದನ್ನು ಕರೆಯಲಾಯಿತು. ಅದರಲ್ಲಿ ನಿರಾಶ್ರಿತರ ಆಸ್ತಿಯ ವಿನಿಮಯವು ಸರಕಾರಗಳ ನಡುವೆ ನಡೆಯಬೇಕಲ್ಲದೆ, ಖಾಸಗಿಯಾಗಿ ನಡೆಯಬಾರದೆಂದು ಹಿಂದುಸ್ತಾನ ಸೂಚಿಸಿತು. ಆದರೆ ಪಾಕಿಸ್ತಾನ ಇದಕ್ಕೊಪ್ಪದೆ ಪರಿಷತ್ತು ಅಯಶಸ್ವಿಯಾಯಿತು.

ಪಾಕಿಸ್ತಾನವು ಹಿಂದುಸ್ತಾನದ ಮೇಲಿನ ಸೂಚನೆಯನ್ನು ನಿರಾಕರಿಸಲು ಅದರ ಸ್ವಾರ್ಥಸಾಧಕ ಬುದ್ಧಿಯೇ ಕಾರಣ. ಪಾಕಿಸ್ತಾನ ಬಿಟ್ಟು ಬಂದ ಹಿಂದೀಯರು ಸುಮಾರು ೧೫೦೦ ಕೋಟಿ ರೂಪಾಯಿಗಳನ್ನು ಅಲ್ಲಿ ಬಿಟ್ಟು ಬಂದಿದ್ದರೆ ಪಾಕಿಸ್ತಾನಕ್ಕೆ ಹೋಗಿ ನೆಲಸಿದ ಇಲ್ಲಿಯ ಮುಸಲ್ಮಾನರು ಬಡವರಾಗಿದ್ದ ಕಾರಣ ಕೇವಲ ೨೦೦ ಕೋಟಿ ರೂಪಾಯಿಗಳ ಬೆಲೆಯ ಆಸ್ತಿಯನ್ನು ಬಿಟ್ಟು ಹೋಗಿದ್ದಾರೆ. ಖಾಸಗಿ ರೀತಿಯಿಂದ ಆಸ್ತಿಯ ವಿನಿಮಯಕ್ಕೆ ಒಪ್ಪಿದ್ದ ಪಾಕಿಸ್ತಾನವು ಖಾಸಗಿ ಜನರು ಪಾಕಿಸ್ತಾನದಲ್ಲಿರುವ ಹಿಂದೀ ನಿರಾಶ್ರಿತರ ಆಸ್ತಿಯನ್ನು ಕೊಳ್ಳಬಾರದೆಂದು ಪ್ರಚಾರಕ್ಕೆ ಎಡೆಗೊಡುವ ಮುಂತಾದ ಅನೇಕ ವಿಘ್ನ ಕಾರ್ಯಗಳಿಂದ ಅದಕ್ಕೆ ಗಿರಾಕಿ ಸಿಕ್ಕದಂತೆ, ಸಿಕ್ಕಿದರೂ ಯೋಗ್ಯ ಬೆಲೆ ದೊರೆಕದಂತೆ ಮಾಡಿದ್ದರಿಂದ ಹಿಂದುಸ್ತಾನವು ಸರಕಾರೀ ವ್ಯವಸ್ಥೆಯಿಂದ ಆಸ್ತಿಯ ವಿನಿಮಯವಾಗಬೇಕೆಂದು ಸೂಚಿಸುವ ಅವಶ್ಯಕತೆಯುಂಟಾಯಿತು. ಆದರೆ ಇದಕ್ಕೆ ಪಾಕಿಸ್ತಾನ ಒಪ್ಪದುದರಿಂದ ಹಿಂದೀ ಸರಕಾರಕ್ಕೆ ಬಹಳ ಬೇಸರವುಂಟಾಗಿದೆ. ಮೊದಲಿಂದಲೂ ಅಂತರ್ದೇಶೀಯ ಪರಿಷತ್ತುಗಳಲ್ಲಿ ಆದ ಒಪ್ಪಂದದ ಕರಾರುಗಳನ್ನು ಪಾಲಿಸುವುದರಲ್ಲಿ ಅಶ್ರದ್ಧೆ, ವಿಲಂಬಗಳನ್ನು ತೋರಿದ ಪಾಕಿಸ್ತಾನ ಈ ಪ್ರಕರಣದಲ್ಲಿ ನಿರ್ಲಜ್ಜೆಯಿಂದ ತನ್ನ ಪರಸ್ವಾಪಹಾರದ ಕೌಟಿಲ್ಯವನ್ನು ವ್ಯಕ್ತ ಮಾಡಿತು. ಪಾಕಿಸ್ತಾನದ ಈ ವಂಚಕತೆಯನ್ನು ಜಗತ್ತಿಗೆ ತೋರಿಸಿ ಅದಕ್ಕೆ ಬುದ್ಧಿ ಬರುವಂತೆ ಮಾಡದಿದ್ದರೆ ಪರಸ್ಪರ ವ್ಯವಹಾರದಲ್ಲಿ ಇನ್ನು ಮುಂದೆಯೂ ಹಿಂದುಸ್ತಾನ ನಷ್ಟ ಹೊಂದುತ್ತ ಬಾಳಬೇಕಾದ ಸಂದರ್ಭಗಳು ಉಂಟಾದಾವು.

× × ×

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳ ಒಕ್ಕೂಟವು ಜುಲೈ ೧ ರಲ್ಲಿ ಅಸ್ತಿತ್ವಕ್ಕೆ ಬಂದಿತು. ಅಲ್ಲಿಯ ಸಂಯುಕ್ತ ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ಧುರೀಣರಾಗಿ ಆರಿಸಲ್ಪಟ್ಟ ಶ್ರೀ ಟಿ. ಕೆ. ನಾರಾಯಣ ಪಿಳ್ಳೆಯವರು ಸಮೀಕೃತ ಮಂತ್ರಿಮಂಡಲದ ಸಂಬಂಧದ ನಿರ್ಣಯವನ್ನು ಮಾಡಿ ತಮ್ಮ ಮುಖ್ಯ ಮಂತ್ರಿತ್ವದಲ್ಲಿ ಹೊಸ ಮಂತ್ರಿಮಂಡಲವನ್ನು ರಚಿಸುವ ವ್ಯವಸ್ಥೆಯನ್ನು ಮಾಡಿದ್ದಾರೆ.

ಈ ಒಕ್ಕೂಟವು ಈಗ ಸ್ಥಾಪಿತವಾಗಿರುವ ಆರು ಸಂಸ್ಥಾನ ಒಕ್ಕೂಟಗಳಲ್ಲಿ ವಿಸ್ತಾರದಲ್ಲಿ (೮'೫೦ ಚ. ಮೈಲು) ಅತಿ ಚಿಕ್ಕವುಗಳಲ್ಲಿ ಎರಡನೆಯದೆನಿಸುವುದು. ಇದರ ವಾರ್ಷಿಕ ಆದಾಯ ೧೩ ಕೋಟಿ ರೂಪಾಯಿಗಳಷ್ಟಾಗುವುದರಿಂದ ಈ ದೃಷ್ಟಿಯಿಂದ ರಾಜಸ್ಥಾನದ ಒಕ್ಕೂಟಕ್ಕೆ ಇದು ಸರಿಸಮವಾಗುತ್ತದೆ. ಶಿಕ್ಷಣ, ಪ್ರಗತಿಶೀಲ ಪ್ರಜಾಪ್ರಭುತ್ವ, ನಿಸರ್ಗಸಂಪತ್ತು, ದೇಶೀಯ ಕಲೆ ಕೈಗಾರಿಕೆಗಳು, ಅಣುಶಕ್ತಿಯ ಆಕರವಾದ ಥೋರಿಯಂ ಮುಂತಾದ ಖನಿಜಗಳು ಇವುಗಳ ಉತ್ಕರ್ಷದ ದೆಸೆಯಿಂದ ಈ ಹೊಸ ದಾಕ್ಷಿಣಾತ್ಯ ಒಕ್ಕೂಟ ವಿಶಿಷ್ಟತೆಯನ್ನು ಪಡೆದಿದೆ.

ತಿರುವಾಂಕೂರು ಕೊಚ್ಚಿಗಳಲ್ಲಿ೨೨,೬೩,೮೮೫ ಜನ ಕ್ರಿಶ್ಚಿಯನ್ನರಿದ್ದಾರೆ. ಇವರು ಹಿಂದುಸ್ತಾನದ ಒಟ್ಟು ಕ್ರಿಶ್ಚಿಯನ್ನರ ಸಂಖ್ಯೆಯಲ್ಲಿ ನೂರಕ್ಕೆ ೪೩ ರಷ್ಟಾಗುತ್ತಾರೆ. ಇಲ್ಲಿ ೫॥ ಲಕ್ಷ ಮುಸಲ್ಮಾನರಿದ್ದಾರೆ. ಮಿಕ್ಕವರು ಹಿಂದುಗಳು. ಈ ತ್ರಿಧರ್ಮಿಯರೂ ಪರಸ್ಪರ ಶಾಂತಿಸೌಹಾರ್ದಗಳಿಂದ ಬಾಳುತ್ತಿದ್ದಾರೆ. ಇಲ್ಲಿಯ ಪ್ರಜೆಗಳಲ್ಲಿ ನೂರರಲ್ಲಿ ೬೭-೯ ಗಂಡಸರೂ ೪೨.೧ ಹೆಂಗಸರೂ ಸಾಕ್ಷರರಾಗಿದ್ದಾರೆ. ಈ ಪ್ರಗತಿಪರ ಸಂಸ್ಥಾನಗಳ ವಿಲಯನದೊಡನೆ ಸಂಸ್ಥಾನಗಳ ಸಮಸ್ಯೆ ಒಂದು ಘಟ್ಟಕ್ಕೆ ಬಂದಂತಾಗಿದ್ದು ಭಾರತದ ರಾಜಕೀಯ ಸ್ವರೂಪದಲ್ಲಿ ಒಂದು ಸಮತೆಯುಂಟಾಗಿದೆ.

ಪಾಕ—ಅಫಗಾಣಿಸ್ತಾನ ಜಗಳದ ಹಿನ್ನೆಲೆ

(ಲೇ- ಕೆ. ಎ. ಶೇಖ ಪಾಚ್ಛಾಪುರ)

ಪಾಕ-ಅಫಗಾನಿಸ್ತಾನ ಜಗಳವು ಹೊಸದಲ್ಲ. ಅದು ೧೮೯೩ ರಲ್ಲೇ ಹುಟ್ಟಿತ್ತು. ಅಗಿನ ಸಾಮ್ರಾಜ್ಯವಾದಿ ಆಳರಸರು ಹಿಂದುಸ್ತಾನದ ವಾಯುವ್ಯ ಸರಹದ್ದನ್ನು ನೆರೆಹೊರೆಯವರಿಂದ ಬೇರಿಡುವ ನೀತಿಯನ್ನು ಸ್ವೀಕರಿಸಿದ್ದರು. ಇಷ್ಟೇ ಅಲ್ಲ, ನೆರೆಯ ಪ್ರದೇಶದಲ್ಲಿಯೂ ಮೂರು ಭಾಗಗಳನ್ನು ಮಾಡಿ ಅವರು ಎಂದೂ ಒಂದಾಗದಂತೆ ಜಾಗ್ರತೆ ವಹಿಸಿದ್ದಾರೆ ಅವುಗಳಲ್ಲಿ ಒಂದನೆಯ ಭಾಗವು ಸದ್ಯದ ಅಫಗಾಣಿಸ್ತಾನ, ಎರಡನೆಯದು ಸ್ವತಂತ್ರ ಗುಡ್ಡಗಾಡು ಪ್ರದೇಶ, ಮೂರನೆಯದು ಸರಹದ್ದು ಪ್ರಾಂತವಾಗಿದ್ದವು. ಸರಹದ್ದು ಪ್ರಾಂತವನ್ನು ಒಂದನೆಯ ಎರಡನೆಯ ಭಾಗಗಳಿಂದ ಬೇರಿಡಲು ನಕಾಶೆಯಲ್ಲಿ ಒಂದು ಗೆರೆ ಹೊಡೆಯಲ್ಪಟ್ಟಿತ್ತು. ಅದಕ್ಕೆ "ಡ್ಯೂರೆಂಡ ಲಾಯಿನ್" ಎಂಬ ಹೆಸರು.

ರಾಜ್ಯವ್ಯವಸ್ಥೆ

ಇನ್ನು ಆಯಾ ಭಾಗಗಳ ರಾಜ್ಯವ್ಯವಸ್ಥೆ: ಆದರೆ ಅಫಗಾಣಿಸ್ತಾನಕ್ಕೆ ಸ್ವತಂತ್ರ ದೇಶವೆಂದು ಮಾನ್ಯಮಾಡಿದ್ದರಿಂದ ಅದು ತನ್ನ ದೇಶದ ವ್ಯವಸ್ಥೆ ತಾನೇ ನೋಡಿ ಕೊಳ್ಳುವದು. ೧೯೦೭ ರ ಮುಂಚೆ ಈಗಿನ ರಶಿಯದ ಅಂಜಿಕೆಯಂತೆಯೇ ಝಾರನ ಕಡೆಗೆ ಅಫಗಾನರು ಒಲಿಯದಂತೆ ಸ್ವತಂತ್ರರಿದ್ದರೂ, ಅಪ್ರತ್ಯಕ್ಷ ರೀತಿಯಿಂದ ಅವರ ರಾಜ್ಯವ್ಯವಸ್ಥೆಯಲ್ಲಿ ಬ್ರಿಟಿಶರ ಕೈವಾಡ ನಡೆದೇ ಇತ್ತು. ಮೂರನೆಯ ಭಾಗವಾದ ಸರಹದ್ದು ಪ್ರಾಂತವು ಹಿಂದುಸ್ತಾನದ ಒಂದು ಅಂಗವಾಗಿದ್ದರಿಂದ ಅದರ ವ್ಯವಸ್ಥೆ ಇದರ ಕೈಯಲ್ಲಿತ್ತು. ಅದರೂ, ೧೯೩೦ ರವರೆಗೆ ಈ ಪ್ರಾಂತವು ಕಾನೂನಿಲ್ಲದ ಪ್ರಾಂತವೆಂದು ಪ್ರಸಿದ್ಧಿ ಪಡೆದಿತ್ತು, ಅಂದರೆ, ಅಲ್ಲಿಯ ರಾಜ್ಯವ್ಯವಸ್ಥೆಯು ಸೈನ್ಯಾಧಿಕಾರಿಗಳ ಕೈಯಲ್ಲಿತ್ತು.

೨ ನೆಯ ಭಾಗವಾದ ಸ್ವತಂತ್ರ ಗುಡ್ಡಗಾಡು ಪ್ರದೇಶದ ವ್ಯವಸ್ಥೆ ಮಾತ್ರ ಕಠಿನವಾಗಿತ್ತು. ಆದರೂ ಬ್ರಿಟಿಶರು ಅದಕ್ಕೆ ಒಂದು ದಾರಿ ಹುಡುಕಿ ತೆಗೆಯದೆ ಬಿಡಲಿಲ್ಲ. ಈ ದೇಶವು ಗುಡ್ಡಗಾಡುಪ್ರದೇಶವಾಗಿದ್ದರಿಂದ, ಒಕ್ಕಲುತನಕ್ಕೆ ತೀರ ಅಯೋಗ್ಯವಾಗಿದೆ. ಕೈಗಾರಿಕೆಗೆ ಎಷ್ಟೇ ಅಸ್ಪದವಿದ್ದರೂ, ಅ ದಿಶೆಗೆ ಅವರನ್ನು ಒಯ್ಯಲಾಗಲಿಲ್ಲ. ಇದರಿಂದ ಅವರ ಅರ್ಥಿಕ ಜೀವನದಲ್ಲಿ ಎಳ್ಳಷ್ಟೂ ಪ್ರಗತಿಯಾಗಲಿಲ್ಲ. ಇವರಿಗೆ ಬ್ರಿಟಿಶರು ದೇಣಿಗೆಯ ರೂಪದಿಂದ ದಯಪಾಲಿಸಿದ ಹಣದಿಂದಲೇ ಜೀವನ ಸಾಗಿಸುವಂತೆ ಚಟ ಕಲಿಸಿಬಿಟ್ಟರು. ರಾಜ್ಯವ್ಯವಸ್ಥೆಗೋಸುಗ, ಆ ಪ್ರಾಂತದಲ್ಲಿ ಐದು ಏಜನ್ಸಿಗಳನ್ನು ರಚಿಸಲಾಯಿತು. ಅವುಗಳ ಕಾರ್ಯವು ಬರಿ ಅಲ್ಲಿಯ ಟೋಳಿಗಳ ಮುಖಂಡರಿಗೆ, ಆಗಾಗ ಹಣಕೊಟ್ಟು ಅವರನ್ನು ತಮ್ಮ ಹತೋಟಿಯಲ್ಲಿ ಇಡುವದೇ ಆಗಿತ್ತು. ಅಂತೂ ಈ ಪ್ರದೇಶದವರು ಹಿಂದುಸ್ತಾನ, ಅಫಗಾಣಿಸ್ತಾನಗಳ ಗಡಿರಕ್ಷಕರಾಗಿದ್ದಾರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅಗಿನ ಹಿಂದೆ ಸರಕಾರದವರು ಕ್ರೂರ ಪಠಾನರನ್ನು ಹತೋಟಿಯಲ್ಲಿಡುವದಿದೆ; ರಶಿಯನ್ಸ್ ಅಂಜಿಕೆಯನ್ನು ದೂರಮಾಡುವದಿದೆ-ಎಂದು ನೆವ ಹೇಳಿ ಸರಹದ್ದಿನಲ್ಲಿ ಸೈನ್ಯಬಲವನ್ನು ಹೆಚ್ಚಿಸಿ ಅಸಂಖ್ಯ ಹಣವನ್ನು ನೀರಿನಂತೆ ಖರ್ಚು ಮಾಡುತ್ತಿದ್ದರು. ಪಾಕಿಸ್ತಾನವಾದ ಅನಂತರ ಸಹ ಇದೇ ನೀತಿ ಆಚರಣೆಯಲ್ಲಿದೆ.

ಭಾರತ ವಿಭಜನೆಯ ಬಳಿಕ

ಹಿಂದುಸ್ತಾನ ಇಬ್ಭಾಗವಾದ ಕೂಡಲೆ ಅನಪೇಕ್ಷಿತವಾಗಿ ಕಾಶ್ಮೀರಯುದ್ಧವು ಆರಂಭವಾಯಿತು. ಈ ಯುದ್ಧದಲ್ಲಿ ಗುಡ್ಡಗಾಡು ಪ್ರದೇಶದ ಸಾಮಾನ್ಯ ಪಠಾಣರು ಒಂದು ಒಂದುವರೆ ವರ್ಷದ ವರೆಗೆ ಭಾಗವಹಿಸಿದರು. ಈ ಅವಧಿಯಲ್ಲಿ ಪಾಕಿಸ್ತಾನ ಸರಕಾರಕ್ಕೆ ಇವರ ಆರ್ಥಿಕ ಪ್ರಶ್ನೆಯ ಬಗ್ಗೆ ವಿಚಾರಮಾಡುವ ಅವಶ್ಯಕತೆಯೇ ಇರಲಿಲ್ಲ.

ಈಗ ಕಾಶ್ಮೀರಯುದ್ಧವು ನಿಂತಿದೆ. ಇಷ್ಟೇ ಅಲ್ಲ, ಈ ಪ್ರಶ್ನೆಯು ಸಹ ಮುಗಿಯುವ ಮಾರ್ಗದಲ್ಲಿದೆ. ಇನ್ನು ಮಾತ್ರ ಈ ಪಠಾಣರ ಆರ್ಥಿಕ ಪ್ರಶ್ನೆಯನ್ನು ಬಿಡಿಸದೆ ಪಾಕಿಸ್ತಾನಕ್ಕೆ ಗತ್ಯಂತರವಿಲ್ಲದಾಗಿದೆ. ಮೊದಲಿನಂತೆ ಇವರಿಗೆ ಹಣ ತೆರುವುದು ಪಾಕಿಸ್ತಾನಕ್ಕೆ ಆಗುವಂತಿಲ್ಲ. ಆದ್ದರಿಂದ ಇದನ್ನು ತನ್ನ ಒಂದು ಅಂಗವನ್ನಾಗಿ ಮಾಡಿಕೊಂಡು ಬಿಡಬೇಕೆಂಬ ನಿರ್ಧಾರ ಮಾಡಿದಂತೆ ತೋರುತ್ತದೆ.

ಅಫಗಾನಿಸ್ತಾನವು ಮಾತ್ರ ಪುಶ್ತು ಭಾಷೆಯನ್ನಾಡುವವರ ದೇಶವು ತುಂಡಾಗುವದಕ್ಕೆ ಎಂದೂ ಸಮ್ಮತಿಸಿರಲಿಲ್ಲ. ಬ್ರಿಟಿಶರ ಮುಂದೆ ಅವರ ಆಟವು ನಡೆಯದಿದ್ದರೂ, ಪ್ರಸಂಗ ಬಂದಾಗ ಅದು ತನ್ನ ಈ ಬಯಕೆ ಪೂರೈಸಲು ಹವಣಿಸುತ್ತಿತ್ತು. ಇಷ್ಟೇ ಅಲ್ಲ, ಪರದೇಶದವರ ಸಂಗಡ ಸ್ವತಂತ್ರತೆಯಿಂದ ವ್ಯಾಪಾರ ಸಾಗಿಸಲು ಸಮುದ್ರದ ವರೆಗೆ ಮಾರ್ಗ ಮತ್ತು ಒಂದು ಬಂದರದ ಬೇಡಿಕೆಯನ್ನು ಮುಂದೆ ಮಾಡುತ್ತಿತ್ತು. ೧೯೩೮ ರಲ್ಲಿ ಅಫಗಾಣಿಸ್ತಾನದ ಶಾಲೆಗಳಲ್ಲಿ ಭೂಗೋಲಶಿಕ್ಷಣ ಕೊಡುವಾಗ ಪುಶ್ತು ಭಾಷೆ ಮಾತಾಡುವವರೆಲ್ಲರು ಭಾಷೆ ಸಂಸ್ಕೃತಿಗಳ ದೃಷ್ಟಿಯಿಂದ ಒಂದೇ ಜನಾಂಗದವರಿರುವರೆಂದು ಬಾಲಕರ ಮನದಲ್ಲಿ ಬಿಂಬಿಸಲಾಗುತ್ತಿತ್ತು.

೧೯೪೨ ರಲ್ಲಿ ಇಂಗ್ಲಂಡದ ಅರ್ಥಮಂತ್ರಿಗಳಾದ ಸರ್ ಸ್ಟಾಫರ್ಡ್ ಕ್ರಿಪ್ಸರು ಹಿಂದುಸ್ತಾನದವರ ಕೂಡ ವಿಚಾರವಿನಿಮಯ ಮಾಡಲು ಆಗಮಿಸಿದಾಗ ಅಫಗಾನರು ಒಂದು ಪತ್ರ ಕಳಿಸಿದ್ದರು.

ಹಿಂದುಸ್ತಾನದ ಭವಿಷ್ಯತ್ತನ್ನು ನಿರ್ಣಯಿಸುವಾಗ ವಾಯುವ್ಯ ಸರಹದ್ದು ಪ್ರಾಂತದ ಬಗ್ಗೆ ಪಠಾಣರ ಆಶೆ ಆಕಾಂಕ್ಷೆಗಳನ್ನು ಮರೆಯತಕ್ಕದ್ದಲ್ಲವೆಂದು ಆ ಪತ್ರದ ಆಶಯವಿತ್ತು. ಕ್ರಿಪ್ಸರು ಉತ್ತರಕೊಟ್ಟದ್ದು ಮಾತ್ರ ತಿಳಿಯಲಿಲ್ಲ. ವಾಡಿಕೆಯಂತೆ ಎರಡೂ ದಂಡೆಗಳ ಮೇಲೆ ಕೈಯಿಟ್ಟು ಉತ್ತರ ಕಳಿಸಿರಬೇಕು.

ಹಿಂದುಸ್ತಾನವು ಇಬ್ಭಾಗವಾಯಿತು. ಇದರ ಪರಿಣಾಮವಾಗಿ ರಾಷ್ಟ್ರೀಯ ವೃತ್ತಿಯ ಖಾನಬಂಧು ಮತ್ತು ಅವರ ಅನುಯಾಯಿಗಳ ದುಃಸ್ಥಿತಿಯನ್ನು ನಾವು ಮರೆಯುವಂತಿಲ್ಲ. ಸಂಯುಕ್ತ ಹಿಂದುಸ್ತಾನ ಒಡೆದು ಪಾಕಿಸ್ತಾನವು ಧರ್ಮ ಮತ್ತು ದ್ವಿರಾಷ್ಟ್ರತತ್ವದ ಮೇಲೆ ನಿರ್ಮಾಣವಾಯಿತಲ್ಲವೇ ? ಇಂಥ ಉದಾಹರಣೆಗಳು ಜಗತ್ತಿನ ರಾಜಕಾರಣದಲ್ಲಿ ಸಿಗುವಂತಿಲ್ಲ. ಕೇವಲ ಮುಸ್ಲಿಂ ರಾಷ್ಟ್ರಗಳಾದ ಅರಬ ಇಜಿಪ್ತ, ಇರಾಣ, ಅಫಗಾಣಿಸ್ತಾನಗಳಲ್ಲಿ ಸಹ ಇಲ್ಲ.

ಪಾಕಿಸ್ತಾನ ನಿರ್ಮಾಣವಾದ ಅನಂತರ, ಪಠಾಣರು ಸ್ವಯಂನಿರ್ಣಯತತ್ವದ ಮೇಲೆ, ಪಠಾಣಿಸ್ತಾನವನ್ನು ನಿರ್ಮಿಸಲು, ಸರಹದ್ದು ಪ್ರಾಂತ, ಬಲೂಚಿಸ್ತಾನ, ಡ್ಯೂರೆಂಡ ಲಾಯಿನಿನ ಆಚೆಯಲ್ಲಿದ್ದ ಸ್ವತಂತ್ರ ಗುಡ್ಡಗಾಡು ಪ್ರದೇಶ, ಇವುಗಳನ್ನೊಡಗೊಂಡು, ಒಂದು ರಾಷ್ಟ್ರ ನಿರ್ಮಿಸಬೇಕು. ಅದು ಹಿಂದ ಪಾಕಿಸ್ತಾನಗಳ ಸಂಗಡ ಸ್ನೇಹದಿಂದಿರಬೇಕು—ಎಂಬುದೇ ಪಠಾಣರ ಹೆಬ್ಬಯಕೆ.

ಪಠಾನರಿಗೆ ಸ್ವಯಂನಿರ್ಣಯಾಧಿಕಾರ

ಪುಶ್ತು ಭಾಷೆಯಾಡುವ ಜನಾಂಗದವರ ಬಗ್ಗೆ ಸ್ವಯಂನಿರ್ಣಯ ತತ್ವದಂತೆ ಆಚರಿಸುವ ಹಕ್ಕು ದೊರೆಯಬೇಕು. ಇದು ಸಿಕ್ಕನಂತರ ಗಡಿ ನಿರ್ಣಯವಾಗಬೇಕು ಎಂಬುದು ಅಫಗಾನರ ಬಯಕೆಯಾಗಿದೆ.

ಸರಹದ್ದುಪ್ರಾಂತ, ಬಲೂಚಿಸ್ತಾನಗಳಂತೆ ಸ್ವತಂತ್ರ ಗುಡ್ಡಗಾಡು ಪ್ರದೇಶವನ್ನು ತನ್ನಲ್ಲಿ ಸೇರಿಸಿಕೊಂಡು ಬಿಡಬೇಕೆಂದು ಪಾಕಿಸ್ತಾನದವರ ಹಂಚಿಕೆಯಾಗಿದೆ. ಈ ಪ್ರಕಾರ ಪಠಾನ, ಪಾಕಿಸ್ತಾನ, ಅಫಗಾಣಿಸ್ತಾನದವರ ಬಯಕೆ ಭಿನ್ನವಾಗಿವೆ.

ಅಫಗಾಣಿಸ್ತಾನವು ಸ್ವತಂತ್ರ ರಾಷ್ಟ್ರವಿದ್ದದ್ದರಿಂದ ಅದಕ್ಕೆ ತನ್ನ ಬೇಡಿಕೆಗಳನ್ನು ಬಹಿರಂಗವಾಗಿ ಮಂಡಿಸಿ ವಿಚಾರವಿನಿಮಯ ಮಾಡಲು ಯಾವ ಅಡ್ಡಿ ಇದ್ದಿಲ್ಲ. ಆ ಪ್ರಕಾರ ಅದು ಈಗ ಹಿಂದುಸ್ತಾನದಲ್ಲಿ ಅಫಗಾನರರಾಯಭಾರಿಗಳಾದ ಸರದಾರ ನಜೀಬಖಾನರನ್ನು ಪಾಕಿಸ್ತಾನದ, ಗವರ್ನರಜನರಲ್, ಮುಖ್ಯಮಂತ್ರಿ, ಪರರಾಷ್ಟ್ರಮಂತ್ರಿ ಮುಂತಾದವರ ಕೂಡ ವಿಚಾರವಿನಿಮಯ ಮಾಡಲು ೧೯೪೭ ರ ಅಂತ್ಯದಲ್ಲಿ ಕರಾಚಿಗೆ ಕಳಿಸಲಾಗಿತ್ತು. ಇದರಿಂದ ಅನೇಕ ತಪ್ಪು ತಿಳುವಳಿಕೆಗಳು ಅಳಿದು ಹೋಗಿ ಎರಡೂ ನೆರೆಯ ರಾಷ್ಟ್ರಗಳಲ್ಲಿ ಸ್ನೇಹಸಂಬಂಧವು ಬೆಳೆಯಬಹುದೆಂದು ಆಶೆ ಮಾಡಲಾಗಿತ್ತು. ಅದೇ ವಾತಾವರಣದಲ್ಲಿ ೧೯೪೮ ನೆಯ ಇಸ್ವಿ ಸಹ ದಾಟಿ ಹೋಯಿತು. ಪರಂತು ೧೯೪೯ ನೆಯ ಇಸ್ವಿಯ ಆರಂಭಕ್ಕೆ ಪಾಕಿಸ್ತಾನದ ಗವ್ಹರ್ನರ ಜನರಲ್ಲರಾದ, ಖಾಜಾ ನಾಜೀಮುದ್ದೀನರು ಸರಹದ್ದು ಪ್ರಾಂತಕ್ಕೆ ಭೆಟ್ಟಿಕೊಟ್ಟಾಗ ಸ್ವತಂತ್ರ ಗುಡ್ಡಗಾಡು ಪ್ರಾಂತವು ಪಾಕಿಸ್ತಾನದ ಒಂದು ಅಂಗವಿರುವದೆಂದು ಸಾರಿದ್ದರಿಂದ ಮತ್ತೆ ಈ ಜಗಳವು ತಲೆಯೆತ್ತಿ ವಿಕೋಪಕ್ಕೆ ಹೋಗಹತ್ತಿದೆ.

ಅಫಗಾನರ ಸಂಶಯ .

ಕೆಂಪಂಗಿಯವರನ್ನು ಹತ್ತಿಕ್ಕಿ ತನ್ನ ಬಲದಿಂದ ಪಠಾಣಿಸ್ತಾನದ ಆಂದೋಲನವನ್ನು ಮುರಿಬಡಿಯುವ ಉದ್ದೇಶ ಪಾಕಿಸ್ತಾನಕ್ಕಿದೆಯೆಂದು ಅಫಗಾನರಿಗೆ ಸಂಶಯವಿತ್ತು. ಇದಕ್ಕೆ ಖಾಜಾ ನಾಜೀಮುದ್ದೀನರು, ಸ್ವತಂತ್ರ ಗುಡ್ಡಗಾಡು ಪ್ರದೇಶವು ಪಾಕಿಸ್ತಾನದ ಅಂಗವಾಗಿದೆಯೆಂದು ಸಾರಿದ್ದರಿಂದ ಮತ್ತಷ್ಟು ಪುಟ ಕೊಟ್ಟಂತಾಗಿದೆ. ಇವರಿಬ್ಬರ ಜಗಳದಲ್ಲಿ ಪಾಶ್ಚಾತ್ಯರು ತಮ್ಮ ಕಾಲು ಚಾಚಲು ಹವಣಿಸುತ್ತಿರುವದು ಸಹಜವಿದೆ. ಇಂಥ ಸುಸಂಧಿಯನ್ನು ಅವರು ಕಳೆದುಕೊಳ್ಳುವವರೇ ? ಆದರೆ ಪಠಾಣಿಸ್ತಾನವು ನಿರ್ಮಾಣವಾದರೆ ಇಲ್ಲವೆ, ಖಾನ ಬಂಧುಗಳ ಕೈಯಲ್ಲಿ ರಾಜ್ಯದಾಡಳಿತ ಬಂದರೆ ಅವರಿಗೆ ಈ ಸಂಧಿ ಸಾಧಿಸಲು ಅವಕಾಶ ಸಿಗಲಿಕ್ಕಿಲ್ಲೆಂದು ಧಾರಾಳವಾಗಿ ಹೇಳಬಹುದು.

ಜಗಳದ ಮುಕ್ತಾಯವಾಗಲು ಎರಡೇ ಮಾರ್ಗಗಳಿವೆ. ಒಂದು ಯುದ್ಧ, ಎರಡನೆಯದು ಪರಸ್ಪರ ಸಂಶಯ ನಿವಾರಿಸಿಕೊಳ್ಳುವದು. ಪರಂತು ಮೊದಲನೆಯ ಮಾರ್ಗಕ್ಕೆ ಈ ಎರಡೂ ದೇಶಗಳು ಸಿದ್ಧವಿಲ್ಲ. ಇನ್ನು ಎರಡನೆಯ ಮಾರ್ಗ ಹಿಡಿಯದೆ ಗತ್ಯಂತರವಿಲ್ಲ. ಆರಂಭದಲ್ಲಿ ಇದೇ ಮಾರ್ಗ ಸ್ವೀಕರಿಸಲಾಗಿತ್ತೆಂದು ಹೇಳಲಾಗಿದೆ. ಸದ್ಯದ ಪರಿಸ್ಥಿತಿ ನಿರಾಶಾಜನಕವಾಗಿದೆ. ಆದರೂ ಈ ಪ್ರಶ್ನೆಯನ್ನು ಸಂ. ರಾಷ್ಟ್ರಸಂಘಕ್ಕೊಯ್ಯುವದೊಂದೇ ಕೊನೆಯಮಾರ್ಗವಾಗಿ ಉಳಿದಿದೆ. ಒಂದುವೇಳೆ ಈ ಪ್ರಶ್ನೆಯು ಸಂ. ರಾಷ್ಟ್ರಸಂಘಕ್ಕೆ ಹೋದಲ್ಲಿ ಸ್ವಯಂನಿರ್ಣಯತತ್ವದಂತೆಯೆ ಅಲ್ಲಿ ನಿರ್ಣಯವಾಗುವದರಲ್ಲಿ ಸಂದೇಹವಿಲ್ಲ. ಈ ಪ್ರಕಾರ ನಿರ್ಣಯವಾದರೆ ಮುಂದಾಗುವದನ್ನು ಹೇಳಲು ಯಾರಿಗೂ ಬರುವಂತಿಲ್ಲವಾದರೂ, ಅಫಗಾನರಿಗೆ ಜಯದ ಆಶೆ ಹೆಚ್ಚಿದೆಯೆಂದು ಮಾತ್ರ ನಾವು ಹೇಳದಿರಲಾರೆವು.

ಅಗ್ನಿತಾಂಡವ !

ಫಿಜಿದ್ವೀಪ ವಾಸಿಗಳು ವರ್ಷಕ್ಕೊಮ್ಮೆ ಅಗ್ನಿತಾಂಡವದ ಉತ್ಸವವನ್ನು ನಡೆಸುತ್ತಾರೆ. ಅದಕ್ಕೆ "ವಿಲಾ ವಿಲಾರಿವೊ" ಎಂದು ಹೆಸರು. ಆಗ ಆ ದ್ವೈಪಾಯನರು ಬೆಳ್ಳಗಾಗುವರೆಗೆ ಕಾದ ಬಂಡೆಗಳ ಮೇಲೆ ಬರಿಗಾಲಿನಿಂದ ನರ್ತಿಸುವುದನ್ನು ಕಂಡು ಅನೇಕ ಪ್ರವಾಸಿಗಳು ಆಶ್ಚರ್ಯಪಟ್ಟಿದ್ದಾರೆ. ನೋಡಿದರೆ ಆ ನರ್ತಕರಿಗೆ ಏನೂ ನೋವುಂಟಾಗುವುದಿಲ್ಲವೆಂಬಂತೆ ಕಾಣುತ್ತದೆ. ಉರಿಯುತ್ತಿರುವ ಬಂಡೆಗಳ ಮೇಲೆ ಅವರು ಪಾದರಸದ ಚಟುವಟಿಕೆಯಿಂದ ಅತ್ತಿತ್ತ ನಡೆಯುತ್ತಾರೆ. ಆದರಿಂದ ಅವರ ಕಾಲಲ್ಲಿ ಒಂದು ಗುಳ್ಳೆಕೂಡ ಏಳುವುದಿಲ್ಲ.

ಸುಮಾರು ೩೦ ಅಡಿ ಸುತ್ತಳತೆಯ ಒಂದು ಆಳವಿಲ್ಲದ ಗುಂಡಿಯನ್ನು ತೋಡಿ ಅದರಲ್ಲಿ ಕಟ್ಟಿಗೆ ಹಾಕಿ ಬೆಂಕಿ ಹಚ್ಚುತ್ತಾರೆ; ಅನಂತರ ಬಂಡೆಗಳನ್ನು ಅದರಲ್ಲಿ ಉರುಳಿಸುತ್ತಾರೆ. ಅವು ಒಪ್ಪತ್ತಿಡಿ ಕಾದು ಬೆಳ್ಗೆಂಡವಾಗುತ್ತವೆ. ಅನಂತರ ಹಸಿರೆಲೆಗಳನ್ನು ಆ ಬೆಳ್ಗಾವಿನ ಕಲ್ಲುಗಳ ಮೇಲೆ ಪಸರಿಸಿ ಅದರಿಂದುಂಟಾಗುವ ಹಬೆ (ಉಗಿ) ನಾಟಕೀಯವಾಗಿ ಮೇಲೇಳುತ್ತಿರುವಾಗ ಅಗ್ನಿನರ್ತಕರ ನೃತ್ಯ ಪ್ರಾರಂಭವಾಗುತ್ತದೆ. ಆದರೆ ಎಲ್ಲ ವ್ಯಾಪಾರದಲ್ಲೂ ಮೋಸವಿದ್ದೇ ಇದೆ. ಈ ಬೆಂಕಿಗುಣಿತದಲ್ಲೂ ಒಂದು ಗುಟ್ಟಿದೆ. ಆ ಕಲ್ಲುಗಳು ಜ್ವಾಲಾಮುಖಿಜನ್ಯವಿರುವದರಿಂದ ಸಹಸ್ರರಂಧ್ರಯುಕ್ತವಾಗಿವೆ. ಆದರಿಂದ ಅವು ನೋಡಲು ಕಾದು ಬೆಳ್ಳಗಾದರೂ ಅವು ಉಷ್ಣತೆಯನ್ನು ಉಳಿಸಿಕೊಳ್ಳುವುದಿಲ್ಲ. ದಪ್ಪವಾದ ಹಸಿರೆಲೆಗಳು ನರ್ತಕರ ಪಾದಗಳನ್ನು ರಕ್ಷಿಸುತ್ತವೆ!

❋ ಬಂಗಾಲ ಸರಕಾರದ ಸಾರಿಗೆ ಶಾಖೆಯವರಿಗೆ ಬೇಕಾಗಿದ್ದ ೩೧೪ ಮೋಟಾರ ಡ್ರಾಯವರರ ಸ್ಥಾನಗಳಿಗೆ ೫೦ ಸಾವಿರ ಅರ್ಜಿಗಳು ಬಂದು ಅವುಗಳ ಪರಿಶೀಲನೆಗೆ ೪ ಪ್ರತ್ಯೇಕ ಅಧಿಕಾರಿಗಳನ್ನೇ ನೇಮಿಸಬೇಕಾಯಿತು. ಅರ್ಜಿದಾರರಲ್ಲಿ ಅನೇಕ ಪದವೀಧರರೂ ಇದ್ದಾರಂತೆ !

ನಗೆಸುದ್ದಿ—ಹೊಗೆಸುದ್ದಿ

❋ ಮದ್ರಾಸ ಶಾಸನ ಸಭೆಯಲ್ಲಿ ಹಿಂದಿನ ಮುಖ್ಯಮಂತ್ರಿ ರಾಮಸ್ವಾಮಿಯವರ ಕಾಲದಲ್ಲಿ ಮಂತ್ರಿಗಳ ಉಪಯೋಗಕ್ಕಾಗಿ ಕೊಂಡ (ಬೆಲೆ ೧೬.೭ ಲಕ್ಷ ರೂಪಾಯಿ) "ಹನುಮಾನ್" ಎಂಬ ವಿಮಾನದ ಹೆಸರನ್ನು ಹೊಸ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು (ಕುಮಾರಸ್ವಾಮಿ ದೇವನ ವಾಹನವಾದ) "ಮಯೂರ"ವೆಂದು ಬದಲಿಸುವರೆ? ಎಂದೊಬ್ಬ ಸ್ತ್ರೀ ಸದಸ್ಯರು ಕೇಳಿದರು.

❋ ಆಲಪ್ಪಿ (ಕೊಚ್ಚಿ ತಿರ್ವಾಂಕೂರ ಒಕ್ಕೂಟ)ಯಲ್ಲಿ ಈಚೆಗೆ ರಕ್ತದ ಜಡಿಮಳೆ ಬಿದ್ದಿತೆಂದು "ಇಂಡಿಯನ್ ಎಕ್ಸಪ್ರೆಸ್" ವರದಿ. ಇದರಿಂದ ಬಿಳಿ ಗೋಡೆಗಳು ಕೆಂಪಾದವಂತೆ. ಮಳೆ ನೀರನ್ನು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಲಾಗಿ ಅದರಲ್ಲಿ ರಕ್ತದಲ್ಲಿರುವ ಮಾದರಿಯ ಕೆಂಪು ಅಣುಗಳು ಕಾಣಿಸಿಕೊಂಡವು. ಕೆಲ ತಾಸುಗಳ ಮೇಲೆ ನೀರು ತಿರುಗಿ ವರ್ಣರಹಿತವಾಯಿತಂತೆ.

❋ ಎರಡೇ ಕಾಲುಗಳಿದ್ದರೂ ಎರಡು ತಲೆ ಮತ್ತು ನಾಲ್ಕು ಕೈಗಳುಳ್ಳ ಮಗುವೊಂದು ರಾಜಕೋಟದ ಗೋಪಾಲಧರ ಎಂಬ ಹಳ್ಳಿಯಲ್ಲಿ ಒಬ್ಬ ರಜಪೂತ ಗೃಹಿಣಿಗೆ ಹುಟ್ಟಿದೆ. ಬಿಹಾರದ ಹೋಕ್ಷಿ ಎಂಬ ಹಳ್ಳಿಯಲ್ಲಿ ಒಬ್ಬ ಆದಿವಾಸಿ ಸ್ತ್ರೀಗೆ ಬಾಲವುಳ್ಳ ಒಂದು ಮಗು ಹುಟ್ಟಿ ಇನ್ನೂ ಬದುಕಿದೆ.

❋ ಸಹರಾಣಪೂರ (ಬಿಹಾರ)ದಲ್ಲಿ ಅದೇ ಮದುವೆ ಮುಗಿಸಿಕೊಂಡು ದಿಬ್ಬಣದೊಡನೆ ಬಸ್ಸಿನಲ್ಲಿ ಬರುತಿದ್ದ ಮದುಮಗನೊಬ್ಬನು ವಿಪರೀತ ಸೆಕೆಯ ಅಘಾತದಿಂದ ಬಸ್ ನಿಲ್ದಾಣದಲ್ಲೇ ಬವಳಿಬಂದು ಸತ್ತನು. ಉದಕಮಂಡಲದಲ್ಲಿ ಮದುವೆಯ ಮಂಟಪದಲ್ಲೇ ಒಬ್ಬ ಮದುಮಗನಿಗೂ ಅವನ ಅತ್ತೆಯರಿಗೂ ಸಿಡಿಲುಬಡಿದು ಅವರೂ ಸತ್ತರು.

❋ ಖಂಬಾತ (ಅಹಮದಾಬಾದದಿಂದ ೫೦ ಮೈಲು) ರೈಲ್ವೆ ಪೊಲಿಸಬಳಿ ೩ ಚೀಲ ತುಂಬ ಗೆದ್ದಲುಹತ್ತಿದ ೫ ರೂಪಾಯಿ ನೋಟುಗಳನ್ನು ಯಾರೋ ಒಗೆದು ಹೋಗಿದ್ದರು. ಅವುಗಳ ಬೆಲೆ ಸುಮಾರು ೨೫೦೦೦ ರೂಪಾಯಿಯಾಗಬಹುದು.

ನನ್ನ ಹೆಂಡತಿ

ಲೇಖಕ:— ಅನಂತ ಪುರಾಣಿಕ

[illegible]ಸುತ್ತಾ ಇರುವದು ನನ್ನ ಖಾಸ ಹೆಂಡತಿಯ ಚಿತ್ರ. ನನಗೆ ಗಂಟು ಬಿದ್ದಂತಹ ಜಾತಿಯ ಹೆಣ್ಣುಮಕ್ಕಳು ನನ್ನಂತಹ ಇನ್ನೂ ಅನೇಕ ನಿರುಪದ್ರವಿ ಜೀವಿಗಳಿಗೆ ಜೋತು ಬಿದ್ದಿರಬಹುದು; ಗೋಳಾಡಿಸುತ್ತಿರಬಹುದು.

ಇನ್ನೂ ಆಕೆ ಹೆಂಡತಿಯಾಗಿದ್ದಿಲ್ಲ. ಅವಳನ್ನು ನೋಡಲು ಹೋದಾಗಿನ (ಕನ್ಯಾಪರೀಕ್ಷೆಗೆ) ಮಾತನ್ನು ಸ್ವಲ್ಪದರಲ್ಲಿಯೇ ತಿಳಿಸುವೆ. ಮೊದಲೇ ಹೇಳಿಬಿಡುವೆ-ಅವಳಿಗೆ ಇಂಗ್ಲೀಷ ಬರುತ್ತಿದೆ. ನಾನೇ ಅವಳನ್ನು ನೋಡಲು ಹೋಗಿದ್ದೆನೋ ಇಲ್ಲವೆ ಅವಳೇ ನನ್ನನ್ನು ನೋಡಲು ಕರೆಸಿದ್ದಳೋ ನನಗೆ ತಿಳಿಯಲೇ ಇಲ್ಲ. ಹೆಂಗಸು–ಲಗ್ನವಾಗದ ಹುಡುಗಿ–ಅಂದ ಮೇಲೆ ಸ್ವಲ್ಪಾದರೂ ಲಜ್ಜೆ ಅಥವಾ ನಾಚಿಕೆ ಇರಬೇಕೋ ಬೇಡವೋ! ನಾವೆಲ್ಲರೂ ಎದುರಿಗೆ ಕುಳಿತಿರುವಾಗ ನನ್ನನ್ನು ದಿಟ್ಟಿಸಿ ನೋಡುವದು ಯೋಗ್ಯವೆ? ನನಗೆಯೇ ನಾಚಿಕೆ ಬಂದಿತು. ಅವಳಲ್ಲಿ ಲಜ್ಜೆಯನ್ನು ಹುಟ್ಟಿಸಬೇಕೆಂದು ನಾನೇ ತಲೆ ಕೆಳಗೆ ಹಾಕಿದೆ. ಆಗಲೇ ನನಗೆ ಎನಿಸಿತ್ತು—ಇವಳು ಗಂಡುರಾಮಿ. ಎಂದು.

ಕನ್ಯಾ ನೋಡಲು (!) ಹೋದಮೇಲೆ ಚಹ ಆಗುವದು ಅಸ್ವಾಭಾವಿಕವಲ್ಲ. ಅವಳೇ ನನಗೆ ಚಹ ತಂದಳು. ಚಹ ಇಟ್ಟು ತೆರಳುವಾಗ ಕಾ[illegible]ಪ್ಪಿಗೆ ತಾಕಿ ನನ್ನ ಮರ್ಸರೈಜ್ಡ ಧೋತರದ ಮೇಲೆ ಚಲ್ಲಿತು. ಆಹೊತ್ತೆ ಹೊಸ ದೋತರ ಉಟ್ಟಿದ್ದೆ. ಮೊದಲೇ ರೇಶನಿಂಗ ಕಾಲ. ಒಂದು ವರುಷಕ್ಕೆ ಸಿಗುವದು ಒಂದೇ ಒಂದು ಜೋಡಿ ದೋತರ. ಅದಕ್ಕೆಂತಲೇ ಒಮ್ಮೊಮ್ಮೆ ಬಿ. ಎಮ್. (ಬ್ಲ್ಯಾಕ್ ಮಾರ್ಕೆಟ್) ಮಾಡಬೇಕಾಗುತ್ತಿತ್ತು. ಆ ಹೊತ್ತು ಉಟ್ಟಿದ್ದು ಬಿ. ಎಮ್. ಧೋತರ. ವರದಕ್ಷಿಣೆಯಲ್ಲಿ ಇದರ ಹಣ ಅಷ್ಟು (B. M. ರೇಟು) ಕೂಡಿಸಿಯೇ ಹೇಳಬೇಕೆಂದು ಮಾಡಿದ್ದೆ. ಇರಲಿ. ಇದನ್ನೂ ತಾಳಿಕೊಂಡಿದ್ದೆ. ಅವಳು ಸುಮ್ಮನೆ ಹೋಗಿದ್ದರೆ ಈ ವಿಷಯ ಅಲ್ಲಿಗೇ ಮುಕ್ತಾಯವಾಗುತ್ತಿತ್ತು. Excuse me (ಕ್ಷಮಿಸಿರಿ) ಎನ್ನಬೇಕೆ? ನನ್ನ ತಂದೆ ತಾಯಿ, ನಾಲ್ಕುಮಂದಿ ಊರ ಗಣ್ಯ ಹಿರಿಯರು ಕುಳಿತಿರುವಾಗ ಹೀಗೆ ನುಡಿಯಬೇಕೆ? ನನಗೂ ಸ್ವಲ್ಪ ಕಾವು ಏರಿತು. (ಅದು ಕೇವಲ ಚಹದ ಕಾವೋ ಏನೊ?) ಬಾಯಿ ತೆರೆದೆ. . .ಆದರೆ ಅವಳ ಮುಗುಳು ನಗೆ—ಎಂದೂ ಮರೆಯಲಾರದ ಆ ಮುಗುಳು ನಗೆಯನ್ನು-ಕಂಡು ತೆರೆಬಾಯಿ ಮಾಡಿಕೊಂಡು ಸುಮ್ಮನೇ ಕುಳಿತೆ. ಏನು ಮೋಹಿನಿ ಮಂತ್ರವಿತ್ತೋ ಆ ನಗೆಯಲ್ಲಿ?

ಇದೆಲ್ಲ ಲಗ್ನಕ್ಕಿಂತ ಮುಂಚಿನ ಮಾತು. ಮದುವೆ ನಡೆದಾಗಿನ ಸ್ವಾರಸ್ಯ ಘಟನೆಗಳನ್ನಷ್ಟು ತಿಳಿಸುವೆ. ಹೆಂಗಸರ ಪ್ರೀತಿಯ ಭೂಮದೂಟದಲ್ಲಿ ನಡೆದ ಘಟನೆಯಿದು. ನನ್ನ ಬಲಕ್ಕೆ ಆಕೆ ಕುಳಿತಿದ್ದಳು. (ಅವಳನ್ನು ಮದುವೆಯಾಗಲು ಹೇಗೆ ಒಪ್ಪಿದೆ ಎಂಬುದನ್ನು ಕೇಳಬೇಡಿ). ಎಡಕ್ಕೆ ನನ್ನ ತಾಯಿ ಮತ್ತು ಇತರ ಬಳಗದ ಜನ ಕುಳಿತಿದ್ದರು. ನಮ್ಮ ಪುರೋಹಿತ ರಾಮಾಚಾರ್ಯರು ಅವಸರದ ವೇಳೆಯಲ್ಲಿ ಪಾಪ! ಮಡಿಸೀರೆಯನ್ನು ಪೀತಾಂಬರವೆಂದೇ ತಿಳಿದು ಉಟ್ಟುಕೊಂಡು ಬಂದಿದ್ದರು. ಕತ್ತಲೆಯ ಹೊತ್ತು, ಅವರದಾದರೂ ಏನು ತಪ್ಪು? ಮೊದಲು ನಾವಾರೂ ನೋಡಿಯೇ ಇದ್ದಿಲ್ಲ. ಇವಳು.ನನ್ನ ಹೆಂಡತಿ ಕೇವಲ ಮುಂಜಾನೆಯಿಂದ ಹೆಂಡತಿ ಎನ್ನಿಸಿಕೊಂಡಂತಹ ಸ್ತ್ರೀ-ನನ್ನನ್ನು ಅಲುಗಿಸಿ ತೋರಿಸಬೇಕೆ? ಅವಳು ನಕ್ಕದ್ದನ್ನು ನೋಡಿ ನಾನು ಹಲ್ಲು ಕಿರಿಯಲೇಬೇಕಾಯಿತು. ಇದನ್ನು ಕಂಡು ನನ್ನ ತಾಯಿಯ ಮುಖದ ಮೇಲಿನ ನರಗಳು ಸ್ಪಷ್ಟವಾಗಿ ಕಾಣಿಸಹತ್ತಿದವು. ನನ್ನ ಪರಿಸ್ಥಿತಿ ಪಂಚೇತಿಗಿಟ್ಟಿತು. ಮ್ಯಾಟ್ರಿಕ್‌ದಲ್ಲಿ ಕಲಿಸಿದ To be between two fires (ಉಭಯ ಸಂಕಟ) ಈ Idiom ದ ಅರ್ಥ ಆಗ ಚೆನ್ನಾಗಿ ತಿಳಿಯಿತು. ಹಾಡುಗಳ ಯುದ್ಧವೊಂದು ಆ ಕಡೆಗೆ ನಡೆದಿತ್ತು. ಯಾರೋ ಭೂಮದ ಹಾಡು ಹಾಡುತ್ತಿರುವಾಗ ನಡುವೆಯೇ ಹಾಡುವದನ್ನು ನಿಲ್ಲಿಸಿದರು. ಪಾಪ! ಮುಂದಿನದನ್ನು ಮರೆತಿರಬಹುದು. ನನ್ನ ಮಗ್ಗಲಿಗೆ ಕುಳಿತ ಹೆಂಡತಿ ಮುಂದಿನದನ್ನು ಹಾಡಿಬಿಡಬೇಕೆ? ಅದೂ ತನ್ನ (ನನ್ನದೂ ಮತ್ತೆ!) ಲಗ್ನದಲ್ಲಿಯೆ? ಮದುಮಗಳು ಅಂದರೆ-ನಯ, ನಾಜೂಕು, ಲಜ್ಜೆ ಇವುಗಳ ರಸಘಟ್ಟಿ ಇರಬೇಕು. ಸ್ವಲ್ಪ ಇಂಗ್ಲೀಷ ಬಂದರೇನಾಯಿತು? ಇಂಗ್ಲೀಷ ಬಂದ ಹೆಣ್ಣುಗಳೆಲ್ಲ ನಾಚಿಕೆ ಬಿಡಬೇಕೆಂದಿದೆಯೆ? ಅವಳ ವಾಚಾಳಿತನ ನನಗೆ ಎಳ್ಳಷ್ಟೂ ಸರಿಬರಲಿಲ್ಲ. ಕೆಂಗಣ್ಣಿನಿಂದ ಅವಳೆಡೆಗೆ ನೋಡಹತ್ತಿದೆ. ಆದರೆ ಮತ್ತೆ ಘಾತಮಾಡಿತು.ಆ ಸುಡುಗಾಡು ಮುಗುಳು ನಗೆ.

ಗಂಡನ ಹೆಸರನ್ನು ಎಷ್ಟು ಜನ ಮದುಮಕ್ಕಳು ಧೈರ್ಯದಿಂದ ಹೇಳುವರು? ಆದರೆ ನನ್ನ ಹೆಂಡತಿ ಇದಕ್ಕೊಂದು ಅಪವಾದ. ಅವಳಿಗೆ ನನ್ನ ಹೆಸರು ಹೇಳುವದೆಂದರೆ ಒಂದು ಸುಗ್ಗಿ. ಲಗ್ನದಲ್ಲಿ (ನನ್ನದೇ ಮತ್ತೆ!) ಅವಳಿಗೆ, ಗಂಡನ (ಅರ್ಥಾತ್ ನನ್ನ) ಹೆಸರು ಹೇಳು ಎನ್ನುವದೇ ತಡ, ಪ್ರಾರಂಭಿಸುವಳು, ತನ್ನ ಬಾಯಿ ಪಾಠ ಮಾಡಿದ ವಾಕ್‌ಪ್ರವಾಹವನ್ನು. "ದುಡ್ಡು ಕೊಟ್ಟು ಹಚ್ಚೋದು; ಎರಡು ದುಡ್ಡು ಕೊಟ್ಟು ಬಿಡಿಸೋದು" ಈ ಜಾತಿಯವಳು. ಇನ್ನೂ ಒಂದು ರೋಮಾಂಚಕಾರಕ ವಿಚಾರವಿತ್ತು–ನನ್ನನ್ನು ಹೆಸರುಗೊಂಡೇ ಕೂಗಬೇಕೆಂಬುದು. ಏಕೋ ಅದು ಅಮಲಿನಲ್ಲಿ ಬರಲಿಲ್ಲ. ನನ್ನ ಸುದೈವ.

ಮೆರವಣಿಗೆಯದೊಂದು ರಾದ್ಧಾಂತವಾಯಿತು. ನಿಯಮದಂತೆ ರಾತ್ರಿ ಒಂದು ಗಂಟೆಗೆ ಮೆರವಣಿಗೆ ಹೊರಟಿತು. ಜನವೂ ಹೆಚ್ಚು ನೆರೆದಿತ್ತು. ಆದರೂ ಗುಂಗಿನಲ್ಲಿಯೇ ಜನ ನಡೆಯುತ್ತಿತ್ತು. ಗುಂಗು ಅಂದರೆ ಮದ್ಯ ಇಲ್ಲವೇ ಅಫುವಿನದಲ್ಲ, ನಿದ್ರೆಯ ಗುಂಗು. ಎಷ್ಟೋ ಜನರಿಗೆ ಜೋಲೀ ಹೊಡೆದ ಪರಿಣಾಮವಾಗಿ ತಮಗೆ ತಿಳಿಯದಂತೆ ಬುಗುಟಿಗಳು ಎದ್ದಿದ್ದವು. ಟಾಂಗಾದಲ್ಲಿ ಕುಳಿತಂತಹ ನನ್ನ ಮತ್ತು ಆಕೆಯ ತಲೆಗಳು ಬಡಿದಾಡಿ ಬೇಸತ್ತವು. ಆವಳ ತಲೆ ಬೇಸತ್ತು ನನ್ನ ಹೆಗಲಮೇಲೆ ವಿಶ್ರಮಿಸಿತು. ಊರಿನ ಪ್ರಮುಖ ಜನದ ಮುಂದೆ ಈ ರೀತಿ ಅಭಾಸವಾಗಗೊಡಬಾರದೆಂದು ಅವಳನ್ನು ಚುಚ್ಚಿ ಎಬ್ಬಿಸಲು ಪ್ರಯತ್ನಪಟ್ಟೆ. (ನನ್ನ ಮನಸ್ಸಿನಲ್ಲಿ-ನಿಜವಾಗಿ ಹೇಳಬೇಕೆಂದರೆ ಅವಳ ತಲೆ ಇನ್ನೂ ನನ್ನ ಹೆಗಲ ಮೇಲೆಯೇ ಇರಲಿ ಎನ್ನಿಸುತಿತ್ತು.) ಮನಕ್ಕಂಜದಿದ್ದರೂ ಜನಕ್ಕಂಜಬೇಕಲ್ಲ! ಎಬ್ಬಿಸಿದೆ. ಸಿಡುಕಿನ ಉತ್ತರ ಬಂತು; ಅದೂ ಇಂಗ್ಲೀಷಿನಲ್ಲಿ Why are you troubling me in this dead night ಈ ಸರಿರಾತ್ರಿಯಲ್ಲೇಕೆ ನನ್ನ ಕಾಡುತ್ತೀರಿ? ನನಗೆ ಇಂಗ್ಲೀಷ ಬರುತಿರಲಿಕ್ಕಿಲ್ಲೆಂದು ತಿಳಿದಿರಬಹುದು.(ಆಗ) ನಾನೂ ಆಗಲೇ ಕೇಳಿಯೇ ಬಿಡಬೇಕೆಂದು ಮಾಡಿದ್ದೆ–ಕಂಡೊನೇಶನ್ ಹತ್ತಿಯಾಗಲಿ ಹೇಗೇ ಆಗಲಿ ಮ್ಯಾಟ್ರಿಕ್ ಪಾಸಾದದ್ದು ಸುಳ್ಳೇ ಎಂದು. ಹೇಗಾದರೂ ನನ್ನ ಕೈಯಲ್ಲಿಯೇ ಇರುವವಳು; ಪ್ರಸಂಗ ಬಂದಾಗ ಹೇಳೋಣಾ ಅಂತ ಬಿಟ್ಟೆ.

ಲಗ್ನ ಆದಮೇಲಂತೂ ನನ್ನ ಸ್ಥಿತಿ ವಿಕೋಪಕ್ಕೆ ಹೋಯಿತು. ವಿಶ್ವಾಮಿತ್ರ ಹರಿಶ್ಚಂದ್ರನನ್ನು ಇಷ್ಟು ಗೋಳುಹೊಯ್ದುಕೊಂಡಿದ್ದನೋ ಇಲ್ಲವೊ! ನನ್ನನ್ನು ಮಾತ್ರ ಈ ಮಹಾರಾಯಳು ಗೋಳಾಡಿಸಿ ಗೋಡೆಗೆ ಹಾಯಿಸುತ್ತಾಳೆ. ಆಫೀಸಿನಿಂದ ಸ್ವಲ್ಪ ಲಗೂ ಬಂದೆನೆಂದರೆ 'ಯಾಕಿಷ್ಟು ಲಗೂ ಬಂದ್ರೀ? ಯಾವಾಗ ನೋಡಿದರೂ ಮನೀ ಮನೀ ಅಂತ ಬಡಕೊತೀರಿ. ನನ್ನೇನು ಯಾರು ಓಡಿಸಿಕೊಂಡು ಹೋಗೋದಿಲ್ಲ. ಸ್ವಲ್ಪ ಸೋಸಿಯಲ್ ಆಗಿರಲ್ಲಾ" ಎನ್ನುವಳು. ನಾನು ಅವಳ ಗಂಡ ಎಂಬುದನ್ನು ಮರೆತೇ ಬಿಡುವಳು. ಆಫೀಸೇನು ನಮ್ಮ ಮಾವನ ಮನೆಯೆ? ಶಾಪ್–ಆಕ್ಟ ಅಮಲಿನಲ್ಲಿ ಇದ್ದರೂ ಹೊರಗಿನ ಕೀಲಿ ಜಡಿದು ಒಳಗೆ ಕೆಲಸ ಮಾಡಬೇಕಾಗುವದು. ಅಂತಹದರಲ್ಲಿಯೂ ಚಾಣಾಕ್ಷತನದಿಂದ ತೀವ್ರ ಮನೆಗೆ ಬಂದು ಶಾಬಾಸ್‌ಗಿರಿ ದೊರಕಿಸಬೇಕೆಂದರೆ ಈ ತರಹದ ಪ್ರಸಾದ.

ಸ್ವಲ್ಪ ತಡಮಾಡಿ ಬಂದರಂತೂ ನನ್ನ ಗತಿ ದೇವರೇ ಬಲ್ಲ. ಬಾಗಿಲಂತೂ ಮುಚ್ಚಿಯೇ ಇರುವದು; ಅರ್ಥಾತ್ ಒಳಚಿಲಕ ಹಾಕಿಕೊಂಡಿರುವಳು. ಕಿವಿ ಮುಚ್ಚಿಕೊಂಡು ಒದರಿ ಒದರಿ ಗಂಟಲು ಹರಿದುಕೊಂಡ ಮೇಲೆ ಬಾಗಿಲು ತೆಗೆಯುವದು. ಪುಣ್ಯಕ್ಕೆ ನಮ್ಮ ಮನೆಯ ಸನಿಹದಲ್ಲಿ ಬೇರೆ ಮನೆಗಳಿಲ್ಲ ಅಂತೆಯೇ ಜನ ಮುಕುರುವ ಭೀತಿಯಿಲ್ಲ. ಈ ತರಹದ ಪ್ರಸಂಗಗಳನ್ನು ಅವಳು ಜಪ್ಪಿಸಿ ಕಾಯುತ್ತಿರುತ್ತಾಳೆ. ನಾನು ತಡಮಾಡಿ ಬಂದುದಕ್ಕೆ ಯೋಗ್ಯ ಕಾರಣ ಕೊಡಬೇಕು. ಯೋಗ್ಯ ಎಂದು ನಾನೇ ಅಂದುಕೊಳ್ಳಬೇಕು ಅಷ್ಟೆ. ಅವಳೇನೂ ಒಪ್ಪುವ ಹಾಗಿಲ್ಲ. ನಾನು ಒಮ್ಮೊಮ್ಮೆ ಸಿಟ್ಟಿಗೇಳುತ್ತಿದ್ದೆ (ಸಿಟ್ಟಿಗೇಳುವದೇ ಕಡಿಮೆ). ಆದರೆ ಅವಳು ನಕ್ಕಾದರೂ ಗೆಲ್ಲುತ್ತಾಳೆ, ಅತ್ತಾದರೂ ಗೆಲ್ಲುತ್ತಾಳೆ. ನಾನು ಅತ್ತರೂ ಸೋಲೋದೇ, ನಕ್ಕರೂ ಸೋಲೋದೆ.

ಒಮ್ಮೆ ಪರವೂರಿಂದ ನನ್ನ ಗೆಳೆಯನ ಹೆಂಡತಿ ಬಂದಿದ್ದಳು. ಬೇರೆ ಊರಿಂದ ಗೆಳೆಯನ ಹೆಂಡತಿ ಬಂದಾಗ ಆದರೋಪಚಾರ ಮಾಡುವದು ನಮ್ಮ ಕರ್ತವ್ಯ ಅಹುದಲ್ಲೋ? ಗೆಳೆಯನ ಹೆಂಡತಿಯ ಹೆಸರು ತಾರಕ್ಕ. "ಯಾವಾಗ ಬಂದ್ರೀ, ತಾರಕ್ಕಾ, ಬರ್ರೀ–ಬರ್ರೀ! ಭಾಳ ದಿವಸಕ್ಕೆ ಅಪರೂಪಧಾಂಗ ಬಂದೀರಿ ನಾಲ್ಕೆಂಟು ದಿನಾ ಅರಾಮ ಇದ್ದು ಹೋಗ್ರಿ ಇದೇನು ಮಂದೀ ಮನೀ ಅನ್ನೂ ಹಾಂಗಿಲ್ಲ ಏನಿಲ್ಲ, ನಮ್ಮ ವೆಂಕಣ್ಣ (ನನ್ನ ಗೆಳೆಯ—ತಾರಕ್ಕನ ಗಂಡ) ಏನಂತಾನೆ? ಅವನ್ನೂ ಕರಕೊಂಡು ಬರಬೇಕಾಗಿತ್ತಿಲ್ಲೋ!" ಎಂದು ನಾನೇ ಮಾತು ಮೊದಲು ಮಾಡಿದೆ—ಏಕೆಂದರೆ ನನ್ನ ಹೆಂಡತಿಯೇನು ಮಾತಾಡಿಸೋ ಲಕ್ಷಣ ಕಾಣಿಸಲಿಲ್ಲ. ಅಪಮಾನ ಆಗಬಾರದೂ ಎಂತ ನಾನು ಮಾತನಾಡಿಸಿದೆ. ನನ್ನಾಕೆಯ ಕಣ್ಣುಗಳು ಆಗಲೇ ಕೆಂಪಗಾಗಿದ್ದವು. "ನೀ ಹೀಂಗ ನೋಡಿದರ ನನ್ನ ತಿರುಗಿ ನಾ ಹ್ಯಾಂಗ ನೋಡಲೇ ನಿನ್ನ" ಎನ್ನಬೇಕೆಂದು ಮಾಡಿದ್ದೆ. ತಾರಕ್ಕನಾದರೂ ನೇರವಾಗಿ ನನಗೇ ಉತ್ತರಕೊಟ್ಟಳು, ಅರ್ಥಾತ್ ನನ್ನೊಡನೆ ಮೊದಲು ಮಾತನಾಡಿದಳು. ನನ್ನ ಹೆಂಡತಿಗೆ ಪಿತ್ತ ನೆತ್ತಿಗೇರಿತು, ಇದೇ "ಕವಿಸಮಯ"ದಲ್ಲಿಯೇ ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿಯ ಕೆಳಗಣ ಸಾಲುಗಳು ಇವಳು ಸಿಟ್ಟಿಗೆದ್ದ ಕಾರಣವನ್ನು ತಿಳಿಸಿದವು. ವಿಶ್ವಾಮಿತ್ರ ಇದ್ದಲ್ಲಿ ಅವಳ ಹೆಸರು ಹಾಕಿ ವಶಿಷ್ಠ ಇದ್ದಲ್ಲಿ ನನ್ನ ಹೆಸರು ತುಂಬಬೇಕು ಅಷ್ಟೆ!

ತೀವಿದೊಡ್ಡೋಲಗದ ನಡುವೆ ತನ್ನಂ ಮೊದಲೊಳ್
ಕೋವಿ ನುಡಿಸದ ಕೋಪದೊಂದಾ ವಶಿಷ್ಠಮುನಿ
ಯಾವುದಂ ಪೇಳ್ದುದದರಲ್ಲಿಂಬ
ಭಾಷೆಯೆರಡಖಿಳ ಜೀವಾವಳಿಯುಳಿ.

ಪಾಪ! ಆ ಹೆಣ್ಣುಮಗಳು ಊರಿಗೆ ಹೋಗುವವರೆಗೆ ಯಾರೊಡನೆಯೂ ಚನ್ನಾಗಿ ಮಾತಾಡಲಿಲ್ಲ. ತಾರಕ್ಕನಿಗೆ, ಊರಿಗೆ ಹೋಗುವ ಮುಂದೆ ಉಡುಗೊರೆ ಕೊಡಬೇಕೆಂದು ಒಂದು ಚನ್ನಾದ ಬೆಲೆಬಾಳುವ ಖಣ ತಂದಿದ್ದೆ-ಅದನ್ನು ನಾನೇ ಹೇಗೆ ಕೊಡೋದು ಎಂದು ಆಕೆಯ ಕೈಯಲ್ಲಿ ಕೊಟ್ಟೆ-. ತಾರಕ್ಕನಿಗೆ ಕೊಡು ಎಂದು. ಆದರೆ ತಾರಕ್ಕನಿಗೆ ಕೊಟ್ಟ ಖಣವೇ ಬೇರೆ. ಆ ಚೆನ್ನಾದ ಖಣ ಇವಳ ಟ್ರಂಕನ್ನು ಸೇರಿ ಬಹಳ ದಿವಸಗಳಾದ ಮೇಲೆಯೆ ನನಗೆ ಗೊತ್ತು.

ಸಂನ್ಯಾಸವನ್ನು ತೆಗೆದುಕೊಳ್ಳುವಷ್ಟರ ಮಟ್ಟಿಗೆ ವೈರಾಗ್ಯ ಬಂದಿದೆ. ಆದರೆ ಇನ್ನೊಂದು ಅಂಜಿಕೆ ಬಾಧಿಸುತ್ತಿದೆ. ನಾನು ಸಂನ್ಯಾಸಿ ಆದರೆ ಇವಳು ಸಂನ್ಯಾಸಿನಿಯಾಗಿ ಎಲ್ಲಿ ಬೆನ್ನು ಹತ್ತುವಳೋ ಎಂದು!

---

* ಆಫ್ರಿಕದ ಉತ್ತರ ತೀರದಲ್ಲಿರುವ ತಾಜೂರ ಎಂಬ ನದಿ ತಾಜೂರ ಕೊಲ್ಲಿಯಿಂದ ಒಳನಾಡಿಗೆ ಹಿಮ್ಮೊಗವಾಗಿ ಹರಿದು ಅಸ್ಸಲ್ ಎಂಬ ಕೆರೆಗೆ ಸೇರುತ್ತದೆ.

ಪ್ರಗತಿ ಮಾರ್ಗದಲ್ಲಿ ಮೈಸೂರು: ನರೇಂದ್ರರ ಬಗ್ಗೆ ಸಂಸ್ಥಾನ ಶಾಖೆಯ ನಿರ್ಣಯಗಳು: ಸಿಕ್ಕಿಂ ಸಂಸ್ಥಾನದ ಆಯಕಟ್ಟಿನ ಮಹತ್ವ

ಮೈಸೂರು ಸಾಲು ಹಿಡಿಯಿತು

ಕಳೆದ ವಾರ ಮೈಸೂರು ಶಾಸನ ಸಭೆಯಲ್ಲಿ ಮೈಸೂರು ಸಂಸ್ಥಾನದ ಇನ್ನೂ ಹಲವು ಅಧಿಕಾರಗಳನ್ನು ಕೇಂದ್ರಕ್ಕೆ ಒಪ್ಪಿಸಲಾಗುವದೇ ಎಂಬ ಪ್ರಶ್ನೆಯೆದ್ದಾಗ ಸರಕಾರದ ಪರವಾಗಿ ಬಂದ ಉತ್ತರ ಅಸ್ಪಷ್ಟವೂ ಹೇಳಿಟ್ಟು ಬೀಳುವಂತಿತ್ತು. ಮಂತ್ರಿಗಳು ಬಾಯಿಬಿಟ್ಟು ಒಪ್ಪದಿದ್ದರೂ ಇಂಥ ಸಂಧಾನ ತೆರೆಯ ಮರೆಯಲ್ಲಿ ನಡೆಯುತ್ತಿತ್ತೆಂಬ ಬಲವಾದ ಸಂಶಯವುಂಟಾಗಿತ್ತು. ಆ ಸಂಶಯ ಈಗ ಸತ್ಯವಾಗಿದೆ. ಮೈಸೂರು ಮಹಾರಾಜರು ಕೇಂದ್ರಕ್ಕೆ ಇನ್ನೂ ಹಲವು ಅಧಿಕಾರಗಳ ನ್ನೊಪ್ಪಿಸಿ ಇತರ ಸಂಸ್ಥಾನ ಒಕ್ಕೂಟಗಳ ಸಾಲಿನಲ್ಲಿ ಸೇರಿದರೆಂದು ಹೊಸ ದಿಲ್ಲಿಯ ಒಂದು ಅಧಿಕೃತ ಸುದ್ದಿ ಮೊನ್ನೆ ಸೋಮವಾರ ಸಾರಿತು. ೧೯೪೭ ಅಗಸ್ಟ ಸಪ್ಟೆಂಬರದಲ್ಲಿ ಮೈಸೂರು ಮಹಾರಾಜರು ಅಂಕಿತವಿಕ್ಕಿದ ಮೂಲ ಸೇರ್ಪಡೆ ಪತ್ರದಲ್ಲಿ ವಿದೇಶ, ಸಂಪರ್ಕ ಮತ್ತು ಸಂರಕ್ಷಣೆ— ಈ ಮೂರು ಶಾಖೆಗಳ ಅಧಿಕಾರವನ್ನು ಮಾತ್ರ ಭಾರತ ಸರಕಾರಕ್ಕೆ ಒಪ್ಪಿಸಿದ್ದರು. ಅಷ್ಟು ಮಾಡಬೇಕಾದರೂ ಇತರ ಕೆಲ ಸರ್ವತಂತ್ರ ಸ್ವಾತಂತ್ರ್ಯಾಪೇಕ್ಷಿ ಸಂಸ್ಥಾನಗಳಂತೆ ಮೈಸೂರು ಬಹಳ ಮೀನಮೇಷ ಎಣಿಸಿತ್ತೆಂದು ನೆನೆದುಕೊಳ್ಳಬಹುದು. ಈಗ ಸಹಿ ಹಾಕಿರುವ ಪೂರಕ ಸೇರ್ಪಡೆ ಪತ್ರವನ್ವಯ ಸಂಸ್ಥಾನದ ಉದ್ದಿಮೆಗಳ ಅಭಿವೃದ್ಧಿ, ಕೂಲಿಕಾರ ಚಳವಳಿ, ಕೂಲಿಕಾರ ಕಾಯದೆಗಳು, ಇನ್ಶೂರನ್ಸ್, ಬ್ಯಾಂಕಿಂಗ್, ಕ್ರಿಮಿನಲ್ ಕಾಯದೆ, ಸಿವಿಲ್ ಕೋಡ್, ವಿದ್ಯುಚ್ಛಕ್ತಿ ಮೊದಲಾದವುಗಳು ಕೇಂದ್ರಕ್ಕೆ ಬಂದಂತಾಗುವವು. ಆರ್ಥಿಕ ಶಾಖೆಯನ್ನು ಮಾತ್ರ ಇನ್ನೂ ಕೇಂದ್ರ ವಹಿಸಿಕೊಂಡಿಲ್ಲ. ಸಂಸ್ಥಾನಗಳ ಆರ್ಥಿಕ ಸಮೀಕರಣಸಮಿತಿಯ ವರದಿಯನ್ನು ಪರಿಶೀಲಿಸಿದ ನಂತರ ಆ ವಿಷಯ ಎತ್ತಲ್ಪಡಬಹುದು. ಈ ಹೊಸ ವಿಷಯಗಳ ಕೇಂದ್ರೀಕರಣದ ನಂತರ ಮೈಸೂರು ಇತರ ಪ್ರಾಂತಗಳ ಪಂಕ್ತಿಗೇ ಬಂದಂತಾಗುವದು. ಇಲ್ಲಿಂದ ವಿಲಯನಕ್ಕೆ ಒಂದೇ ಹೆಜ್ಜೆ ದೂರವೆಂದೂ ಆ ಕಾರಣದಿಂದ ಇದು ಏಕೀಕರಣಕ್ಕೆ ಅನುಕೂಲ ಸಂವಿಧಾನವೆಂದೂ ಏಕೀಕರಣವಾದಿಗಳು ಆಸೆ ಹಿಡಿದಿದ್ದಾರೆ.

ಹೈದರಾಬಾದ ಕರ್ನಾಟಕದ ಇಚ್ಛೆ

ಆ ದೃಷ್ಟಿಯಿಂದ ಈ ವಾರ ಇನ್ನೊಂದು ಪ್ರೋತ್ಸಾಹಕ ಸುದ್ದಿ ಹೈದರಾಬಾದ ಕರ್ನಾಟಕದಿಂದ ಬಂತು. ಹೈದರಾಬಾದದಲ್ಲಿ ಸದ್ಯಕ್ಕೆ ನಡುಗಾಲ ಅಥವಾ ಲೋಕಸತ್ತಾತ್ಮಕ ಸರಕಾರ ಸಾಧ್ಯವಿಲ್ಲೆಂದೂ ಈ ವರ್ಷಾಂತ್ಯದೊಳಗೆ ಘಟನಾಸಮಿತಿಯು ಏರ್ಪಡುವದೆಂದೂ ಅತ್ತ ತಿಳಿದುಬರುತ್ತಿರಲು ಇತ್ತ ಕಾಂಡೂರಲ್ಲಿ ಸೇರಿದ ಹೈದರಾಬಾದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ ಸ್ಪಷ್ಟವಾಗಿ ಮುದೋಗಾಮಿಯಾದ ಒಂದು ನಿರ್ಣಯವನ್ನು ಕೈಕೊಂಡಿತು. ಕಠೋರ ಅನುಭವಗಳ ನಂತರ ಹೈದರಾಬಾದಿಗಳಿಗೆ ಸ್ಥಾನೀಯ ಸ್ವಾಭಿಮಾನ— ಅಂದರೆ ಹೈದರಾಬಾದಿತನದ ಹೆಮ್ಮೆ—ಉಳಿದಿಲ್ಲವೆಂದು ತೋರುತ್ತದೆ. ಅಂತೆಯೇ ಹೈದರಾಬಾದ ಕರ್ನಾಟಕ ಕಾಂಗ್ರೆಸ್ಸು ಹೈದರಾಬಾದ ಸಂಸ್ಥಾನವನ್ನು ಭಾಷಾನ್ವಯವಾಗಿ ವಿಂಗಡಿಸಿ ಹಾಕಿಬಿಡಬೇಕೆಂದೂ ಕರ್ನಾಟಕ ಭಾಗಗಳನ್ನು ಏಕೀಕರಣವಾಗುವವರೆಗೆ ಮುಂಬಯಿಯಲ್ಲಿ ಲೀನಗೊಳಿಸಿಬಿಡಬೇಕೆಂದೂ ಸರ್ವಾನುಮತದಿಂದ ಗೊತ್ತುವಳಿ ಮಾಡಿದೆ. ಶ್ರೀ ಶರಣಗೌಡ ಇನಾಮದಾರರು ಈ ಗೊತ್ತುವಳಿಯನ್ನು ತಂದಿದ್ದರು. ಹೈದರಾಬಾದ ಕನ್ನಡಿಗರ ಮನಸ್ಸು ತಮ್ಮ ಇತರ ಭಾಷಾಬಾಂಧವರೊಡನೆ ಮಿಲನಹೊಂದಲು ಎಷ್ಟು ಆತುರವಾಗಿದೆಯೆಂದು ಇದರಿಂದ ವ್ಯಕ್ತವಾಗುತ್ತದೆ.

ನರೇಂದ್ರರ ಸ್ವಂತ ಆಸ್ತಿಗಳು

ಸಂಸ್ಥಾನಗಳನ್ನು ಪ್ರಾಂತಗಳ ರಾಜಕೀಯ ಸಮಾನತೆಗೆ ತರುವ ಕಾರ್ಯವನ್ನು ನಿರಾಂತಕವಾಗಿ ಸಾಧಿಸಿದಂತೆ ಸರದಾರ ಪಟೇಲರ ಶಾಖೆಯು ಕಲ್ಲಗಾಣ ನರೇಂದ್ರರ ಸ್ವಂತ ಆಸ್ತಿಯನ್ನೂ ತನ್ನ ಹಲ್ಲುಗಳೆಡೆಗೆ ಸೇರಿಸಿಕೊಂಡಿದೆ. ಅನೇಕ ಸಂಸ್ಥಾನಗಳಲ್ಲಿ ನರೇಂದ್ರ ಸ್ವಂತ ಆಸ್ತಿಗೂ ಸಂಸ್ಥಾನದ ಸರಕಾರಿ ಬೊಕ್ಕಸಕ್ಕೂ ಯಾವ ಅಂತರವೂ ಇದ್ದಿಲ್ಲವೆಂಬ ಮಾತು ಸುಪ್ರಸಿದ್ಧವಾಗಿದೆ. ಅದರಿಂದ ನರೇಂದ್ರರ ಹೆಸರಲ್ಲಿ ಭೂಮಿ ಆಸ್ತಿ, ಮನೆ ಮಾರು, ರತ್ನಾಭರಣ, ಶೇರುಗಳು, ಸರಕಾರಿ ಭದ್ರತೆಗಳೇ ಮೊದಲಾದ ಸೊತ್ತುಗಳು ಲೆಕ್ಕವಿಲ್ಲದಷ್ಟು ಇದ್ದವು. ಸಂಸ್ಥಾನಶಾಖೆಯ ಸಲಹೆಗಾರರಾದ ಶ್ರೀ ವಿ. ಪಿ. ಮೆನನ್ನರು ಈಚೆಗೆ ಇವೆಲ್ಲವುಗಳ ಹಿಂದುಮುಂದನ್ನು ಪರಿಶೀಲಿಸಿ ನಿರ್ಣಯಕೊಡುತ್ತ ಬಂದರು. ಈ ಬಗೆಯಾಗಿ ನರೇಂದ್ರರ ಹೆಸರಲ್ಲಿದ್ದ ೧೦೦ ಕೋಟಿ ರೂಪಾಯಿಗೆ ಮಿಕ್ಕಿದ ಸೊತ್ತುಗಳಲ್ಲಿ ಬಹುಭಾಗ ಸಂಸ್ಥಾನ ಒಕ್ಕೂಟಗಳ ಬೊಕ್ಕಸಗಳಿಗೆ ಸೇರಿದೆ.

ನರೇಂದ್ರರ ಆಸ್ತಿಪಾಸ್ತಿಗಳ ಒಡೆತನದ ಬಗ್ಗೆ ನಿರ್ಣಯ ಕೊಡುವಾಗ ಈ ಕೆಳಗಿನ ಸ್ಥೂಲ ನಿಯಮಗಳನ್ನಿಟ್ಟುಕೊಂಡಂತಿದೆ: ಅವರ ವಾಸದ ಅರಮನೆಯಲ್ಲದೆ ಇನ್ನೊಂದು ಹಂಗಾಮಿ ಅರಮನೆಯನ್ನು ಬಿಟ್ಟು ಉಳಿದ ಅರಮನೆಗಳು ಸಂಸ್ಥಾನದ ಸೊತ್ತಾಗುವವು. ಅನುವಂಶಿಕವಾಗಿ ಅನುಭವಿಸುತ್ತ ಬಂದ ಭೂಮಿಯಲ್ಲದೆ ಉಳಿದ ಕೃಷಿಭೂಮಿಯನ್ನು ನರೇಂದ್ರರಿಂದ ಕಸಿದುಕೊಳ್ಳಲಾಗಿದೆ. ಅವರ ಖಾಸಗಿ ವೆಚ್ಚಕ್ಕಾಗಿ ಸರಕಾರ ಕೊಡುವ ವೇತನಾಂಶವನ್ನು ಹೊರತು ಬೇರಾವ ಉತ್ಪನ್ನವೂ ಅವರಿಗಿರಕೂಡದೆಂಬ ತತ್ವವನ್ನನುಸರಿಸಲಾಗಿದೆ. ಕೆಲ ನರೇಂದ್ರರು ಬೊಕ್ಕಸದಿಂದ ಖಾಸಗಿಯೆಂದು ತೆಗೆದಿಟ್ಟ ಹಣಕ್ಕೆ ಮುಟ್ಟುಗೋಲು ಹಾಕಿದ್ದರಿಂದಲೇ ಸಂಸ್ಥಾನ ಸರಕಾರಗಳಿಗೆ ೫೫ ಕೋಟಿ ರೂಪಾಯಿ ಲಾಭವಾಗಿದೆಯೆಂದು ತಿಳಿಯುತ್ತದೆ. ಕೆಲ ಮಹಾರಾಜರು (ಉದಾಹರಣೆಗೆ ಗ್ವಾಲೇರ ಮಹಾರಾಜರು) ಸ್ವಯಂ ಪ್ರೇರಣೆಯಿಂದ ಎಷ್ಟೋ ಆಸ್ತಿ ಸೊತ್ತುಗಳನ್ನು ಬಿಟ್ಟುಕೊಟ್ಟಿದ್ದಾರೆ. ಸಂಸ್ಥಾನಿಕರ ವಜ್ರಾಭರಣಗಳಲ್ಲಿ ನಿತ್ಯೋಪಯೋಗದವುಗಳು ಅವರಿಗೇ ಸೇರುವವು. ಉಳಿದವುಗಳನ್ನು ಒಕ್ಕೂಟ ಸರಕಾರಗಳ ಮೇಲ್ವಿಚಾರಣೆಗೊಳಪಟ್ಟು ಅವರೇ ಇರಿಸಿಕೊಳ್ಳಬಹುದು. ಒಕ್ಕೂಟ ಅಥವಾ ವಿಲಯನ ನಡೆಯುತ್ತಿರುವಾಗ ಅರಸರು ತಮ್ಮ ಸಂಬಂಧಿಕರಿಗೆ ಮಾಡಿದ ಭೂದಾನಗಳಿಗೂ ಒಪ್ಪಿಗೆ ಕೊಟ್ಟಿಲ್ಲ. ಅವರಲ್ಲಿದ್ದ ಕಾರುಗಳಲ್ಲಿ ಅರ್ಧದಷ್ಟನ್ನು ವಶಪಡಿಸಿಕೊಳ್ಳಲಾಗಿದೆ. ಒಟ್ಟಿನ ಮೇಲೆ ಅವರ ಖಾಸಗಿ ಆಸ್ತಿಯಲ್ಲಿ ಕಾಲುಪಾಲು—ಬಿಟ್ಟು ಮುಕ್ಕಾಲು ಭಾಗವನ್ನು ವಶಪಡಿಸಿಕೊಳ್ಳಲಾಗಿದೆ.

ಭಾರತ—ಸಿಕ್ಕಿಂ

ಭಾರತದ ಈಶಾನ್ಯಗಡಿಯಲ್ಲಿರುವ ಹಿಮಾಲಯದ ಗಿರಿಕಂದರಗಳಲ್ಲಿ ಅಡಗಿದ ಸಿಕ್ಕಿಂ ಸಂಸ್ಥಾನ ಅದರ ನೆರೆ ಸಂಸ್ಥಾನವಾದ ನೇಪಾಳದಂತೆ ರಾಜಕೀಯ ವಿಚಾರದಲ್ಲಿ ತೀರ ಹಿಂದುಳಿದಿದೆ. ಕಳೆದ ಅರುವತ್ತು ವರ್ಷಗಳಿಂದ ದಿಲ್ಲಿಯ ಚಕ್ರಾಧಿಗತ್ಯವನ್ನು ಒಪ್ಪಿಕೊಂಡೇ ಕಾಲಯಾಪನೆ ಮಾಡುತ್ತ ಬಂದಿರುವ ಈ ಸಂಸ್ಥಾನ ಭಾರತದ ಸ್ವಾತಂತ್ರ್ಯದ ನಂತರ ಕೆಲಕಾಲ ಪೂರ್ಣಸ್ವಾತಂತ್ರ್ಯದ ಬೆನ್ನುಹತ್ತಿ ಭಾರತದೊಡನೆ ಹೈದರಾಬಾದಿನಂತೆ ಕೇವಲ ಯಥಾಸ್ಥಿತಿ ಒಪ್ಪಂದ ಮಾಡಿಕೊಂಡಿತ್ತು. ಆದರೆ ಎಲ್ಲ ಸಂಸ್ಥಾನಗಳನ್ನು ವ್ಯಾಪಿಸಿದ ಜನತೆಯ ಚಳವಳಿ ಸಿಕ್ಕಿಂ ರಾಜ್ಯವನ್ನೂ ಬಿಡಲಿಲ್ಲ. ಅಲ್ಲಿನ ಸಂಸ್ಥಾನ ಕಾಂಗ್ರೆಸ್ಸಿನ ಕೈಕೆಳಗೆ ಜನ ರಾಜ್ಯಕ್ಕಾಗಿ ನಡೆದ ಚಳವಳಿಗೆ ಮಣಿದು ಮಹಾರಾಜರು ಕಾಂಗ್ರೆಸ್ಸಿನೊಡನೆ ಒಂದು ಒಡಂಬಡಿಕೆಗೆ ಬಂದು ಜೊತೆಗಾರ ಸರಕಾರದ ಪ್ರಯೋಗಕ್ಕೆ ಅಸ್ಪದಕೊಟ್ಟರು. ಆದರೆ ಕಾಂಗ್ರೆಸ್ಸಿಗೂ ರಾಜರಿಗೂ ಬಹುಕಾಲ ಹೊಂದಿಕೆ ಬೀಳಲಿಲ್ಲವಾಗಿ ಭಾರತ ಸರಕಾರದ ಸಹಾಯವನ್ನು ಅಪೇಕ್ಷಿಸಿದ ಪ್ರಕಾರ ಜೂನ್ ೭ ರಿಂದ ಭಾರತ ನಿಯುಕ್ತನಾದ ದಿವಾಣನನ್ನು ಎರವು ಕೊಟ್ಟು ಭಾರತ ಸರಕಾರವೇ ಆಡಳಿತೆಯನ್ನು ವಹಿಸಿಕೊಂಡಿತು. ಪ್ರಜಾತಂತ್ರದ ರೀತಿ ನೀತಿಗಳಲ್ಲಿ ಜನರಿಗೆ ಅನುಭವವಿಲ್ಲದ್ದೊಂದು, ಬೌದ್ಧ ರಾಜ್ಯವಾದ ಅದರಲ್ಲಿರುವ ನೇಪಾಳಿ ಹಿಂದು ಅಲ್ಪಸಂಖ್ಯಾತರಸ ಮಸ್ಯೆಯೊಂದು ಸೇರಿ ಸಿಕ್ಕಿಮದಲ್ಲಿ ಶಾಂತಿ ನೆಲಸುವದು ಅಸಾಧ್ಯವಾಗಿ ತೋರಿದ್ದರಿಂದಲೇ ಭಾರತ ಸರಕಾರ ಇದರಲ್ಲಿ ಕೈಹಾಕಲೊಪ್ಪಿತು. ಭಾರತದೊಳಗಿನ ಮಹಾರಾಜರುಗಳನ್ನು ನಡೆಸಿಕೊಂಡ ಭಾರತ ಸರಕಾರದ ರೀತಿನೀತಿಯನ್ನು ನೋಡಿದವರಾರೂ ಸಿಕ್ಕಿಮದಲ್ಲಿ ಪ್ರಜೆಗಳ ವಿರುದ್ಧ ಅದು ರಾಜರನ್ನು ಎತ್ತಿ ಕಟ್ಟೀತೆಂದು ಸಂಶಯಪಡಲೆಡೆಯಿಲ್ಲ. ಆದರೆ ತಿಬೇತಿಗೂ ಭಾರತಕ್ಕೂ ನಡುವೆ ಇರುವ ಈ ಚಿಕ್ಕ ರಾಜ್ಯದ ಆಯಕಟ್ಟಿನ ಸ್ಥಾನವನ್ನು ದಿಲ್ಲಿ ಅಲಕ್ಷಿಸುವಂತಿಲ್ಲ. ಅಲ್ಲಿಂದ ಕಮ್ಯುನಿಸ್ಟರ ಆಕ್ರಮಣಕ್ಕೊಳಗಾದ ಚೀನದ ಭಾಗ ಬಹಳ ದೂರವಿಲ್ಲ. ಅದ್ದರಿಂದ ಸಿಕ್ಕಿಮವನ್ನು ಇನ್ನೂ ಹೆಚ್ಚು ಕಾಲ ಅನಿಶ್ಚಿತಾವಸ್ಥೆಯಲ್ಲಿ ಬಿಡುವದು ಭಾರತದ ರಕ್ಷಣೆಗೆ ಘಾತಕವಾಗಬಹುದಿತ್ತು. ಈ ಕಾರಣದಿಂದ ಸಿಕ್ಕಿಮದ ಯಥಾಸ್ಥಿತಿ ಒಪ್ಪಂದದ ಸ್ಥಾನದಲ್ಲಿ ಸೇರ್ಪಡೆ ಪತ್ರವನ್ನು ಪಡೆಯಲು ಭಾರತ ಸರಕಾರ ಸಂಧಾನ ನಡೆಸಿದೆಯೆಂದು ತಿಳಿಯುತ್ತದೆ. ಸದ್ಯಕ್ಕೆ ಸಂಪರ್ಕ, ಸಂರಕ್ಷಣ ಮತ್ತು ವಿದೇಶ ವ್ಯವಹಾರಗಳನ್ನಷ್ಟೇ ಭಾರತಕ್ಕೆ ಅದು ಒಪ್ಪಿಸಿದರೆ ಸಾಕೆಂದು ದಿಲ್ಲಿ ಅಧಿಕಾರಿಗಳ ಭಾವನೆಯಿದೆ. ಪ್ರತ್ಯಕ್ಷ ಸೇರ್ಪಡೆಯಲ್ಲದಿದ್ದರೂ ಈ ವಿಷಯಗಳನ್ನೊಪ್ಪಿಸುವ ಒಡಂಬಡಿಕೆಯಾದರೂ ಭಾರತ ಸರಕಾರ ಸಂತುಷ್ಟವಾಗಬಹುದು. ಏಕೆಂದರೆ ಸಿಕ್ಕಿಮ ರಾಜ್ಯ ಭಾರತದ ಹಿತಸಂಬಂಧಗಳಿಗೆ ವಿರುದ್ಧವಾಗಿ ನಡೆದುಕೊಳ್ಳಲಾರದೆಂಬ ವಿಶ್ವಾಸ ಸರಕಾರಕ್ಕಿದೆ.

ಬಂಗಾಲದ ಪರಿಸ್ಥಿತಿ

ಬ್ರಿಟಿಶ ರಾಜ್ಯದ ಕಾಲದಲ್ಲಿ ಕ್ರಾಂತಿಕಾರಿ ಚಳವಳಿಗಾಗಿ ಯಾವಾಗಲೂ ಪ್ರಸಿದ್ಧವಾಗಿದ್ದ ಬಂಗಾಲ ಸ್ವರಾಜ್ಯದಲ್ಲಾದರೂ ತನ್ನ ಆ ಕೀರ್ತಿಯನ್ನು ಕಾದುಕೊಳ್ಳಲು ನಿರ್ಧರಿಸಿದಂತೆ ತೋರುತ್ತದೆ. ಬ್ರಿಟಿಶ ರಾಜ್ಯದ ಕಾಲದಲ್ಲಿ ಹೆಚ್ಚುಕಡಿಮೆ ತಣ್ಣಗಿದ್ದ ಕಮ್ಯುನಿಸ್ಟರು ಈ ಬಾರಿ ಬಂಗಾಲವನ್ನು ಅರಾಜಕತೆಯಲ್ಲಿ ಕೆಡಹುವ ನಿರ್ಧಾರ ಮಾಡಿದಂತಿದೆ. ಅದು ಕಮ್ಯುನಿಸ್ಟರ ಜಾಗತಿಕ ಗತ್ತುಗಾರಿಕೆಯ ಒಂದಂಗವಾಗಿರಬಹುದು. ಚೀನದಲ್ಲಿಯೂ ಬ್ರಹ್ಮದೇಶದಲ್ಲಿಯೂ ನಡೆದುದರ ಎದುರಿಗೆ ಬಂಗಾಲದಲ್ಲಿ ಅವರು ಸಾಗಿಸುತ್ತಿರುವ ಚಟುವಟಿಕೆ ಅರ್ಥಭರಿತವಾಗಿದೆ. ಕಲಕತ್ತೆ ಮತ್ತು ಅದರ ಸುತ್ತಮುತ್ತ ಅವರ ಭಯೋತ್ಪಾದಕ ಚಟುವಟಿಕೆಗಳು ದಿನದಿನಕ್ಕೆ ಘೋರತರವಾಗತೊಡಗಿವೆ. ಕಲಕತ್ತೆಯಲ್ಲಿ ದಿನವೂ ಎಂಬಂತೆ ಅವರ ಆಕ್ರಮ ಮೆರವಣಿಗೆಗಳೂ ಪೋಲೀಸರ ಮತ್ತು ಕಾಂಗ್ರೆಸಿಗರ ಮೇಲೆ ಅತ್ಯಾಚಾರವೂ ನಡೆದಿವೆ. ಕಳೆದ ವಾರ ಅವರು ತಮ್ಮ ಚಟುವಟಿಕೆಗಳ ತೀವ್ರತೆಯನ್ನು ಪರಮಾವಧಿಗೇರಿಸಿದರು. ನಗರದಿಂದ ೧೫ ಮೈಲು ದೂರದ ಮಹೇಶದಲ್ಲಿ ಪೋಲೀಸ ಠಾಣೆ ಮತ್ತು ಶ್ರೀರಾಮಪುರದ ಸಬ್ ಜೈಲ್ ಮತ್ತು ರಾಷ್ಟ್ರೀಯ ಮಜದೂರ ಸಂಘದ ಶಾಖೆಯ ಮೇಲೆ ದಾಳಿ, ತೆಹುರಿಯಾ ಹಳ್ಳಿಯಲ್ಲಿ ಜಮೀನುದಾರರ ಕಣಜದ ಮೇಲೆ ನಡೆಸಿದ ದಾಳಿ ಮತ್ತು ಅದನ್ನು ತಡೆಯಲು ಹೋದ ಪೋಲೀಸರೊಡನೆ ಅವರು ಗುಂಡಿನ ದ್ವಂದ್ವ ನಡೆಸಿ ತಮ್ಮ ಮುಂದಾಳನ್ನು ಬಿಡಿಸಿಕೊಂಡು ಹೋದುದು, ಹೌರಾ ಜಿಲ್ಲೆಯ ಇಸ್ಲಾಮಪುರ ಪೋಲೀಸ ಠಾಣೆಯ ಮೇಲೆ ಅವರ ಸಶಸ್ತ್ರ ಅಭಿಯೋಗ, ರಿಶಾರಾ ರೇಲ್ವೆ ನಿಲ್ದಾಣಕ್ಕೆ ಬೆಂಕಿಹಚ್ಚಿದ್ದು, ಉತ್ತರ ಕಲಕತ್ತೆಯ ಅಮೇರಿಕನ್ ಕಾರಖಾನೆಯಲ್ಲಿ ನಡೆದ ಬಾಂಬ ಸ್ಫೋಟ, ಒಂದೆರಡು ಕಡೆ ಕೊಲೆಗಳು ಇವೆಲ್ಲ ಪ್ರತಿಪ್ರತ್ಯೇಕವಾಗಿ ನೋಡಿದರೆ ಅಲ್ಪವೆನಿಸಬಹುದಾದರೂ ಮತ್ತು ಪೋಲೀಸರಿಗೆ ಅದಕ್ಕಿಂತ ದುಷ್ಕರ್ಮಿಗಳಿಗಾದ ಪ್ರಾಣಹಾನಿಯೆ ಹೆಚ್ಚಾಗಿದ್ದರೂ ಬಂಗಾಲ ಪೋಲೀಸರು ಶಾಂತಿ ಸುರಕ್ಷಿತತೆಗಳನ್ನು ಕಾಯಲು ಅಸಮರ್ಥರಾದುದಕ್ಕೆ ಸಾಕ್ಷಿಯಾಗಿವೆ. ಔದ್ಯೋಗಿಕ ದೃಷ್ಟಿಯಿಂದಲೂ ಭಾರತದ ಭದ್ರತೆಗೆ ಅತಿಮಹತ್ವದ್ದೆನಿಸಿದ ಬಂಗಾಲದಲ್ಲಿ

ಖಾಸ—ಹೊಗೆಸುದ್ದಿ

…ಾಸನ ಸಭೆಯಲ್ಲಿ ಹಿಂದಿನ …ಸ್ವಾಮಿಯವರ ಕಾಲ ಅರಾಜಕತೆಯನ್ನು …ೀಗಕ್ಕಾಗಿ ಕೊಂಡ ಗಂಡಾಂತರವನ್ನು ಒತ್ತಿ… "ಹನುಮಾನ್" ಜುಲೈ ಮಧ್ಯದಲ್ಲಿ ಪಂ. ನೆಹರು …ಗ ಮುಖ್ಯ ಲಕ್ಕೆ ಭೆಟ್ಟಿಕೊಟ್ಟಾಗ ಈ ಪರಿಸ್ಥಿತಿಯ …ರುಗಳನ್ನು ಪರೀಕ್ಷಿಸಬಹುದು.

ಕಾಶ್ಮೀರದಲ್ಲಿ ಒಡಂಬಡಿಕೆಯಿಲ್ಲ

ಯುಕ್ತ ರಾಷ್ಟ್ರ ಸಂಘದ ಕಾಶ್ಮೀರ ಸಮಿತಿಯ ಪ್ರಯತ್ನದ ನಂತರವೂ ಕಾಶ್ಮೀರದಲ್ಲಿ ಸಂಧಿಯಾಗುವ ಲಕ್ಷಣಗಳಿಲ್ಲೆಂಬ ಸುದ್ದಿ ಪಾಕಿಸ್ತಾನದ ರೀತಿನೀತಿಗಳ ಕಲ್ಪನೆಯುಳ್ಳ ಯಾರಿಗೂ ಆಶ್ಚರ್ಯವನ್ನುಂಟುಮಾಡಲಿಕ್ಕಿಲ್ಲ. ಕಾಶ್ಮೀರ ಸಮಿತಿಯೀಗ ದಿಲ್ಲಿ ಮತ್ತು ಕರಾಚಿಗಳು ಕಳಿಸಿದ ಸ್ಪಷ್ಟೀಕರಣ, ಪುನಃ ಸ್ಪಷ್ಟೀಕರಣಗಳ ಕಡತದೊಡನೆ ಹೊರಟದ್ದು, ಭದ್ರತಾ ಮಂಡಲಕ್ಕೆ ವರದಿಯನ್ನೊಪ್ಪಿಸಲಿದೆಯಂತೆ. ಮಾತುಕತೆಗಳಲ್ಲಿ ಬಂದ ಮುಖ್ಯ ಬಿಕ್ಕಟ್ಟೆಂದರೆ ಶಸ್ತ್ರಾಸ್ತ್ರಗಳನ್ನು ಕೆಳಗಿಡುವಾಗ ಮತ್ತು ಅನಂತರ ಉಭಯ ಸೈನ್ಯಗಳು ಎಲ್ಲೆಲ್ಲಿರಬೇಕೆಂಬ ಬಗ್ಗೆ ಇರುವ ಮೂಲಭೂತ ಮತಭೇದ. ನಡುವೆ ಹಿಂದೀ ಸೈನ್ಯದ ವಶದಲ್ಲಿದ್ದು ಶಸ್ತ್ರ ಸಂನ್ಯಾಸವಾದ ಬಳಿಕ ತೆರವುಮಾಡಲ್ಪಟ್ಟಿದ್ದ ಕೆಲ ಪ್ರದೇಶಗಳನ್ನು ಪಾಕಿಸ್ತಾನಿಗಳು ಆಕ್ರಮಿಸಿದ್ದರಿಂದ ಭಾರತ ಸರಕಾರವೂ ಸ್ವಾಭಾವಿಕವಾಗಿ ಶಂಕಿತವಾಗಿದೆ. ಅಲ್ಲದೆ ಅಜಾದ ಕಾಶ್ಮೀರ ಸೈನ್ಯ ಗಳನ್ನು ವಿಸರ್ಜಿಸುವ ಬಗ್ಗೆಯೂ ಭಾರತ ಸರಕಾರ ಸ್ಥಿರಾಭಿಪ್ರಾಯ ತಳೆದಿದೆ. ಅತ್ತ ಪಾಕಿಸ್ತಾನ ಸರಕಾರ ಶಾಶ್ವತ ಸಂಧಿಗೆ ಪೋಷಕವಾಗುವಂತೆ ನಡೆದುಕೊಳ್ಳದೆ ಕಾಶ್ಮೀರದ ಆಡಳಿತೆಯ ಬಗ್ಗೆ ತುಂಬ ಚಾಪಲ್ಯತನದ ಅಪಪ್ರಚಾರ ನಡೆಸಿದೆ. ಪಾಕಿಸ್ತಾನ ಪ್ರಧಾನಿ ಲಿಯಾಕತ ಅಲ್ಲಿಖಾನರು ಕಾಶ್ಮೀರದ ಭಾರತ ವಿಭಾಗಕ್ಕೆ ಅಹಾರ ಧಾನ್ಯ ಸಹಾಯವನ್ನು ಕೊಡಮಾಡಿದ್ದು ಈ ಪ್ರಚಾರದ ತೀರ ನಿನ್ನೆ ಮೊನ್ನೆಯ ಉದಾಹರಣೆ. ಅಬ್ದುಲ್ಲಾರ ಆಡಳಿತೆಯ ಪ್ರದೇಶದಲ್ಲಿ ಅಹಾರವಿಲ್ಲದೆ ಕಾಶ್ಮೀರಿಗಳು ಸಂಕಷ್ಟಕ್ಕೊಳಗಾಗಿದ್ದಾರೆಂದೂ ಅದರ ನಿವಾರಣೆಗಾಗಿ ಆಹಾರವೊದಗಿಸಲು ಪಾಕಿಸ್ತಾನ ಸಿದ್ಧವಾಗಿದೆಯೆಂದೂ ಅವರ ಪ್ರಕಟನೆ ಹೊರಟಿತು. ಸ್ವಾಭಾವಿಕವಾಗಿ ಇದು ಎದುರು ಕಡೆಯಿಂದ ಉಗ್ರವೂ ತಿರಸ್ಕಾರಯುಕ್ತವೂ ಆದ ನಿರಾಕರಣೆಯನ್ನು ಪಡೆಯಿತು. ಕಾಶ್ಮೀರದ ಭಾರತ ವಿಭಾಗದಲ್ಲಿ ಯಾವ ಅನ್ನ ಸಂಕಟವೂ ಉಂಟಾಗಿಲ್ಲದ್ದರಿಂದ ಲಿಯಾಕತರ ಈ ಔದಾರ್ಯದ ಮೋಹಜಾಲಕ್ಕೆ ಅದು ಬೀಳುವ ಸಂಭವವಿಲ್ಲವೆಂದು ಶೇಖ ಅಬ್ದುಲ್ಲಾ ಉತ್ತರ ಹೇಳಿದರು. ಬದಲಿಗೆ ಅಜಾದ ಕಾಶ್ಮೀರದಲ್ಲಿ ಅನ್ನಸಂಕಟವುಂಟಾಗಿದೆಯೆಂದು ಪಾಕಿಸ್ತಾನ ಪತ್ರಿಕೆಗಳಲ್ಲೆ ಪ್ರಕಟವಾದ ಸುದ್ದಿಗಳನ್ನು ಅವರು ಎತ್ತಿ ತೋರಿದರು. ಪೂರ್ವ ಪಾಕಿಸ್ತಾನದಲ್ಲೂ ಕೂಳಿಲ್ಲದೆ ಜನರು ಕೊರಗತೊಡಗಿದ್ದಾರೆ. ಅವರ ಕಡೆ ಪಾಕಿಸ್ತಾನದ ಕೃಪಾದೃಷ್ಟಿ ತಿರುಗಲೆಂದು ಅವರು ಸೂಚಿಸಿದರು. ನಿರುದ್ಯೋಗ, ಅನ್ನಾಭಾವಗಳಿಂದ ಪೂರ್ವ ಪಾಕಿಸ್ತಾನದ ಮುಸ್ಲಿಮರು ಗುಳೆಕಟ್ಟಿಕೊಂಡು ಭಾರತಕ್ಕೆ ಬರತೊಡಗಿದ್ದಾರೆಂದು ಇದೇ ಈಗ ಸುದ್ದಿ ಬಂದಿದೆ. ಕಾಶ್ಮೀರದ ಭಾರತಾಧೀನ ಪ್ರದೇಶಗಳಲ್ಲಿ ಬರಗಾಲ ಬಿದ್ದಿದೆಯೆಂಬ ಪ್ರಚಾರಕ್ಕೆ ಕಾಶ್ಮೀರಿಗಳು ಬಲಿ ಬೀಳುವ ಸಂಭವವಿಲ್ಲ.

ಸಂತಾನ ನಿರೋಧಕರಿಗೆ ಎಚ್ಚರಿಕೆ

೧೭೯೮ ರಲ್ಲಿ ಬ್ರಿಟಿಶ ಸಂಖ್ಯಾಶಾಸ್ತ್ರಿ ಡಾ। ಮಾಲ್ಥಸನು ಜಗತ್ತಿನ ಬೆಳೆಯುತ್ತಿರುವ ಜನಸಂಖ್ಯೆ, ಅಳಿಯುತ್ತಿರುವ ಭೂಸಾರಗಳ ಫಲವಾಗಿ ಮಾನವ ಕುಲವನ್ನು ಉಪವಾಸ ಸಾಯುವ ಪಾಡು ಎದುರಿಸಲಿದೆಯೆಂದು ಒಡನುಡಿದಿದ್ದನು. ಅದನ್ನೋದಿದ ಪಾಶ್ಚಾತ್ಯ ನರನಾರಿಯರು ಎದೆಯೊಡೆದುಕೊಂಡು, ಪ್ರತೀಕಾರೋಪಾಯವೆಂದು ಗರ್ಭನಿರೋಧ ಅಥವಾ ಸಂತಾನನಿಯಮನವನ್ನು ರಭಸದಿಂದ ಆಚರಣೆಗೆ ತಂದರು. ಪರಿಣಾಮವಾಗಿ ಇಂದು ಪಾಶ್ಚಾತ್ಯ ದೇಶಗಳಲ್ಲಿ ಹಲವು ತಮ್ಮ ಜನಸಂಖ್ಯೆ ಇಳಿಮುಖವಾಗುವದನ್ನು ಕಂಡು ತಲೆಕೆರೆದುಕೊಳ್ಳಬೇಕಾಗಿದೆ. ಪ್ರಜಾವೃದ್ಧಿಯ ಫಲವಾಗಿ ಅನ್ನಸಂಕಟವನ್ನೆದುರಿಸಬೇಕಾದ ಭಾರತೀಯರಿಗೆ ಈ ಸಂತಾನ ನಿರೋಧದ ಮಂತ್ರೋಪದೇಶ ಮಾಡಬರುವ ಪಾಶ್ಚಾತ್ಯ ತಜ್ಞರೂ ಇದ್ದಾರೆ.

ಸಂತಾನ ನಿರೋಧ ಒಮ್ಮೆ ರಭಸದಿಂದ ಪ್ರಾರಂಭವಾಯಿತೆಂದರೆ ಅದು ಬಹು ಬೇಗ ಹಬ್ಬಿಬಿಡುವದು ಖಂಡಿತ. ಅದು ಜನಪ್ರಿಯವಾಗಲು ಅನೇಕ ಕಾರಣಗಳುಂಟು. ದೊಡ್ಡ ಸಂಸಾರ ಬೆಳೆದು ಮಕ್ಕಳ ಪಾಲನೆ ಪೋಷಣೆಗಳಿಗೆ ಅನುಕೂಲವೂ ಅವಕಾಶವೂ ದೊರಿಯದೆ "ಪುನರ್ದರಿದ್ರಃ ಪುನರೇವ ಪಾಪೀ" ಸ್ಥಿತಿಗಿಳಿಯುವದನ್ನು ಅದು ತಡೆಯುತ್ತದೆ. ಮಿತವಾದ ಕುಟುಂಬ ಎತ್ತರವಾದ "ಜೀವನ ಮಟ್ಟ" ವನ್ನು ಅದು ಕಾಯ್ದುಕೊಳ್ಳಬಲ್ಲದು. ಮೇಲಾಗಿ ಸಂತಾನನಿರೋಧದ ಹುಸಿಯಾಗದ ಉಪಾಯಗಳು ತಿಳಿದರೆ ಮೊದಲೇ ಇಂದ್ರಿಯ ಲೋಲುಪವಾದ ಮನುಷ್ಯ ಜಾತಿಯ ಲೋಲುಪ್ತಿಗೆ ನಿರಾಂತಕವಾದ ಮಾರ್ಗ ದೊರೆತಂತಾಗುತ್ತದೆ. ಆಗ ಬರ್ನಾರ್ಡ ಶಾ ಹೇಳಿದಂತೆ ಮದುವೆ "ಅತಿಶಯ ಲೋಲುಪತೆಗೆ ಅತಿಶಯ ಅವಕಾಶಗಳನ್ನು ಒದಗಿಸಿ" ನಿಜವಾಗಿ ಜನಪ್ರಿಯವಾಗುತ್ತದೆ. ಸಂತಾನ ಭರಣದ ಹೊಣೆಯ ಭಯವೂ ತಪ್ಪಿದ ಮೇಲೆ ಭೋಗದ ಕೈಹಿಡಿಯುವವರಾರು?

ಆದರೆ...

ಆದರೆ ಸಂತಾನವನ್ನು ತಡೆದು ಪ್ರಕೃತಿಯ ಇಚ್ಛೆಯನ್ನು ಪರಾಸ್ತಗೊಳಿಸುವವರಿಗೆ ಪ್ರಕೃತಿ ಬೇರೆಯೆ ಶಿಕ್ಷೆಯನ್ನು ಕಾದಿರಿಸಿದೆಯೆಂದು ಈಚೆಗೆ ಪಾಶ್ಚಾತ್ಯ ಡಾಕ್ಟರರು ಕಂಡುಹಿಡಿದಿದ್ದಾರೆ. ಮಕ್ಕಳಾದರೆ ಹೊಟ್ಟೆ ಹೊರೆಯುವವರಾರು ಎಂದು ಬೆದರಿ ಮಕ್ಕಳಾಗದಂತೆ ಕೃತ್ರಿಮೋಪಾಯಗಳನ್ನು ಕೈಕೊಂಡರೆ ಅದಕ್ಕಿಂತಲೂ ಹೆಚ್ಚದ್ದೂ ಯಾತನಾಮಯವೂ ಆದ ರೋಗವನ್ನು ತಾಯ್ತನದಿಂದ ತಪ್ಪಿಸಿಕೊಂಡವಳು ಅನುಭವಿಸಬೇಕಾಗುವದು.

ಅಮೇರಿಕೆಯ ಐವತ್ತು ಲಕ್ಷ ನಿಸ್ಸಂತಾನ ಕುಟುಂಬಗಳಲ್ಲಿ ಎಂಡೊಮೆಟ್ರಿಯಾಸಿಸ್ (endometriosis) ಎಂಬ ರೋಗ ಪ್ರಬಲವಾಗತೊಡಗಿದೆ. ಎಂಡೊಮೆಟ್ರಿಯಾಸಿಸ್ ಎಂದರೆ, ಸ್ಥೂಲವಾಗಿ, ಗರ್ಭಕೋಶದ ಪರೆ ಮಿತಿಮೀರಿ ಬೆಳೆಯುವದು ಎನ್ನಬಹುದು. ಆದರೆ ಅದು ಗರ್ಭಕೋಶಕ್ಕೇ ಸೀಮಿತವಾಗಿದ್ದರೆ ದೊಡ್ಡ ಮಾತಲ್ಲ. ಗರ್ಭಕೋಶದ ಈ ಬಾವು ಕ್ಯಾನ್ಸರ ವ್ರಣಗಳಂತೆ ಅನೇಕ ಅಂಗಗಳನ್ನು ತೀವ್ರವಾಗಿ ಆಕ್ರಮಿಸುತ್ತದೆ. ಬಾವು ಕರುಳಿನ ತುದಿಯಲ್ಲಿ, ಮೂತ್ರಕೋಶದಲ್ಲಿ, ಸಣ್ಣ ಕರುಳಿನಲ್ಲಿ, ಕೆಲವೊಮ್ಮೆ ಶ್ವಾಸಕೋಶದಲ್ಲಿ ಮತ್ತು ತೋಳುತೊಡೆಗಳಲ್ಲಿ ಕೂಡ ಕಾಣಿಸಿಕೊಳ್ಳುವದುಂಟು.

ಈ ರೋಗ ಪ್ರಾರಂಭ ದಶೆಯಲ್ಲಿ ನಿದಾನಕ್ಕೆ ನಿಲುಕುವುದೇ ಕಡಿಮೆ. ಮುಟ್ಟಿನ ಕಾಲದಲ್ಲಿಯೇ ಅದರ ನೋವೂ ಕಾಣಿಸಿಕೊಳ್ಳುವ ಕಾರಣ ಅದು ಸಾಮಾನ್ಯ ಮುಟ್ಟಿನ ದೋಷವೆಂದೇ ಎಣಿಸಲ್ಪಡುವದು. ರೋಗ ಪ್ರಬಲವಾದ ನಂತರ ಅದು ಮರಣದಲ್ಲಿ ಪರ್ಯವಸಾನಗೊಳ್ಳುವದು ಅಪೂರ್ವವಲ್ಲ. ಆದರೆ ಅಷ್ಟರಲ್ಲಿ ವಯಃಸ್ಸು ಮೀರಿ ಮುಟ್ಟು ನಿಂತರೆ ಆಮೇಲೆ ಅದು ತಂತಾನೆ ಉಪಶಮನ ಹೊಂದುವದು. ಪ್ರಬಲಾವಸ್ಥೆಯಲ್ಲಿ ಈ ರೋಗವನ್ನು ವಾಸಿ ಮಾಡಬೇಕಾದರೆ ಸ್ತ್ರೀಯ ಜನನೇಂದ್ರಿಯಗಳನ್ನು ಶಸ್ತ್ರಕ್ರಿಯೆಯಿಂದ ತೆಗೆದೊಗೆಯುವದೊಂದೇ ಉಪಾಯವೆಂದು ಅಮೇರಿಕೆಯ ಡಾ. ಜಾನ್ ಫ್ಯಾಲನ್ನರು ಹೇಳುತ್ತಾರೆ. ಇದರಿಂದ ಅವಳು ಸಾಂತಾನದ ಆಸೆಯನ್ನೆ ತೊರೆಯಬೇಕಾಗುವದು.

ಮಕ್ಕಳಾದ ಸ್ತ್ರೀಯರಿಗೆ ಈ ರೋಗ ಬರುವದೇ ಇಲ್ಲೆಂದು ಹೇಳಲಾಗಲ್ಲವಾದರೂ ಬಹು ಕಾಲ ಮಕ್ಕಳಾಗದಂತೆ ತಡೆದ ಹೆಂಗಸರೇ ಅವರಲ್ಲಿ ೩/೪ ಅಂಶಕ್ಕಿಂತಲೂ ಹೆಚ್ಚು. ಮಕ್ಕಳುಳ್ಳವರಲ್ಲಿಯೂ ಹಿಂದಿನ ಐದು ವರ್ಷಗಳಿಂದ ಮಕ್ಕಳಾಗದವರೇ ಈ ರೋಗಕ್ಕೆ ತುತ್ತಾದುದು ಕಂಡುಬಂತು.

ಈ ರೋಗದ ಹಬ್ಬುಗೆಯನ್ನು ತಡೆಯಲು ಡಾ. ಫ್ಯಾಲನ್ನರೂ ಹರವಾರ್ಡ ಮೆಡಿಕಲ್ ಕಾಲೇಜಿನ ಡಾ. ಮೀಗ್ಸರೂ ಒಂದೇ ಉಪಾಯವನ್ನು ಸೂಚಿಸಿದ್ದಾರೆ: ಹೆಂಗಸರು ಬೇಗನೆ ಮದುವೆಯಾಗಬೇಕು—೧೭ ವರ್ಷದೊಳಗೆ ಆದರೆ ಒಳಿತು. (ಭಾರತದಲ್ಲಿ ಸ್ತ್ರೀಯರು ಬೇಗನೆ ಮೈನರೆಯುವ ಕಾರಣ ಇಲ್ಲಿ ಇನ್ನೂ ಬೇಗನೆ ಆಗಬೇಕಾದೀತು.) ಸರಾಸರಿ ಮೂರು ವರ್ಷಕ್ಕೊಂದು ಮಗು ಹಡೆಯಬೇಕು. ಕನಿಷ್ಠ ೨೦ ವರ್ಷಕ್ಕೆ ವಿವಾಹವಾಗಿ ಪ್ರತಿ ೫ ವರ್ಷಕ್ಕೊಂದರಂತಾದರೂ ಮಕ್ಕಳನ್ನು ಹಡೆದರೆ ಈ ರೋಗದ ಪ್ರಾಬಲ್ಯ ಕುಂದಬಹುದು.

ಸಂತಾನ ನಿರೋಧದ ಬೆನ್ನುಹತ್ತಬೇಕೆಂದಿರುವ ಭಾರತೀಯರು ಇದನ್ನು ಸಕಾಲದಲ್ಲಿ ಗಮನಿಸಿದರೆ ಕ್ಷೇಮ. ಮೂರು ನಾಲ್ಕು ವರ್ಷಗಳಿಗಿಂತಲೂ ಕಡಿಮೆ ಅವಧಿಯಲ್ಲಿ ಬಸಿರು ಬರುವವರು ಮಾತ್ರ ಸಂತಾನನಿರೋಧವನ್ನು ಮಿತವಾಗಿ ಉಪಯೋಗಿಸಲಡ್ಡಿಯಿಲ್ಲೆಂದು ತೋರುತ್ತದೆ. ಆದರೆ ಹೊಣೆಯಿಲ್ಲದ ಭೋಗದ ಮಾರ್ಗಕ್ಕೆ ಬಿದ್ದ ನಂತರ ಹೊಣೆ ಹೊರುವದಕ್ಕೆ ಜನರು ಸಿದ್ಧರಾಗುವದು ಕಷ್ಟವೆಂದು ನಾವು ಮರೆಯಕೂಡದು.

ಪೂರ್ವಗ್ರಹಗಳು

ಕುಲನಿಷ್ಠವೂ ಗುಂಪಿನ ಭಾವನೆಯಿಂದ ಬದ್ಧವೂ ಆದ ಭೇದಗ್ರಹಣ ಯುದ್ಧಗಳಿಗೆ ಕಾರಣವೆಂದು ಸಂ. ರಾ. ಸಂಘದ ಕಚೇರಿಯು ಒಂದು ವರದಿಯನ್ನು ತಯಾರಿಸಿದೆ. ಈ ವರದಿಯನ್ನು ರೂಪಿಸುವುದರಲ್ಲಿ ಒಟ್ಟಿನಲ್ಲಿ ೬೦೦೦ ಜನ ಶಾಸ್ತ್ರಜ್ಞರು ಭಾಗಿಗಳಾಗಿದ್ದಾರೆ. ಅವರಲ್ಲಿ ಸಮಾಜಶಾಸ್ತ್ರಜ್ಞರು, ಕುಲಶಾಸ್ತ್ರಜ್ಞರು, ಇತಿಹಾಸಜ್ಞರು, ಅರ್ಥಶಾಸ್ತ್ರವೇತ್ತರು, ನ್ಯಾಯಶಾಸ್ತ್ರವಿಶಾರದರು ಇವರೆಲ್ಲ ಇದ್ದಾರೆ. ಜಗತ್ತಿನ ಅತ್ಯುನ್ನತ ವಿಚಾರವಂತರ ಆಲೋಚನೆ ಇಂತಿದೆ.

೬೨ ಪುಟಗಳ ಈ ವರದಿಯಲ್ಲಿ ಪೂರ್ವಗ್ರಹಗಳೇ ಪರಸ್ಪರ ದ್ವೇಷದ ಬೀಜವೆನ್ನಲಾಗಿದೆ. ಸಾಂಸ್ಕೃತಿಕ ವಿರೋಧ, ಅವಿವೇಕಬದ್ಧವಾದ ಭಾವೋದ್ರೇಕ, ಭ್ರಮೆ, ಅಸಹಿಷ್ಣುತೆ, ತಿರಸ್ಕಾರ ಬುದ್ಧಿ ಮುಂತಾದ ಮನೋಭಾವಗಳು ಅನ್ಯದ್ವೇಷಕ್ಕೆ ಎಡೆಗೊಡುತ್ತವೆ ಎಂದು ತಜ್ಞರ ಅಭಿಪ್ರಾಯ. "ಭಿನ್ನ ರುಚಿರ್ಲೋಕಃ" ಎಂಬ ಮಾತು ಸಾಂಸ್ಕೃತಿಕ ವಿಷಮತೆಯನ್ನು ಸೂಚಿಸುತ್ತದೆ; ರಸದೃಷ್ಟಿಯನ್ನು ನಿರ್ಣಯಿಸುತ್ತದೆ. ಅರಿಷಡ್ವರ್ಗವು ರಾಗದ್ವೇಷಗಳನ್ನು, ಅದೇ ಮೇರೆಗೆ ವರ್ಗೀಕರಿಸುತ್ತದೆ. ಪೂರ್ವಗ್ರಹವೆಂಬುದು ರುಚಿಭೇದ, ಕಾಮಕ್ರೋಧಾರಿ ಭಾವನೆ ಇವುಗಳೆರಡನ್ನೂ ಪ್ರತಿನಿಧಿಸುತ್ತದೆ. "ಜಾಮಾತಾ ದಶಮೋ ಗ್ರಹಃ" ಎಂಬುದು ಹಾಸ್ಯದ ಮಾತಾದರೆ ಪೂರ್ವಗ್ರಹ ನಿಜವಾಗಿಯೂ ಮಾನವರ ಆತ್ಮಕ್ಕೆ ಹಿಡಿಯುವ ದುರ್ವಿಲಂಘ್ಯವೂ ದುಃಶಾಸ್ಯವೂ ಆದ ದಶಮಗ್ರಹ ಎನ್ನಬೇಕು. ಭೇದಸೂತ್ರಾವಲಂಬಿಯಾದ ಪೂರ್ವಗ್ರಹ ರಸರುಚಿಗ್ರಥಿತವಾದ ಸಂಸ್ಕೃತಿಯ ಮತ್ತು ಪುರಸ್ಕಾರ ತಿರಸ್ಕಾರ ಗ್ರಥಿತವಾದ ರಾಗದ್ವೇಷ ಇವುಗಳ ಮೂಲಕ ಕೆಲವರ ಒಂದುತನಕ್ಕೂ ಮತ್ತೆ ಕೆಲವರ ಹಲವುತನಕ್ಕೂ ಕಾರಣವಾಗಿದೆ.

ಒಂದಿಕೆಯು ರಾಗದ, ಪ್ರೇಮದ, ಆನಂದದ, ಉದಾತ್ತತೆಯ ಅಡಿಗಲ್ಲು. ಅದಕ್ಕಾಗಿ ಶ್ರಮಿಸುವ ಮಾನವರು ಭೇದಗ್ರಹಣವನ್ನು ಸ್ವೀಕರಿಸಿದರೆ ಉದ್ದೇಶ ಹಾನಿಯಾಗದೆ ಉಳಿಯದು. ಜಾತಿ ಜಾತಿಗಳ, ವರ್ಣ ವರ್ಣಗಳ, ಲಿಂಗ ಲಿಂಗಗಳ, ಉದ್ಯಮಿ ಉದ್ಯಮಿಗಳ ಕಲಹ, ದ್ವೇಷ, ಅಸೂಯೆಗಳು ನಿಲ್ಲಲು ಪ್ರೇಮತತ್ತ್ವಾವಲಂಬಿಯಾದ ಅಹಿಂಸಾತಂತ್ರವನ್ನೇ ಆಶ್ರಯಿಸುವುದು ಶ್ರೇಯಸ್ಕರ ಎಂಬುದನ್ನು ಸಂಯುಕ್ತ ರಾಷ್ಟ್ರಸಂಘವು ಅರಿತು ನಿರ್ಣಯಿಸಿ ಆಚರಣೆಗೆ ತರುವುದು ಅಗತ್ಯ. ಅಹಿಂಸಾಘಟಿತ ಸಾಮಾಜಿಕ ಮತ್ತು ರಾಜಕೀಯ ಪದ್ಧತಿಯೊಂದೇ ನಾಗರಿಕ, ಮಿಕ್ಕದ್ದೆಲ್ಲ ಅನಾಗರಿಕ ಎಂದು ಸಂಯುಕ್ತ ರಾಷ್ಟ್ರ ಸಂಘವು ಘೋಷಿಸಬೇಕು. ಅಂಥ ಪಂಥ ದೇಶ ದೇಶಗಳಲ್ಲಿ ಬೆಳೆಯಲು ಅನುಕೂಲ ವಾತಾವರಣವನ್ನು ಕಲ್ಪಿಸಿ ಕೊಡಬೇಕು. ಭೇದವ ಸಮಾಧಿಯಾದ ದಿನ ರಾಜಕಾರಣದ, ರಾಜ್ಯತಂತ್ರದ ವಂಚನಾಪ್ರೈಖರಿಗೆ ಇತಿಶ್ರೀ ಬರೆದಂತಾಗಿ ಜಾಗತಿಕ ಸರಕಾರ ರಚನೆಗೆ, ವಿಶ್ವಭ್ರಾತೃತ್ವಕ್ಕೆ ನೆಲಗಟ್ಟು ಹಾಕಿಕೊಟ್ಟಂತಾಗುತ್ತದೆ. ಮಾನವ ಪ್ರಗತಿಯ ನಿಜವಾದ ಲಕ್ಷಣ ಅಲ್ಲಿಂದ ಸ್ಪಷ್ಟವಾಗಿ ಕಾಣಬರುವುದು. ಅವರೆಗೆ ಸಂಧಿ, ಶಾಂತಿ, ಮಿತ್ರತ್ವದ ಕರಾರು ಈ ಯಾವುದೂ ಚಿರಕಾಲಿಕ, ಅವಲಂಬನೀಯ, ವಿಶ್ವಾಸಾರ್ಹ ಎನಿಸದು. ಸರ್ವೋದಯದ ಕಲ್ಪನೆ ಸೂಚಿಸುವ ವಿಶ್ವೋದಯಕ್ಕೆ ಭೇದೋಪಸಂಹಾರ ಅವಶ್ಯಕ; ಸಾಂಸ್ಕೃತಿಕ ಏಕೀಕರಣ ಅನಿವಾರ್ಯ; ಅರಿಷಡ್ವರ್ಗಜನ್ಯ ಭ್ರಮುನಿರಸನ ಅಗತ್ಯ. ದೃಷ್ಟಿ ಬದಲಾದರೆ ಸೃಷ್ಟಿ ಬದಲಾಗಿಯೇ ತೋರುವುದಲ್ಲವೆ? ಅಂಥ ಸಮ್ಯಗ್ ದೃಷ್ಟಿಯನ್ನು, ವಿಶ್ವಕುಟುಂಬಿತ್ವವನ್ನು ಜಾಗತಿಕ ಶಿಕ್ಷಣ ಸಂಸ್ಥೆಗಳ ಮೂಲಕ ಜಗತ್ತಿನ ಸ್ತ್ರೀ ಪುರುಷರಿಗೆ ಬೋಧಿಸುವ ವ್ಯವಸ್ಥೆಯನ್ನು ಮಾಡಲು ಇದೀಗ ಸುವರ್ಣ ಸಂಧಿ.

ಮೇಲೆ ಹೇಳಿದ ವರದಿಗಾರರು ಭೇದನಿರಸನಕ್ಕೆ ವ್ಯಕ್ತಿ ಸ್ವಾತಂತ್ರ್ಯಕ್ಕೆ ಭಂಗ ಬರದಂತೆ ಕಾಯದೆಯ ಮೂಲಕ ಸಮಾನತೆಯನ್ನು ಸ್ಥಾಪಿಸುವುವೇ ಮದ್ದೆಂದು ಹೇಳಿದ್ದಾರೆ. ಜಗತ್ತಿನ ಎಲ್ಲ ದೇಶಗಳೂ ಈ ಆದೇಶವನ್ನು ಸ್ವೀಕರಿಸಿ ಅಮಲಿನಲ್ಲಿ ತರುವುದರ ಜೊತೆಗೆ ಅಹಿಂಸೆಯನ್ನು ಧರ್ಮವೆಂದು ಅಂಗೀಕರಿಸಿ ಅದರ ಆಚರಣೆಯನ್ನು ಶೈಕ್ಷಣಿಕ ಸಾಧನಗಳ ಮೂಲಕ ವ್ಯವಸ್ಥಿತವಾಗಿ ಸಾಗಿಸಬೇಕು; ಆಗ ಕಾಯದೆಯ ಬಲದಿಂದ ಹತ್ತಿಕ್ಕಲಾದ ದ್ವೇಷಾಸೂಯೆ ಭ್ರಮೆ ಅಹಂಕಾರಗಳು ನಾಮಶೇಷವಾದಾವು; ಹಾಗಲ್ಲದೆ ಕೇವಲ ಕಾಯದೆಯೊಂದೇ ಅಹಿಂಸೆಯ ರಕ್ಷಕವಾದರೆ ಆಗ ಹಿಂಸೆಯಿಂದಲೇ ಭಯದಿಂದಲೇ ಪ್ರಜೆಗಳನ್ನು ಆಳುವ ಅಗತ್ಯವೊದಗಿ ಸರಕಾರದ ಪರೋಪದೇಶಪಾಂಡಿತ್ಯಕ್ಕೆ ನಿದರ್ಶನವಾಗಿ ವಂಚನೆಯ ಮೂಲಕ ಜನರಲ್ಲಿಯ ಅಹಿಂಸಾಶ್ರದ್ಧೆ ಶಿಥಿಲಗೊಳ್ಳುವುದು. ಆದುದರಿಂದ ಪೂರ್ವಗ್ರಹದ ಪೀಡೆಯನ್ನು ಕಟ್ಟಲು ಅಹಿಂಸಾಸಂಸ್ಕೃತಿಯ ಪ್ರಗ್ರಹವನ್ನು ಮಾನವರ ಕೈಗೆ ಕೊಡಬೇಕಲ್ಲದೆ ಕೇವಲ ವಾಕ್ಸೇವೆಯಿಂದ ಯಾವ ಪ್ರಯೋಜನವೂ ಆಗದು. —ಸಮಾಜಭೀಷಜ

ಸತ್ತವನಿಗೆ ನ್ಯಾಯದಾನ

ಪ್ರತಿಯೊಂದು ಸುಸಂಘಟಿತ ದೇಶದ ಕಾಯದೆಯ ಇತಿಹಾಸದಲ್ಲಿಯೂ ಅನೇಕ ವಿಚಿತ್ರ ತರದ ಸಂಗತಿಗಳು ಕಾಣಸಿಗುತ್ತವೆ. ಉದಾಹರಣೆಗಾಗಿ ಇಂಗ್ಲಂಡಿನಲ್ಲಿ ಒಂದನೇ ಜೇಮ್ಸನು ಪಟ್ಟಕ್ಕೆ ಬಂದಾಗ, ಒಂದನೇ ಚಾರ್ಲ್ಸನನ್ನು ವಿಚಾರಣೆಗೆ ಗುರಿಪಡಿಸಿ ಮರಣದಂಡನೆ ವಿಧಿಸಿದ್ದ ಆಲಿವರ ಕ್ರಾಮವೆಲ್ಲನನ್ನು ಅವನ ಗೋರಿಯಿಂದ ಹೊರತೆಗೆದು ಗಲ್ಲಿಗೇರಿಸಲಾಯಿತು. ಸತ್ತವರ ಮೇಲೆ ಹೀಗೆ ಸೇಡು ತೀರಿಸಿಕೊಂಡ ಕಾಯದೆ ಇಂಗ್ಲಂಡಿನದಾದರೆ ಕೆಲ ದಿನಗಳ ಹಿಂದೆ ಫ್ರಾನ್ಸಿನ ನ್ಯಾಯಾಲಯವೊಂದು ಸತ್ತವನಿಗಾದ ಶಿಕ್ಷೆಯನ್ನು ೯೨ ವರ್ಷಗಳ ನಂತರ ರದ್ದುಗೊಳಿಸಿ ಅವನನ್ನು ನಿರಪರಾಧಿಯೆಂದು ಸಾರಿತು.

ಅವನು ಸಾಹಿತಿಯಾಗಿದ್ದ. ಹೆಸರು ಚಾರ್ಲ್ಸ ಬಾಡಲೇರ್. ೯೨ ವರ್ಷಗಳ ಹಿಂದೆ, ೧೮೫೭ ರಲ್ಲಿ ಅವನನ್ನು ಪ್ಯಾರೀಸ್ ಪೋಲೀಸು ಕೋರ್ಟಿನಲ್ಲಿ ವಿಚಾರಣೆಗೆ ಗುರಿಪಡಿಸಿ ಅವನು ಪ್ರಕಟಿಸಿದ ಕವಿತಾ ಸಂಗ್ರಹದ ಕೆಲ ಪದ್ಯಗಳು ಸಾರ್ವಜನಿಕ ನೀತಿಗೆ ಬಾಧಕವಾದವುಗಳೆಂದು ಶಿಕ್ಷೆಗೆ ಗುರಿಪಡಿಸಲಾಯಿತು. ಅವನು ಜೀವಮಾನವೆಲ್ಲ ಈ ಶಿಕ್ಷೆಯನ್ನು ರದ್ದುಗೊಳಿಸುವಂತೆ ಮಾಡಲು ಹೆಣಗಿದ್ದನು. ಆದರೆ ಯೂಜಿನ್ ರಾಣಿಯನ್ನೇ ಪ್ರಾರ್ಥಿಸಿದರೂ ಅವನಿಗಾದ ೩೦೦ ಫ್ರಾಂಕ್ ದಂಡ ೫೦ ಕ್ಕಿಳಿಸಲ್ಪಟ್ಟಿತಲ್ಲದೆ ಶಿಕ್ಷೆ ರದ್ದಾಗಲಿಲ್ಲ. ಕ್ರುದ್ಧನಾದ ಕವಿ ನ್ಯಾಯಾಧೀಶರ ಬಗ್ಗೆ ಬರೆದುದು: "ಈ ನ್ಯಾಯಾಧೀಶರು ಶುದ್ಧ ಅಷ್ಟಾವಕ್ರರು; ಮತ್ತು ಅವರ ಅಂತರಂಗವಾದರೂ ಅಷ್ಟೇ ಅಷ್ಟಾವಕ್ರವಾಗಿದೆ."

ಈ ಕಲಂಕ ಅವನ ಮರಣಾನಂತರವೂ ಮಾಯಲಿಲ್ಲ. ಆದರೆ ಎರಡನೆ ಮಹಾಯುದ್ಧದ ನಂತರ ಅವನ ಅಭಿಮಾನಿಗಳಿಗೆ ಯೋಗ್ಯ ಸಂದರ್ಭವೊಂದು ದೊರಕಿತು. ನೈತಿಕ ರೂಢಿಯನ್ನು ಮುರಿದ ಬಗ್ಗೆ ಶಿಕ್ಷೆಗೊಳಗಾದ ಲೇಖಕರ ಶಿಕ್ಷೆಗಳ ಪುನರ್ವಿಚಾರ ಮಾಡಲು ಈಚೆಗಿನ ಕಾಯದೆಯೊಂದು ಸಂಧಿಯೊದಗಿಸಿದೆ.

ಫ್ರಾನ್ಸಿನ ಲೇಖಕರು ಈ ಸಂಧಿಯನ್ನು ಬಿಡಲಿಲ್ಲ. ಅವರು ೯೨ ವರ್ಷ ಹಳೆಯ ಬಾಡಲೇರ ಪ್ರಕರಣವನ್ನು ಪುನಃ ನ್ಯಾಯಾಲಯದ ಮುಂದೆ ತಂದರು. ನ್ಯಾಯಾಲಯವು ಆ ಚಿರಮೃತ ಲೇಖಕನನ್ನು ನಿರ್ದೋಷಿಯೆಂದು ಸಾರಿತು.

ಮೋಟಾರಿನಲ್ಲಿ ಸುಧಾರಣೆ

ಟ್ಯೂಬ್ ರಹಿತ ಟಯರ್

ಮೋಟಾರಿನ ಗಾಲಿಯ ರಬ್ಬರ್ ಟಯರಿನೊಳಗೊಂದು ತೆಳ್ಳನ್ನ ರಬ್ಬರಿನ ಗಾಳಿಚೀಲ ಅಥವಾ ಟ್ಯೂಬ್ ಇರುವದನ್ನು ನೋಡಿಲ್ಲದವರಾರು? ಆದರೆ ಈ ಟ್ಯೂಬಿನ ಸಂಕಟವನ್ನು ಮೋಟಾರಿಟ್ಟುಕೊಂಡವರೇ ಬಲ್ಲರು. ತೆಳ್ಳನ್ನ ಈ ಗಾಳಿಚೀಲದ ಗಾಳಿಯೊಮ್ಮೆ ದರೂ 'ಸೋರ' ತೊಡಗಿದರೆ ಮುಗಿತು. ಅದನ್ನು ಸರಿಪಡಿಸಿದ ಹೊರತು ಮೋಟಾರು ಸಾಗುವದೇ ಅಸಾಧ್ಯಪ್ರಾಯವಾಗಿಬಿಡುವದು. ಮೇಲಾಗಿ ಮಾರ್ಗದಲ್ಲಿರುವ ಮೊಳೆ, ಗಾಜಿನ ಚೂರು ಮೊದಲಾದವುಗಳು ಗಾಲಿಗೆ ಪಟ್ಟು ನಾಲ್ಕು ಸುತ್ತು ತಿರುಗಿದರೆ ಸಾಕು. ಅದು ಟ್ಯೂಬಿಗೆ ನಾಟಿ ಅದು ತೂತುಬಿದ್ದು ರಥ ನಿಂತೇ ಹೋಗುವದು. ಅಲ್ಲದೆ ಟಯರಿನೊಳಗೊಂದು ಟ್ಯೂಬ್ ಇರುವದರಿಂದ ಇನ್ನೂ ಎಷ್ಟೋ ರಗಳೆಗಳು ಗಂಟು ಬೀಳುತ್ತವೆ.

ಆದರೆ ಈಗ ಅಮೇರಿಕೆಯಲ್ಲಿ ಈ ದೋಷಗಳಿಂದ ಬಹಳ ಮಟ್ಟಿಗೆ ಮುಕ್ತವಾದ ಟ್ಯೂಬೇ ಅವಶ್ಯವಿಲ್ಲದ ಟಯರುಗಳು ಈಚೆಗೆ ಉಪಯೋಗಕ್ಕೆ ಬರತೊಡಗಿವೆ. ಪ್ರಸಿದ್ಧ ಗುಡ್‌ರಿಚ್ ಕಂಪನಿಯವರು ಇದನ್ನು ತಯಾರಿಸಿದ್ದು, ಇನ್ನೂ ಎರಡು ಮೂರು ಕಂಪನಿಗಳು ಬೇಗನೆ ಉತ್ಪಾದನೆಯನ್ನು ಪ್ರಾರಂಭಿಸಬಹುದು.

ಈ ಹೊಸ ಟಯರುಗಳ ನಿರ್ಮಾಪಕನಾದ ಇಂಜಿನಿಯರ ಫ್ರಾಂಕ್ ಹರಡ್ಸೋಗನು ಅನೇಕ ವರ್ಷಗಳ ಹಿಂದೆ ಈ ಟ್ಯೂಬ್‌ರಹಿತ ಟಯರುಗಳಿಗಾಗಿ ಪ್ರಯತ್ನಪಡತೊಡಗಿದಾಗ ಅಮೇರಿಕನ್ ತಜ್ಞರಲ್ಲಿ ಬಹು ಜನರು ಇದು ಶುದ್ಧ ಕಾಲಹರಣವೆಂದು ಟೀಕಿಸಿದ್ದರು. ಆದರೆ ಹರಡ್ಸೋಗನು ಅದಕ್ಕೆ ಕಿವಿಗೊಡದೆ ಸಾವಿರಾರು ಬಗೆಯ ಎರಕಗಳುಳ್ಳ ರಬ್ಬರುಗಳನ್ನುಪಯೋಗಿಸಿ ಕೊನೆಗೆ ಕೃತಕೃತ್ಯನಾದ.

ಹರಡ್ಸೋಗನ ವ್ಯವಸ್ಥೆಯಲ್ಲಿ, ಟ್ಯೂಬಿಗೆ ಗಾಳಿ ಹಾಕುವ ಬದಲು ಟಯರಿಗೇ ಗಾಳಿ ಹಾಕಲಾಗುತ್ತದೆ. ಅದಕ್ಕಾಗಿ ಟಯರ್ ಮತ್ತು ಗಾಲಿಯ ಅಂಚು ಅಥವಾ "ರಿಂ" ಸೇರುವಲ್ಲಿ ಈಗ ಟ್ಯೂಬುಗಳಿಗಿರುವಂಥದೇ ವಾಲ್ವ ಇರುತ್ತದೆ. ಟಯರನ್ನು "ರಿಂ"ಗೆ ಒತ್ತಿ ಗಾಳಿ ಹೊರಗೆ ಹೋಗದಂತೆ ಬಿಗಿಯಾಗಿ ಮುಚ್ಚಿಕೊಳ್ಳುವಂತೆ ಟಯರಿನ ಒಳಬಾಯಿ (ಟಯರ್ ಮತ್ತು ರಿಂ ಕೂಡುವಲ್ಲಿ) ರಬ್ಬರ್ ರಿಜ್‌ಗಳಿಂದ (rubber ridge) ಮಾಡಲ್ಪಟ್ಟಿರುತ್ತದೆ. ಸ್ಟ್ಯಾಂಡಾರ್ಡ ಆಯಿಲ್ ಕಂಪನಿಯವರು ತಯಾರಿಸಿದ ವಿಶೇಷ ಶಕ್ತಿಶಾಲಿಯಾದ ಬ್ಯುಟಿಲ್ ರಬ್ಬರಿನಿಂದ ಈ ಟಯರು ನಿರ್ಮಿಸಲ್ಪಟ್ಟಿದೆ. ಸಾಮಾನ್ಯ ರಬ್ಬರಿನ ಒಂದಿಂಚು ದಪ್ಪದ ಪದರಿಗಿರುವಷ್ಟೇ ಬಲ ಇದರ ೧/೧೦ ಇಂಚಿನ ಪದರಿಗಿದೆಯಂತೆ.

ಈ ಹೊಸ ಟಯರಿನ ವೈಶಿಷ್ಟ್ಯವೆಂದರೆ ಅದರಲ್ಲಿ ಮೊಳೆ ಕಲ್ಲು ಮೊದಲಾದವು ಚುಚ್ಚಿ ತೂತಾದರೆ ಆ ಚುಚ್ಚಿದ ವಸ್ತುವನ್ನು ಹೊರಗೆಳೆದೊಡನೆ ತೂತು ತಾನಾಗಿಯೆ ಮುಚ್ಚಿಕೊಂಡುಬಿಡುತ್ತದೆ. ಒಳಗಿನ ಗಾಳಿ ಸೋರುವದಿಲ್ಲ. ಇದಕ್ಕಾಗಿ ಟಯರಿಗೆ ಗಂ ರಬ್ಬರಿನ ಒಂದು ಹೆಚ್ಚಿಗೆ ಪದರಿದೆ.

ಈ ಹೊಸ ಟ್ಯೂಬ್ ರಹಿತ ಟಯರುಗಳ ತಾಳಿಕೆಯೂ ಸಾಮಾನ್ಯ ಟಯರಿಗಿಂತ ಹೆಚ್ಚಾಗಿದೆ; ಅತ್ಯಾಧುನಿಕ ಸಾಮಾನ್ಯ ಟಯರುಗಳು ಸುಮಾರು ೨೫೦೦೦ ಮೈಲುಗಳ ಪ್ರಯಾಣವನ್ನು ತಡೆದುಕೊಂಡರೆ ಈ ಹೊಸ ಟಯರುಗಳಲ್ಲಿ ಕೆಲವು ೪೦೦೦೦ ಮೈಲುಗಳಿಗಿಂತಲೂ ಹೆಚ್ಚು ಪ್ರಯಾಣವನ್ನು ತಾಳಿಕೊಂಡಿವೆ. ಅದರಲ್ಲಿ ತುಂಬುವ ಗಾಳಿಯ ಪ್ರಮಾಣ ಸಾಮಾನ್ಯ ಟ್ಯೂಬುಗಳಿಗೆ ಬೇಕಾದಷ್ಟೆ ಇದೆ.

ಇದರ ಬೆಲೆಯಾದರೊ ಈ ಪ್ರಾರಂಭಾವಸ್ಥೆಯಲ್ಲಿ ಕೂಡ ಬಹಳ ಹೆಚ್ಚಿಲ್ಲ. ಅದು ಕೊಡುವ ಮೈಲೇಜಿನಿಂದ ಲೆಕ್ಕ ಹಾಕಿದರೆ ಹಳೆ ಟಯರ್ ಟ್ಯೂಬ್‌ಗಳಿಗಿಂತ ನೂರಕ್ಕೆ ೧೬ ರಷ್ಟು ಮಾತ್ರ ಇದರ ಬೆಲೆ ಹೆಚ್ಚು. ಹೆಚ್ಚು ಉತ್ಪಾದನೆಯಾಗುವಾಗ ಬೆಲೆ ಇಳಿಯುವಲ್ಲಿ ಸಂದೇಹವೇ ಇಲ್ಲ.

ಆದರೆ ಇದರಲ್ಲಿಯೂ ಕೆಲ ತೊಡಕುಗಳಿಲ್ಲದೆ ಇಲ್ಲ. ಗಾಲಿಯ ರಿಂ ಬಾಗಿದ್ದರೆ ಅಥವಾ ಅದಕ್ಕೆ ಬಹಳ ತುಕ್ಕು (ಜಂಗು) ಹಿಡಿದಿದ್ದರೆ ಗಾಳಿ ಸೋರುವ ಸಂಭವವಿದೆ. ಅಲ್ಲದೆ ಇದಕ್ಕೆ ದೊಡ್ಡ ಗಾಜಿನ ಚೂರು ಅಥವಾ ಕೋಳವೆಯಂಥ ವಸ್ತು ನಾಟಿದರೆ ಗಾಳಿ ಹೋಗಿಬಿಡಬಹುದು.

ವಿಚಾರದ್ವಂದ್ವ

ಗುಣಕರ್ಮ ಸ್ವಭಾವಗಳಿಂದಲೇ ವರ್ಣ

ಶ್ರೀಮಾನ್ ಗ. ಸು. ಪಾಟೀಲ ಬರಿಗೆ— ಇವರು "ಕರ್ಮವೀರ"ದ ತಾ. ३०-६-४९ರ ಸಂಚಿಕೆಯಲ್ಲಿ ಬರೆದ "ಜನ್ಮದಿಂದಲೆ ವರ್ಣ", ಎಂಬ ಲೇಖನವನ್ನು ಗಮನ ಕೊಟ್ಟು ಓದಿದೆ. ಅದನ್ನೋದಿದ ಮೇಲೆ, ನನ್ನ ಮನಸ್ಸಿನ ಮೇಲಾದ ಪ್ರತಿಕ್ರಿಯೆಯನ್ನು ಸಂಕ್ಷೇಪವಾಗಿ ಬಣ್ಣಿಸುತ್ತೇನೆ.

ಶ್ರೀಯುತರು "ಚಾತುರ್ವರ್ಣ್ಯಂ ಮಯಾ ಸೃಷ್ಟಂ" ಎಂಬ ಗೀತಾ ಶ್ಲೋಕವನ್ನು ಉದಾಹರಿಸಿ, ಅದರ ಆಧಾರದ ಮೇಲಿಂದ ವರ್ಣವು ಗುಣಕರ್ಮ ಸ್ವಭಾವಾಶ್ರಿತವಾದುದೆಂಬ ತೀರ್ಮಾನಕ್ಕೆ ಬರುವದು ತಮಗೆ ಸಮ್ಮತವಲ್ಲವೆಂದು ಹೇಳಿ ತಮ್ಮ ಅಭಿಪ್ರಾಯದಲ್ಲಿ "ಜನ್ಮವೂ ಪ್ರಧಾನ" ಎಂದು ಬರೆದಿದ್ದಾರೆ. ಮುಂದೆ ಒಂದು ಕಡೆ ಶ್ರೀಯುತರು "ತಂದೆ ತಾಯಿಗಳ ಗುಣಕರ್ಮಗಳನ್ನೇ ಮಕ್ಕಳು ಅನುಸರಿಸುವುದು ಹೆಚ್ಚು ಸುಲಭವೂ ಸ್ವಾಭಾವಿಕವೂ ಆಗಿದೆ" ಎಂದಿದ್ದಾರೆ. ಈ ಮಟ್ಟಿಗೆ ಜನ್ಮವೂ ವರ್ಣನಿರ್ಣಯಕ್ಕೆ ಸಾಧನವಾಗಬಹುದೆಂಬ ಮಾತನ್ನು ಒಪ್ಪಬಹುದಾದರೂ "ಕಮ್ಮಾರನ ಮಕ್ಕಳೆಲ್ಲಾ ಕಬ್ಬಿಣವನ್ನೇ ಕುಟ್ಟಬೇಕು; ಚಮ್ಮಾರನ ಮಕ್ಕಳೆಲ್ಲಾ ಚಪ್ಪಲಿ ಹೊಲಿಯುತ್ತಲೇ ತಮ್ಮ ಬಾಳನ್ನು ತೇಯ್ದುಬಿಡಬೇಕು" ಎಂಬ ಸಿದ್ಧಾಂತಕ್ಕೆ ಬರುವುದು, ಮಾನವನ ವಿಕಾಸದ ಬುಡಕ್ಕೇ ಕೊಡಲಿ ಪೆಟ್ಟು ಹಾಕುವಂತಹ ಘಾತಕ ಮನೋವೃತ್ತಿಯನ್ನು ಸೂಚಿಸುತ್ತದೆ. ಕಮ್ಮಾರನ ಮಗ ಕಮ್ಮಾರನೇ ಆಗಬೇಕೆಂಬ, ಚಮ್ಮಾರನ ಮಗ ಚಮ್ಮಾರನೇ ಆಗಬೇಕೆಂಬ ನಿರ್ಬಂಧವೇನೂ ಇಲ್ಲ. ಇದು, "ವಕೀಲರ ಮಗ ವಕೀಲನೇ ಆಗಬೇಕು; ಡಾಕ್ಟರನ ಮಗ ಡಾಕ್ಟರನೇ ಆಗಬೇಕು; ಒಂದು ವೇಳೆ ವಕೀಲರ ಮಗನಲ್ಲಿ ವಕೀಲನಾಗಲು ಬೇಕಾದ ಶಕ್ತಿಯಿಲ್ಲದಿದ್ದರೆ, ಆ ಶಕ್ತಿ ತುಂಬಲು ಯತ್ನಿಸಬೇಕು. ಅದು ಸಾಧ್ಯವಾಗದೇ ಹೋದರೂ ಡಾಕ್ಟರನ ಮಗ, ಗುಣಕರ್ಮ ಸ್ವಭಾವಗಳಿಂದ ಡಾಕ್ಟರನಲ್ಲದಿದ್ದರೂ ಜನ್ಮತಃ ಅವನು ಡಾಕ್ಟರನೆಂದೇ ಒಪ್ಪಬೇಕು; ವಕೀಲನ ಮಗನಿಗೆ ವಕೀಲ ವೃತ್ತಿ ಬಾರದಿದ್ದರೂ ಅವನು ಜನ್ಮತಃ ವಕೀಲನೇ ಸರಿ"– ಎನ್ನುವಷ್ಟೇ ಅರ್ಥಗರ್ಭಿತವಾದ ಮಾತಾಗಿರುತ್ತದೆ.

"ದ್ರೋಣಾಶ್ವತ್ಥಾಮರು ಶುದ್ಧ ಕ್ಷತ್ರಿಯ ವೃತ್ತಿಯನ್ನವಲಂಬಿಸಿದರೂ ಅವರನ್ನು ಕ್ಷತ್ರಿಯರೆಂದು ಸಂಬೋಧಿಸಿದೆ, ಜನ್ಮವನ್ನೇ ಆಧಾರವಾಗಿಟ್ಟುಕೊಂಡು ಅವರನ್ನು ಬ್ರಾಹ್ಮಣರೆಂತಲೇ ಮಾನ್ಯ ಮಾಡಿದೆ"– ಎಂಬ ಮಾತಿನಿಂದ, ಮಹಾಭಾರತ ಕಾಲದಲ್ಲಿ ವರ್ಣವನ್ನು ಹುಟ್ಟಿನಿಂದ ಭಾವಿಸುವ ಪದ್ಧತಿಯುದ್ದಿತೆಂದು ಮಾತ್ರ ಹೇಳಿದಂತಾಯಿತೇ ಹೊರತು, ಅದನ್ನು ಧರ್ಮವೆಂದು ಹೇಳಿದಂತಾಗಲಿಲ್ಲ. ಭಗವದ್ಗೀತೆ ಸಹ ಐತಿಹಾಸಿಕ ಕಾವ್ಯವಾದ ಮಹಾಭಾರತದ ಒಂದು ಅಂಗವೇ ಆದ ಕಾರಣ, ತತ್ಕಾಲೀನ ಸಾಮಾಜಿಕ ಪದ್ಧತಿಗಳ ಚಿತ್ರ ಗೀತೆಯಲ್ಲಿಯೂ ಕಂಡುಬರುವದು ಸಹಜ. ಈ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡೇ ನಾವು ಗೀತೆಯಲ್ಲಿ ಕಂಡುಬರುವ ವ್ಯಾಘಾತದೋಷಗಳಿಗೆ ಸಮಾಧಾನ ಹುಡುಕಬೇಕಾಗುತ್ತದೆ. ದೃಷ್ಟಾಂತರೂಪವಾಗಿ, "ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ। ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ" ಎಂಬ ಶ್ಲೋಕದಲ್ಲಿ ವ್ಯಕ್ತವಾಗಿರುವ ಸಮಾನತೆಯ ಭವ್ಯ ಆದರ್ಶ, "ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ। ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಂ॥"– ಎಂಬ ಶ್ಲೋಕದಲ್ಲಿ ಕಂಡುಬರುತ್ತಿದೆಯೇ? ಸ್ತ್ರೀಯರೂ ವೈಶ್ಯರೂ ಶೂದ್ರರೂ 'ಪಾಪಯೋನಿ'ಗಳೇ? "ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ?". ಎಂಬ ವಾಕ್ಯವನ್ನು 'ಬಾಬಾ ವಾಕ್ಯಪ್ರಮಾಣ' ವಾದಿಗಳಾದ ತಥಾಕಥಿತ ಬ್ರಾಹ್ಮಣ ಕ್ಷತ್ರಿಯರನ್ನುಳಿದು, ಬೇರಾವ ವಿಚಾರಶೀಲರು ತಾನೇ "ಸರಿ" ಎನ್ನಬಲ್ಲರು? ಬ್ರಾಹ್ಮಣ, ಹಸು, ಆನೆ, ನಾಯಿ, ನಾಯಿಮಾಂಸ ತಿನ್ನುವಾತ ಇವರೆಲ್ಲರನ್ನು ಸಮಾನರೆಂದು ಕಾಣುವವರೇ "ಪಂಡಿತ"ರೆನ್ನುವವನೂ ಕೃಷ್ಣನೇ; "ಸ್ತ್ರೀಯರೂ ವೈಶ್ಯರೂ ಶೂದ್ರರೂ ಪಾಪಯೋನಿಗಳು"–ಎಂದು ಕರೆಯು, ಆ ಪಾಂಡಿತ್ಯಕ್ಕೆ ಸೊನ್ನೆ ಸುತ್ತುವವನೂ ಕೃಷ್ಣನೇ! ತಾತ್ಪರ್ಯವಿಷ್ಟೇ; ಮಹಾಭಾರತದಂತಹ ಕಾವ್ಯಗಳಿಂದ, ಆ ಕಾಲದ ರೀತಿ-ನೀತಿಗಳನ್ನರಿಯಬೇಕೇ ಹೊರತು, ಅದನ್ನು ಧರ್ಮವೆನ್ನಲು ಹೊರಡಬಾರದು.

"ಕೈಯನ್ನು ಅಭ್ಯಾಸಬಲದಿಂದ ಕಾಲಿನ ಕೆಲಸಕ್ಕೆ ಉಪಯೋಗಿಸಿಕೊಂಡರೂ ಅದನ್ನು ಕೈಯೆಂದು ಕರೆಯುತ್ತೇವೆಯೇ ಹೊರತು, ಕಾಲೆನ್ನಲಾಗುವುದಿಲ್ಲ" ಎಂಬ ತೀರ್ಮಾನದ ಹಿಂದೆಯೂ ಆಳವಾದ ಯೋಜನೆಯಿಲ್ಲ. ಲಕ್ಷಾಂತರ-ಕೋಟ್ಯಂತರ ಜನರು ಕೈಯಿಂದಲೇ ನಡೆಯಲು ಕಲಿತು, ದೇಶಕ್ಕೆ ದೇಶವೇ ಕೈಯೂರಿ ನಡೆವವರಾದ 'ಹಸ್ತಪಾದ'ರ ನೆಲೆವೀಡಾಗಿ ಹೋದರೆ, ಆಗ ಕೈಯನ್ನೇ ಕಾಲೆಂದು ಕರೆಯುವುದರಲ್ಲಿ ಆಶ್ಚರ್ಯವೇನಿದೆ? ಅಥವಾ 'ಕಾಲು' ಎಂಬುದಕ್ಕೆ ಈಗಿರುವ ಅರ್ಥ ಆಗ 'ಕೈ'ಗೆ ಬರುವುದರಲ್ಲಿ ಸಂದೇಹವೇನಿದೆ?

"ಬ್ರಾಹ್ಮಣನು ಶೂದ್ರನಾಗಬಹುದು; ಶೂದ್ರನು ಬ್ರಾಹ್ಮಣನಾಗಬಹುದು. ಯಾರು ಯಾವ ವರ್ಣಕ್ಕೆ ಬೇಕಾದರೂ ಸೇರಬಹುದು. ಎಂಬುದೂ ಸರಿಯಲ್ಲ" ಎಂದು ಹೇಳುವಾಗ ಶ್ರೀಯುತರು, . ಮನುಮಹಾರಾಜನ– "ಶೂದ್ರೋ ಬ್ರಾಹ್ಮಣತಾಮೇತಿ ಬ್ರಾಹ್ಮಣಶ್ಚೈತಿ ಶೂದ್ರತಾಂ। ಕ್ಷತ್ರಿಯಾಜ್ಜಾತಮೇವಂ ತು ವಿದ್ಯಾದ್ವೈಶ್ಯಾತ್ತಥೈವ ಚ॥"- ಎಂಬ ಮಾತನ್ನು ತಪ್ಪೆಂದು ನಿರ್ಣಯಿಸಿದಂತಿದೆ. ಮನು ಸ್ಫುಟವಾಗಿ "ವರ್ಣ ಜನ್ಮದಿಂದ ಬಾರದು; ಯೋಗ್ಯತೆಯಿಂದಲೇ ಬರುತ್ತದೆ"- ಎಂದಿದ್ದಾನೆ: ಕೇಳಿರಿ:—

ಕಾಮಾನ್ಮಾತಾ ಪಿತಾಚೈನಂ ಯದುತ್ಪಾದಯತೋ ಮಿಥಃ।
ಸಂಭೂತಿಂ ತಸ್ಯ ತಾಂ ವಿದ್ಯಾದ್ಯದ್ಯೋನಾವಭಿಜಾಯತೇ॥

"ತಂದೆತಾಯಿಗಳು ಇವನನ್ನು ಕಾಮಕ್ಕೆ ವಶರಾಗಿ ಹುಟ್ಟಿಸುತ್ತಾರೆ. ಈ ರೀತಿ ಯೋನಿಯಲ್ಲಿ ಹುಟ್ಟುವುದನ್ನು "ಹುಟ್ಟು"–ಎಂದು ಮಾತ್ರ ಹೇಳಬಹುದು."

ಆದರೆ:-

ಆಚಾರ್ಯಸ್ತ್ವಸ್ಯ ಯಾಂ ಜಾತಿಂ ವಿಧಿವದ್ವೇದಪಾರಗಃ।
ಉತ್ಪಾದಯತಿ ಸಾವಿತ್ರ್ಯಾ ಸಾ ಸತ್ಯಾ ಸಾಽಜರಾಮರಾ॥

"ಆಚಾರ್ಯನು ಗಾಯತ್ರೀ ಉಪದೇಶ ಮಾಡಿ, ಇವನಲ್ಲಿ ಯಾವ ಜಾತಿಯನ್ನುಂಟು ಮಾಡುತ್ತಾನೋ ಅದೇ ಸತ್ಯವಾದುದು; ಅದೇ ಅಜರ; ಅದೇ ಅಮರ; ವರ್ಣವು ಯೋಗ್ಯತಾಮೂಲಕವೆಂಬುದು ಎಷ್ಟು ಸ್ಪಷ್ಟವಾಗಿದೆ!

ವಿಶ್ವಾಮಿತ್ರ, ವಸಿಷ್ಠ ಮೊದಲಾದವರು. ಬ್ರಾಹ್ಮಣರಾದ ಘಟನೆಯನ್ನು ವಿವರಿಸಿ, ಶ್ರೀಯುತರು "ಅವರೆಲ್ಲರೂ ಗುಣಕರ್ಮಗಳಿಂದ ಅಪೂರ್ಣ ಬ್ರಾಹ್ಮಣರಾದರೂ ಜನ್ಮದಿಂದಲೂ ಬ್ರಾಹ್ಮಣ ಶರೀರ ಗಳಿಸಿಕೊಂಡಾಗಲೇ ಪೂರ್ಣ ಬ್ರಾಹ್ಮಣರಾದರು" ಎಂದು ಸಾರಿದ್ದಾರೆ. ವಿಶ್ವಾಮಿತ್ರ ವಸಿಷ್ಠಾದಿಗಳು ತಮ್ಮ ಅಬ್ರಾಹ್ಮಣ ಕುಲೀನ ಶರೀರಗಳನ್ನು ಪರಿತ್ಯಜಿಸಿ, ಬ್ರಾಹ್ಮಣಕುಲೀನ ಶರೀರಗಳನ್ನು ಅದಾವ ರೀತಿ ಪಡೆದರೆಂಬುದು ನಮಗಿನ್ನೂ ಅರ್ಥವಾಗಿಲ್ಲ! ಅದಾವ ಶಾಸ್ತ್ರದಲ್ಲಿ ಈ ರೀತಿ ಶರೀರ ಬದಲಾಯಿಸಿಕೊಳ್ಳುವ ವಿಧಿ-ವಿಧಾನ ವರ್ಣಿತವಾಗಿದೆಯೋ ನಾವರಿಯೆವು. ಇದೊಂದು ಪೊಳ್ಳು ಕಲ್ಪನೆ ಮಾತ್ರ.

"ಯಾವನೊಬ್ಬನಿಗೆ ಅಪವಾದರೂಪದಲ್ಲಿ ತನ್ನ ವಂಶದ ಕೆಲಸದಲ್ಲಿ ಪ್ರವೃತ್ತಿಯಿಲ್ಲದೆ, ಅನ್ಯರ ವೃತ್ತಿಯಲ್ಲಿ ಪ್ರವೃತ್ತಿಯುಂಟಾಗಬಹುದು" ಎಂಬ ಮಾತು ಇಂದಿನ ವಸ್ತುಸ್ಥಿತಿಗೆ ವಿಪರೀತವಾಗಿದೆ. ತಮ್ಮ ಆನುವಂಶಿಕ ವೃತ್ತಿಗಳಲ್ಲಿ ಪ್ರವೃತ್ತಿಯುಳ್ಳವರೇ ಇಂದು ಅಪವಾದರೂಪರಾಗಿದ್ದಾರೆ ಎಂಬುದೇ ಸತ್ಯ.

"ಜನ್ಮದಿಂದಲೇ ವರ್ಣವ್ಯವಸ್ಥೆಯಿರುವುದರಿಂದ ತೊಂದರೆಯಾದರೂ ಏನು?"– ಎಂದು ಪ್ರಶ್ನಿಸುತ್ತಾರೆ ಶ್ರೀಯುತರು. ಭಾರತವರ್ಷದ ೯ (?) ಕೋಟಿ ಹರಿಜನರನ್ನು ಕೇಳಿರಿ. ಒಂದರಿಂದ ನೂರಾಗಿ, ನೂರರಿಂದ ಸಾವಿರವಾಗಿ, ಲಕ್ಷವಾಗಿ, ಕೋಟಿಯಾಗಿ, ಭಾರತಾಂಬೆಯ ಶರೀರವನ್ನು ಕತ್ತರಿಸುವುದರಲ್ಲಿ ಕೃತಕಾರ್ಯರಾದ ಹತ್ತುಕೋಟಿ ಜನ ಮುಸಲ್ಮಾನರನ್ನು ಕೇಳಿರಿ. ಭಾರತದಲ್ಲಿರುವ ನಾಲ್ಕುಕೋಟಿ (?) ಕ್ರೈಸ್ತರನ್ನು ಕೇಳಿರಿ. ಜನ್ಮಗತವಾದ ವರ್ಣವ್ಯವಸ್ಥೆ ರೂಢವಾಗದಿದ್ದಲ್ಲಿ- ನಾವಿಂದು ಚೂರು ಚೂರಾಗಿ ಒಡೆದಿರುತ್ತಿರಲಿಲ್ಲ. ನಮ್ಮನಮ್ಮಲ್ಲಿ ಪರಸ್ಪರ ವೈಷಮ್ಯ ಹುಟ್ಟುತ್ತಿರಲಿಲ್ಲ.

"ಹೃದಯ ಒಂದಾದಾಗ, ಹೊರಗಿನ ಸಂಪ್ರದಾಯಗಳಿಂದ ಏನೂ ತೊಂದರೆಯಿಲ್ಲ." ನಿಜ. ಆದರೆ "ನಾನು ಹುಟ್ಟಿನಿಂದ ಬ್ರಾಹ್ಮಣ. ನೀನು ಶೂದ್ರ. ನಾನೇನು ಮಾಡಿದರೂ ಶೂದ್ರನಾಗಲಾರೆ; ನೀನೆಷ್ಟೇ ಲಾಗ ಹಾಕಿದರೂ ಬ್ರಾಹ್ಮಣನಾಗಲಾರೆ" ಎನ್ನಬಲ್ಲ ಹೃದಯವೂ ಬೇರೆ ಹೃದಯಗಳೊಂದಿಗೆ ಬೆರೆಯಬಲ್ಲದೇ ? ಜನ್ಮಗತವಾದ ಜಾತಿಭೇದ, ಹೃದಯ ಒಂದಾಗುವ ಅವಕಾಶವನ್ನು ಎಂದಿಗೂ ಕೊಡಲಾರದು. ಜಾತಿಭೇದದಿಂದ ಆಗಿರುವ ತೊಂದರೆ ಯಾರಿಗೆ ತಾನೇ ಗೊತ್ತಿಲ್ಲ? "ಸಾವಿರಾರು ವರ್ಷಗಳಿಂದ ಮಾಂಸಾಹಾರಿಯಾದ ಶೂದ್ರನೂ ಸಸ್ಯಾಹಾರಿಯಾದ ಬ್ರಾಹ್ಮಣನೂ ಧನಾಢ್ಯನಾದ ವೈಶ್ಯನೂ ಆಳುವ ಕ್ಷತ್ರಿಯನೂ ಅನ್ಯೋನ್ಯವಾಗಿ ಬಾಳುತ್ತ ಬಂದಿದ್ದಾರೆ!" ಏನು ಹೇಳಬೇಕು ಈ ಅನ್ಯೋನ್ಯತೆಗೆ! ಒಬ್ಬರೊಂದಿಗೊಬ್ಬರು ಸಮಾನತೆಯಿಂದ ಬೆರೆಯುವಂತಿಲ್ಲ! "ಹುಟ್ಟಿನಿಂದಲೇ ಬೇರೆ ಬೇರೆ ಜಾತಿ"– ಎಂಬ ರಾಕ್ಷಸೀ ಭಾವನೆ, ಜೊತೆಯಲ್ಲಿ ಕುಳಿತುಣ್ಣಲು, ಪರಸ್ಪರ ರಕ್ತಸಂಬಂಧ ಬೆಳೆಸಲು, ಪ್ರೇಮದಿಂದ ಮಾನವತ್ವವನ್ನೆತ್ತಿಹಿಡಿಯಲು ಅವಕಾಶ ಕೊಡುವಂತಿಲ್ಲ. ಅಸ್ಪೃಶ್ಯರು ಅಸ್ಪೃಶ್ಯರೇ, ಶೂದ್ರರು ಶೂದ್ರರೇ. ಎಲ್ಲರೂ ಬೇರೆ ಬೇರೆಯೇ ಇರಬೇಕು! ಮತ್ತೂ ಅನ್ಯೋನ್ಯತೆಯ ಗಾನ! ಬ್ರಿಟಿಶರು ಬರುವ ಮುನ್ನ ಜಾತಿ–ಜಾತಿಗಳ ನಡುವೆ ಬಡಿದಾಟ ನಡೆಯದಿದ್ದರೆ, ಅದಕ್ಕೆ ಕಾರಣ ಜನ್ಮಗತ ವರ್ಣದ ನಿರ್ದೋಷತೆಯಲ್ಲ; ಸಮಾಜದ ಕೆಳಮಟ್ಟದಲ್ಲಿದ್ದ ಶೂದ್ರಾದಿಗಳಲ್ಲಿದ್ದ ಅಜ್ಞಾನ, ಮಬ್ಬು ಮತ್ತು ಅಂಧಶ್ರದ್ಧೆ. ಅವರು ಅಜ್ಞಾನದಲ್ಲಿದ್ದರೆ ತಮ್ಮ ಮನೆ ಎತ್ತರದಲ್ಲಿರಲು ಸಾಧ್ಯವೆಂಬುದನ್ನರಿತು, "ಶೂದ್ರನು ವೇದ ಕೇಳಿದರೆ ಅವನ ಕಿವಿಗಳಲ್ಲಿ ಸೀಸ ಅರಗು ಕಾಯಿಸಿ ಹುಯ್ಯಬೇಕು, ಉಚ್ಚರಿಸಿದರೆ ನಾಲಿಗೆ ಕತ್ತರಿಸಬೇಕು; ವೇದ ಕ್ರಿಯಾನುಷ್ಠಾನ ಮಾಡಿದರೆ ಶರೀರವನ್ನೇ ತುಂಡರಿಸಬೇಕು"- ಎಂಬುದನ್ನು ಬರೆದವರೂ ಜನ್ಮತಃ ನಾವು ದೊಡ್ಡವರೆಂದು ತಿಳಿದ ಮಹನೀಯರೇ ಅಲ್ಲವೇ ? ಈ ವಾಕ್ಯ, ಅಸ್ಪೃಶ್ಯತೆ- ಇವೆಲ್ಲ ಅನ್ಯೋನ್ಯತೆಯ ಕುರುಹುಗಳೇ ತಾನೇ ? ಇಂದಿನ ಕೋಮುವಾರು ಭಾವನೆ ಒಳ್ಳೆಯ ಭಾವನೆಯಲ್ಲ. "ಜನ್ಮಗತವಾದ ವರ್ಣವ್ಯವಸ್ಥೆ" ಯ ರೂಪದಲ್ಲಿ ಅದಕ್ಕೆ ತನ್ನದೇ ಆದ ವಿಶಿಷ್ಟ ಘಾತಕ ಅಸ್ತಿತ್ವವಿದೆ. ಅದನ್ನು ಯಾರೂ ಅಲ್ಲವೆನ್ನುವಂತಿಲ್ಲ.

ಯೋಗ್ಯತಾನುಸಾರಿಯಾದ ವರ್ಣ ಅವ್ಯವಹಾರ್ಯವಲ್ಲ. ಒಲವಿದ್ದ ವೃತ್ತಿಯೆಡೆಗೆ ಬಾಗುವ ಸ್ವಾತಂತ್ರ್ಯ ಮಾನವನಿಗೆ ನಿಸರ್ಗಸಿದ್ಧವಾದುದು. ಹುಟ್ಟಿದ ಮಕ್ಕಳು ಕೇವಲ ಮಕ್ಕಳಾಗಿ ಹುಟ್ಟುತ್ತವೆಯೇ ಹೊರತು ಬ್ರಾಹ್ಮಣಾದಿ ನಾಮಧಾರಿಗಳಾಗಿ ಹುಟ್ಟುವುದಿಲ್ಲ. "ನಿನ್ನ ಕುಲ ಇದು"– ಎಂದು ಬೇರೊಬ್ಬರು ಹೇಳುವ ವರೆಗೆ ಮಕ್ಕಳಿಗೆ ಆ ಕಲ್ಪನೆ ಸಹ ಬರುವುದಿಲ್ಲ. "ಇಂತಹ ಕುಲದಲ್ಲಿ ಹುಟ್ಟಿದವರೇ ಸೇವೆ ಮಾಡಬೇಕು. "ಇಂತಹ ಕುಲದಲ್ಲಿ ಹುಟ್ಟಿದವರೇ ಸೇವೆ ಮಾಡಿಸಿಕೊಳ್ಳಬೇಕು" ಎಂದು ವೇದಾದಿ ಸತ್ಯ ಶಾಸ್ತ್ರಗಳೆಂದಿಗೂ ಹೇಳಿಲ್ಲ. ಎಲ್ಲರೂ ತಮ್ಮ ತಮ್ಮ ಯೋಗ್ಯತಾನುಸಾರ ಸೇವೆ ಸಲ್ಲಿಸುವ ಉದಾರ ನೀತಿಯನ್ನು ರೂಢಿಸಿಕೊಂಡರೆ, ಸಮಾಜ ವ್ಯವಸ್ಥೆ ಚೆನ್ನಾಗಿಯೇ ಆದೀತು. ವರ್ಣವ್ಯವಸ್ಥೆಗಾದರೂ ಅರ್ಥವಿರುವುದಾದಲ್ಲಿ, ಅದು ಯೋಗ್ಯತಾನುಸಾರವಾದುದೇ ಆಗಿರಬೇಕು. ಜನ್ಮಗತವಾದ ವರ್ಣವ್ಯವಸ್ಥೆ ಸ್ವಾರ್ಥ ಮತ್ತು ಅಂಧಕಾರಮಯವಾದ ಅಜ್ಞಾನಯುಗದ ಒಂದು ದುಷ್ಟ ಪದ್ಧತಿ ಮಾತ್ರ.

ಬೆಂಗಳೂರು —ಪಂ. ಸುಧಾಕರ

…ರೋಗಿಗಳ ವಸತಿ

…ನ ಒಂದು ಸ್ವತಂತ್ರ ಜಗತ್ತು



…ಂಗೇರಿ ಕುಷ್ಠ ರೋಗಿಗಳ ವಸತಿಯ ಆಸ್ಪತ್ರೆ



…ರೋಗಿಗಳು ಬಿಲಿಯಾರ್ಡ್ಸ್ ಆಡುತ್ತಾರೆ



ವಸತಿಯ ಸುಖಿಗಳಾದ ಮಕ್ಕಳು

ಆನೆ ಬೇಕೊಂದಾನೆಬೇಕು!

ಪಂ. ನೆಹರು ಅವರಿಗೆ ಜಪಾನಿ ಮಕ್ಕಳ ಪ್ರಾರ್ಥನೆ

"ನಮಗೊಂದು ಆನೆ ಕೊಡಿಸಿರಿ" ಎಂದು ಭಾರತದ ಮುಖ್ಯ ಮಂತ್ರಿ ಪಂ. ಜವಾಹರ ಲಾಲ ನೆಹರು ಅವರಿಗೆ ನೂರಾರು ಪತ್ರಗಳ ಮೂಲಕ ಜಪಾನಿ ಮಕ್ಕಳು ಪ್ರಾರ್ಥಿಸಿಕೊಂಡಿವೆ. ಅವುಗಳೆಲ್ಲ ಹೆಚ್ಚಾಗಿ ಜಪಾನಿ ಭಾಷೆಯಲ್ಲೆ ಬರೆಯಲ್ಪಟ್ಟವೆ. ಶಿಶುವತ್ಸಲರಾದ ನಮ್ಮ ಮುಖ್ಯ ಮಂತ್ರಿಗಳು ಈ ಮಕ್ಕಳ ಆಸೆಯನ್ನು ಪೂರೈಸಲೊಪ್ಪಿಕೊಂಡಿದ್ದಾರೆ.

ಈ ಪತ್ರಗಳನ್ನು ಭಾರತಕ್ಕೆ ತಂದವರು ಕಲಕತ್ತೆಯ ಒಬ್ಬ ವ್ಯಾಪಾರಿ. ಅವರ ಹೆಸರು ಹಿಮಾಂಶು ನಿಯೋಗಿ. ಅವರು ಈಚೆಗೆ ಜಪಾನಕ್ಕೆ ಭೆಟ್ಟಿ ಕೊಟ್ಟದ್ದರು. ಆನೆಯ ಹುಚ್ಚು ಹಿಡಿದ ಶಾಲೆಯ ಮಕ್ಕಳು ಅವರನ್ನು ಹಿಡಿದು ತಮ್ಮ ಪತ್ರಗಳನ್ನು ಪಂಡಿತ. ನೆಹರು ಅವರಿಗೆ ಮುಟ್ಟಿಸಲು ಕಳಿಸಿದರು.

ಅವರಿಗೆ ಆನೆ ಕಳಿಸಲು ಪಂ. ನೆಹರು ಸಿದ್ಧರಾಗಿಯೆ ಇದ್ದಾರೆ. ಜಪಾನಿ ಮಕ್ಕಳಿಗೆ ಮನವೊಪ್ಪಬಹುದಾದ ಆನೆಯನ್ನು ಕಂಡು ಹಿಡಿಯುವದೂ ದೊಡ್ಡ ಸಂಗತಿಯಲ್ಲ. ಆದರೆ ಈ ಮಹಾಪ್ರಾಣಿಯನ್ನು ಟೋಕಿಯೋಕ್ಕೆ ಕಳಿಸುವ ಸಾರಿಗೆ ವ್ಯವಸ್ಥೆ ಮಾಡಲು ವೇಳೆ ಹಿಡಿಯಬಹುದು. ಅದಕ್ಕೆ ಮೊದಲೇ ಪಂ. ನೆಹರು ಆ ಮಕ್ಕಳಿಗೊಂದು ಪತ್ರ ಬರೆಯುವರೆಂದು ನಿರೀಕ್ಷಿಸಲಾಗಿದೆ. ಟೋಕಿಯೋದಲ್ಲಿರುವ ಭಾರತ ಸರಕಾರದ ಪ್ರತಿನಿಧಿಗಳು ಆ ಪತ್ರವನ್ನು ಮುಟ್ಟಿಸುವರು. ಅದಕ್ಕಾಗಿಯೆ ಒಂದು ದೊಡ್ಡ ವನಭೋಜನವನ್ನು ಏರ್ಪಡಿಸಿ ಪತ್ರ ಬರೆದ ಎಲ್ಲ ಮಕ್ಕಳಿಗೆ ಔತಣವಿತ್ತು ಅಲ್ಲಿ ಅದನ್ನು ಓದಲಾಗುವದು.

ಪಂ. ನೆಹರು ಅವರಿಗೆ ಬಂದ ಈ ಪತ್ರಗಳಲ್ಲಿ ಹೆಚ್ಚಿನವುಗಳನ್ನು ಓರಣವಾದ ಪಾಕೀಟುಗಳಲ್ಲಿ ಹಾಕಿ ಕಳಿಸಲಾಗಿದೆ. ಅವುಗಳ ಮೇಲೆ ಸುಂದರವಾದ ಹೂಗಳ ಚಿತ್ರಗಳು ಬರೆಯಲ್ಪಟ್ಟಿವೆ. ಕೆಲ ಮಕ್ಕಳಂತೂ ತಮ್ಮ ಪತ್ರಗಳಲ್ಲಿ ಆನೆಯ ರೂಪು ಬರೆದು ತಮ್ಮ ಅಪೇಕ್ಷೆಯನ್ನು ಅದರ ಬದಿಗೆ ಜಪಾನಿ ಚಿತ್ರಲಿಪಿಯಲ್ಲಿ ಬರೆದಿದ್ದಾರೆ.

ಟೋಕ್ಯಿಯೋದ ಮೃಗಾಲಯದಲ್ಲಿ ಅನೇಕ ಸುಂದರ ಮೃಗಗಳಿದ್ದರೂ ಈಗ ಆನೆ ಮಾತ್ರ ಇಲ್ಲವೆಂದು ಕೆಲ ಮಕ್ಕಳು ದೂರಿಕೊಂಡಿವೆ. ಒಂದು ಪತ್ರದಲ್ಲಿ "ಅನೇಕ ವರ್ಷಗಳಿಂದ ಆನೆಯನ್ನು ನೋಡಬೇಕೆಂದು ಹಾರೈಸುತಿದ್ದೇವೆ" ಎಂದು ಬರೆದಿದೆ.

ಒಟ್ಟು ೮೧೫ ಪತ್ರಗಳು ಬಂದಿವೆ. ಆದರೆ ಅವುಗಳಲ್ಲಿ ಕೆಲವು ಅನೇಕ ಮಕ್ಕಳ ಅಂಕಿತವನ್ನೊಳಗೊಂಡಿವೆ.

ಕೆಲ ಪತ್ರಗಳು ಇಂಗ್ಲೀಷಿನಲ್ಲಿಯೂ ಇವೆ. ಪತ್ರಗಳಲ್ಲಿ ಕೆಲವು ಇಂತಿವೆ:

ಕುಮಾರಿ ಸುಮಿಕೋ ಕನತ್ಸು, ನೆಗಿಶಿ ಮೂಲಶಾಲೆ, ಟೋಕಿಯೋ, ಬರೆದುದು:

"ನಿಮಗೆ ಬರೆಯಲು ನನಗೆ ತುಂಬ ಸಂತೋಷವಾಗುತ್ತದೆ. ನಾನು ಟೋಕಿಯೋದ ಒಂದು ಮೂಲ ಶಾಲೆಯ ನಾಲ್ಕನೆ ವರ್ಗದಲ್ಲಿರುವೆ. ನಾವು ಜಪಾನಿ ಮಕ್ಕಳು, ಜಪಾನವನ್ನು ಶಾಂತಿಯ ದಾರಿಯಲ್ಲಿ ಪುನಃ ಏಳಿಗೆಗೆ ತರಲು ಹಾರೈಸುತ್ತೇವೆ. ಆದರೆ ನಿತ್ಯ ಜೀವನದಲ್ಲಿ ನಮಗೆ ಎಷ್ಟೋ ತೊಂದರೆಗಳು ಬರುತ್ತವೆ. ನಮ್ಮ ಪ್ರಾರ್ಥನೆಯನ್ನು ದಯೆಯಿಟ್ಟು ಲಾಲಿಸಿರಿ. ಯುದ್ಧದ ದೆಸೆಯಿಂದ ಹಾಳು ಬಿದ್ದ ಟೋಕಿಯೋ ಮೃಗಶಾಲೆಯಲ್ಲಿ ನಮಗೆ ಹಂದಿಗಳು ಹಕ್ಕಿಗಳು ಹೊರತು ಬೇರೇನೂ ನೋಡಸಿಗುವದಿಲ್ಲ. ಅವುಗಳನ್ನು ಕಂಡರೆ ನಮಗೆ ಸೇರುವದಿಲ್ಲ. ಒಂದು ದೊಡ್ಡ ಮೋಹಕ ಆನೆಯನ್ನು ನೋಡಬೇಕೆಂದು ಹಲಗಾಲದಿಂದ ಜಪಾನಿ ಮಕ್ಕಳು ಹಂಬಲಿಸುತಿದ್ದಾರೆ. ಆ ಪ್ರಾಣಿಯನ್ನು ಕಾಣಲು ನಾವೆಷ್ಟು ಬಯಸುತಿದ್ದೇವೆಂದು ನೀವು ಊಹಿಸಬಲ್ಲಿರಾ? ಟೋಕಿಯೋದ ಮೃಗಶಾಲೆಗೆ ನೀವು ಒಂದು ಆನೆಯನ್ನು ಕಳಿಸಿದ್ದರೆ ತುಂಬಾ ಉಪಕಾರವಾಗುತಿತ್ತು. ನಮ್ಮ ಆಸೆ ಪೂರೈಸಲು ನಿಮ್ಮ ದಯೆ ಬೇಕು."

ಮೆಸ್ಸೋರಿ ಯಮಾತೋ ಎಂಬ ಟೋಕಿಯೋದ ಶೈಶಿ ಶಾಲೆಯ ವಿದ್ಯಾರ್ಥಿಯಿಂದ-

"ನಿಮಗೆ ಪತ್ರ ಬರೆಯುವದು ನನಗೊಂದು ಹೆಮ್ಮೆಯ ಮಾತು. ಟೋಕಿಯೋದಲ್ಲಿರುವ ಒಬ್ಬ ಜಪಾನಿ ಹುಡುಗ ನಾನು. ಈಗ ನಮ್ಮ ಮೃಗಶಾಲೆಯಲ್ಲಿ ಕೆಲ ಮೃಗಗಳೂ ಯುದ್ಧಕ್ಕೆ ಹಿಂದೆ ಇದ್ದಷ್ಟು ಪಕ್ಷಿಗಳೂ ಇವೆ. ಆದರೆ ಆನೆಗಳು ಮಾತ್ರ ನಮ್ಮೊಡನೆ ಕನಸಿನಲ್ಲಿ ಮಾತ್ರ ವಾಸಿಸುತ್ತವೆ. ನಮ್ಮ ಮಮತೆಯ ಮೃಗಗಳಾದ ಅವುಗಳನ್ನು ಕಾಣಲು ಜೀವಬಿಡುತಿದ್ದೇವೆ. ನಿಮ್ಮ ದೇಶದಲ್ಲಿ ಈ ಅಮೂಲ್ಯ ಪ್ರಾಣಿಗಳು ಹೇರಳವಾಗಿವೆಯಂತೆ. ಬೇಗನೆ ಆನೆಯನ್ನು ಕಾಣುವ ಸೌಭಾಗ್ಯ ನಮಗೆ ದೊರೆಯುವಂತೆ ದಯೆಗೈಯುವಿರಾ?"

ಅನೇಕ ಮಕ್ಕಳ ಸಹಿಯುಳ್ಳ ಇನ್ನೊಂದು ಪತ್ರ ಹೀಗಿದೆ:

"ಜಪಾನಕ್ಕೊಂದು ಆನೆ ಬೇಕೆಂಬ ಉತ್ಕಟೇಚ್ಛೆಯಿಂದ ಈ ಪತ್ರ ಬರೆಯುತಿದ್ದೇವೆ. ನಾವು ಟೋಕಿಯೋದ ಟೋಕಿವಮತ್ಸು ಹುಡುಗಿಯರ ಶಾಲೆಯ ವಿದ್ಯಾರ್ಥಿನಿಯರು. ನೀವು ನಮ್ಮ ಬಯಕೆಯನ್ನು ಪೂರೈಸಿದರೆ ತುಂಬ ಉಪಕೃತರಾದೇವು."

ಮೂಲೆ ಮೂಲೆಗಳಿಂದ

ಹವಾಯಿಯ ವಿಶ್ವವಿದ್ಯಾನಿಲಯದಲ್ಲಿ ನಡೆದ ಜಾಗತಿಕ ತತ್ವಜ್ಞಾನದ ಪರಿಷತ್ತಿನಲ್ಲಿ ಭಾಗವಹಿಸಿದ ಭಾರತದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರು ಜಾಗತಿಕ ತತ್ವಜ್ಞಾನವನ್ನು ಸಾಧಿಸಲಾಗದಿದ್ದರೆ ಕಡೆಯ ಪಕ್ಷ ಜಾಗತಿಕ ಏಕೀಕರಣದ ತತ್ವಜ್ಞಾನವಾದರೂ ಪ್ರಚುರವಾಗುವಂತೆ ಮಾಡುವುದೇ ಪರಿಷತ್ತಿನ ಉದ್ದೇಶವೆಂದು ತಮ್ಮ ಭಾಷಣದಲ್ಲಿ ಹೇಳಿದರು.

ದ. ಆಫ್ರಿಕೆದ ಶಾಸನ ಸಭಾಧಿವೇಶನದಲ್ಲಿ ಕಾಮನ್‌ವೆಲ್ತ ನಾಗರಿಕರಿಗೆ ದ. ಆಫ್ರಿಕದ ನಾಗರಿಕತ್ವ ಪಡೆಯಲು ಎರಡು ವರ್ಷಗಳ ವಾಸ ಸಾಕೆಂಬುದನ್ನು ಬದಲಿಸಿ ಐದು ವರ್ಷಗಳಿಗೆ ಆ ಅವಧಿಯನ್ನೇರಿಸುವ ನಾಗರಿಕತ್ವದ ಮಸೂದೆಯ ಮೂರನೆಯ ವಾಚನ ಮುಗಿದು ಈಗ ಸಿನೇಟಿಗೆ ಕಳುಹಲ್ಪಟ್ಟದೆ.

ರಶಿಯನ್ನರ ಆಕ್ರಮಣಕ್ಕೆ ಒಳಪಟ್ಟ **ಜರ್ಮನಿಯಲ್ಲಿರುವ** ಮೆಕ್ಲೀನ್ ಬರ್ಗ್ ಪಟ್ಟಣದ ಜರ್ಮನ್ ನಗರ ಸಭಾಧ್ಯಕ್ಷನನ್ನು ರಶಿಯನ್ನರು ಮರಣದಂಡನೆಗೆ ಗುರಿಪಡಿಸಿದರೆಂದು ತಿಳಿಯುತ್ತದೆ.

ನಜಾರೆತ್ತಿನಲ್ಲಿ ಅತಿರಾಷ್ಟ್ರೀಯವಾದಿಗಳಾದ "ಮುಸ್ಲಿಂ ಭ್ರಾತೃವರ್ಗ"ಕ್ಕೆ ಸೇರಿದವರೆಂಬ ಸಂಶಯದಿಂದ ಇಸ್ರೇಲ್ ಸರಕಾರ ಸೆರೆ ಹಿಡಿದ ೪೦೦ ಅರಬರಲ್ಲಿ ೫೦ ಜನರನ್ನು ಬಿಡಲಾಯಿತು. ಇಜಿಪ್ತದಲ್ಲಿಯೂ ಈ ಸಂಘ ಬಹಿಷ್ಕೃತವಾಗಿದೆ.

ವಿಭಾಗಶಃ **ಬ್ರಿಟನ್ನಿನ** ಉಕ್ಕಿನ ಉದ್ಯಮವನ್ನು ರಾಷ್ಟ್ರೀಕರಿಸಬೇಕೆಂಬ ಮಸೂದೆಯು ಕನ್‌ಸರ್‌ವೇಟಿವರಿಂದ ತುಂಬಿದ ಶಾಸನ ಸಭೆಯ ಮೇಲ್ಮನೆಯಲ್ಲಿ ಬಿದ್ದುಹೋಯಿತು. ಒಬ್ಬ ಕೂಲಿಕಾರ ಪಕ್ಷದ "ಲಾರ್ಡ" ರಾಜೀನಾಮೆಯನ್ನು ಕೊಟ್ಟನಂತೆ!

ಬ್ರಿಟನ್ನಿನ ಬಂಗಾರ ಮತ್ತು ಡಾಲರುಗಳ ಸಂಪತ್ತು ಖಿಲವಾಗುತ್ತಿರುವುದನ್ನು ತಪ್ಪಿಸಲು ಕೋಶಮಂತ್ರಿ ಸರ್ ಸ್ಟಾಫರ್ಡ ಕ್ರಿಪ್ಸರು ಬ್ರಸೆಲ್ಸಿಗೆ ಧಾವಿಸುತ್ತಿದ್ದಾರೆಂದು ಸುದ್ದಿ.

ಗಡಿನಾಡ ಪ್ರಾಂತದ ಗಡಿಯಲ್ಲಿರುವ ೭೦ ಲಕ್ಷ ಪಠಾನರ ಭವಿಷ್ಯವನ್ನು ನಿರ್ಣಯಿಸುವ ಕಾರ್ಯದಲ್ಲಿ ನೆರವೀಯಬೇಕೆಂದು ಪಾಕಿಸ್ತಾನದೊಡನೆ ಬಂದ ಜಗಳದ ಸಂಬಂಧದಲ್ಲಿ **ಅಫಗಾನಿಸ್ತಾನವು** ಬ್ರಿಟನ್ನನ್ನು ಕೇಳಲಿದೆಯೆಂದು ಗೊತ್ತಾಗಿದೆ.

ದರ್ಬಾನಿನಲ್ಲಿ ನಡೆದ ನಾತಾಳ ಹಿಂದೀ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಪ್ರಧಾನ ಕಾರ್ಯದರ್ಶಿ ಶ್ರೀ ದೇವಿಸಿಂಗರು ದ. ಆಫ್ರಿಕದ ಹಿಂದೀ ಕಾಂಗ್ರೆಸ್ಸು ಇಂದು ಎಂದಿಗಿಂತ ಹೆಚ್ಚಾಗಿ ಆಫ್ರಿಕನ್ನರೊಡನೆ ಸಹಕರಿಸಿ ನಡೆಯಬೇಕಾಗಿದೆಯೆಂದು ಸಾರಿದರು.

ಇಟಲಿಯ …ಕೋ … ಕಂಡರ… ಹೊಲದ ಕೆಲಸಗಾರರ ಜಮೀನುದಾರರ… ಗಳತ್ತ … ಬಾಂಬುಗಳನ್ನೆಸೆದರು, ಟ್ರಾಕ್ಟರಿಗೆ ಡೈನಾಮೈಟ್ ಹಾಕಿದರು, …ಗಳಿಗೆ ಬೆಂಕಿ ಹಚ್ಚಿದರು ಮತ್ತು ಮೋಟಾರು ಕಾರನ್ನು ಅಗ್ನಿಗೆ ಕೊಟ್ಟರು. ಅವರು ೫ ವಾರಗಳ ಹಿಂದೆ… ಮುರಿದು ಒಪ್ಪಂದ ಮಾಡಿಕೊಂಡಿದ್ದ… ಳದ ಶರ್ತುಗಳನ್ನು ಪಾಲಿಸಲೊಲ್ಲೆವೆಂ… …ರೀತಿ ಹಿಂಸಾಚಾರಕ್ಕೆ ಕೈಯಿಕ್ಕಿದ… ಹೇಳಲಾಗಿದೆ.

ರೋಮಿನಲ್ಲಿ ಕೂಡಿದ … ಆರೋಗ್ಯ ಪರಿಷತ್ತಿನಲ್ಲಿ ಭಾರತದ … ಗೊತ್ತುವಳಿ ಸ್ವೀಕೃತವಾಯಿತು. … ಮತ್ತು ಯುಕ್ರೇನುಗಳು ಪರಿಷ… ಹೊರಬೀಳಲು ನಿರ್ಧರಿಸಿದವು. … …ನಿಯ, ಜೆಕೋಸ್ಲೋವೇಕಿಯ, ಪೋ… ಯುಗೋಸ್ಲೇವಿಯ ಮತ್ತು ಹಂಗೆ… ತಾಟಸ್ಥ್ಯ ವಹಿಸಿದವು.

ಇಜಿಪ್ತದ ಸೈನಿಕರೂ ವಿದ್ಯಾರ್ಥಿ… ಅಲ್ಲಿಯ ಒಟ್ಟು ಬೆಳೆಯ ಅರನೆಯ … …ವೆನಿಸುವ ೧೦ ಲಕ್ಷ ಎಕರೆಯ ಹತ್ತಿ… ಹಿಡಿದ ಹುಳುಗಳನ್ನು ಧ್ವಂಸ ಮಾ… …ರಲ್ಲಿ ಸಹಾಯ ಮಾಡಬಂದಿದ್ದಾರೆ. ಸೇಚನದ ಮೂರುಸಾವಿರ ಯಂತ್ರಗಳ… ಲಕ್ಷ ಸ್ತ್ರೀ ಪುರುಷ ಬಾಲಬಾಲೆಯರು… ವಿಡೀ ಕೆಲಸ ಮಾಡುತ್ತಿರುವುದಾಗಿ … …ತ್ತದೆ, ಇದರಿಂದ ಸಂಭವಿಸಬಹುದ… ನಷ್ಟ ಒಂದು ಕೋಟಿ ಪೌಂಡುಗಳಷ್ಟಾಗ… …ಯೆಂದು ತರ್ಕಿಸಲಾಗಿದೆ.

ಜಿನೀವಾದಲ್ಲಿ ಕಮ್ಯುನಿಸ್ಟೇತರ … ರಾಷ್ಟ್ರೀಯ ಮಜೂರ ಸಂಘವೊಂದನ್ನು … …ದಾಗಿ ಸ್ಥಾಪಿಸುವುದರಲ್ಲಿ ಆಸಕ್ತನಾದ … ಮಜೂರ ಸಂಘ ಮಂಡಲದ ಪ್ರಧಾನ… …ದರ್ಶಿ ಕರೆದ ಪರಿಷತ್ತಿನಲ್ಲಿ ಭಾರತದ … ಸಂಘದ ಪ್ರತಿನಿಧಿಗಳೂ ಇದ್ದರೆಂದು … …ತ್ತದೆ.

ಲೇಕ್ ಸಕ್ಸೆಸ್ಸಿನಲ್ಲಿ ಸೇರಿದ … ಮಂಡಲದ ಸಭೆ ೧೨ ರಾಷ್ಟ್ರಗಳು ಮಾಡಿ… ಪ್ರವೇಶಾಪೇಕ್ಷೆಯ ಅರ್ಜಿಗಳ ಮೇಲೆ … ನಿರ್ಣಯವನ್ನು ತೆಗೆದುಕೊಳ್ಳಲು … ಪಡಲಿಲ್ಲ. ಯುಕ್ರೇನಿನ ಪ್ರತಿನಿಧಿ ಡಾ. … ಮ್ಯಾನ್ವಿಲ್‌ಸ್ಕಿಯು ಬ್ರಿಟನ್ ಮತ್ತು … …ಕಗಳು ರಾಜಕೀಯ ಕಾರಣಗಳ ದೆಸೆ… ಮಂಗೋಲಿಯ, ಅಲ್ಬೇನಿಯ, ರುಮೆ… ಬಲ್ಗೇರಿಯ ಮತ್ತು ಹಂಗೇರಿಗಳನ್ನು … …ರಾ. ಸಂಘದಲ್ಲಿ ಪ್ರವೇಶವಾಡಗೊ… ಎಂಬ ಸೋವಿಯಟ್ಟರ ಆರೋಪವನ್ನು … …ಚ್ಚಾರ ಮಾಡಿದನು.

ಸಿರಿಯದಲ್ಲಿ ಕಳೆದ ತಿಂಗಳಲ್ಲಿ ರ… …ಕ್ರಾಂತಿಯಿಂದ ಮುಖ್ಯ ಮಂತ್ರಿಪದವಿ… ಕಸಿದುಕೊಂಡ ಕರ್ನಲ್ ಹುಸೇನಿ ಜೈ… ಹಿಂದಿನ ಸೈನ್ಯನೇತೃವೀಗ ಅಧ್ಯಕ್ಷ … …ಜೆಗೆ ಹುರಿಯಾಳಾಗಿ ನಿಂತು ಅಧ… ಆರಿಸಿ ಬಂದಿದ್ದಾನೆ.

ಹಾಂಕಾಂಗಿನಲ್ಲಿಯ ಬ್ರಿಟಿಶರ … ನೌಕಾಸಂಘದವರು ಕಮ್ಯುನಿಸ್ಟ … ದೊಡನೆ ಒಪ್ಪಂದ ಮಾಡಿಕೊಂಡಿದ್ದಾ… ಒಪ್ಪಂದದನ್ವಯ ೩೧೩೫೦೦ ಪೌ… ಬೆಲೆಯ ಔದ್ಯಮಿಕ ಸಲಕರ… ಹಾಂಕಾಂಗಿನಿಂದ ಟೀಂಟ್ಸಿನಿಗೆ … ಒಯ್ಯಬಹುದಾಗಿದೆ

ಕೊರಿಯದ ಅಧ್ಯಕ್ಷ ಸಿಂಗ್‌ಮನ… ಪ್ರತಿಸ್ಪರ್ಧಿಯಾದ ಕಿಮ ಕಿಂಕೂವನು… …ನೆಂಟ್ ಆನ್ ತೋಹಿಯ ಗುಂಡಿಕ್ಕ… ಸಿಕ್ಕಿಬಿದ್ದಿದ್ದಾನೆ.

ಗೋವೆಯಲ್ಲಿ ಸೆರೆಯಲ್ಲಿದ್ದ ಭಾ… ಪ್ರಜೆ ಶ್ರೀ ದೇಶಪಾಂಡೆಯವರನ್ನು … …ಸರು ಹೊಡೆದು ಕೊಂದರೆಂದೂ … ವಿಚಾರಣೆ ನಡೆಸಲು ಏರ್ಪಾಡು … ಬೇಕೆಂದೂ ಗೋವೆಯ ರಾಷ್ಟ್ರೀಯ … …ಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ … ದೇಸಾಯಿಯವರು ಹಿಂದೀ ಸರಕಾರ… ವಿನಿಕೊಂಡಿದ್ದಾರೆ.

ಬ್ರಹ್ಮೀ ಸರಕಾರೀ ದಲಗಳು … ತೀರದ ಮಂತಬನನ್ನು … ಉತ್ತರಬ್ರಹ್ಮದ ಒಂದು ಪಟ್ಟ… ಕಾರೆನ್ನರಿಂದ ಪುನಃ ವಶಪಡಿಸಿಕೊ… ತಿಳಿಯುತ್ತದೆ.

ರೂಪರಂಗ

ಸ್ತ್ರೀ ಪಾತ್ರಗಳು

ಎರು ಇಂದಿನ ಅನೇಕ ಕತೆ ಕಾದಂಬರಿ
ನ್ನು ಸಿನೆಮಾಗಳನ್ನು ನೋಡುತ್ತ ಬಂದ
. ಅವುಗಳಲ್ಲಿ ಬರುವ ಸ್ತ್ರೀ ಪಾತ್ರಗಳನ್ನು
ದೃಷ್ಟಿಯಿಂದ ಅವಲೋಕಿಸಿದೆ.
ನ್ಯವಾಗಿ ಅವುಗಳಲ್ಲಿ ಕೆಲ ಗುಣಾಂಶಗಳು
ಸಾಧಾರಣವೆನಿಸಿವೆ ಎಂದು ತೋರಿತು.
ನಿನದಿನವಲ್ಲಿ ಇಟ್ಟುಕೊಂಡು ಪ್ರೇಕ್ಷ
ವಾಚಕರೂ ತಮಗೆ ಎದುರಾಗುವ
ಕಗಳನ್ನು ಚಿತ್ರಗಳನ್ನು ನೋಡಿದರೆ
ಅನುಭವ ಅವರಿಗುಂಟಾಗದಿರದು.

...ವಾಹ ಕಾಲವಷ್ಟೇ ಜೀವನವೆ ?

...ನವಲನೆಯುವಾಗಿ, ಶೃಂಗಾರ. ಕಥೆಗಳ
ನ್ನು ಎಲ್ಲೆಲ್ಲೂ ಹೆಚ್ಚಾಗಿರುವುದು ಕಂಡು
ದೆ. ಪುರುಷಪಾತ್ರಗಳ ಜೀವನದಲ್ಲಿ
ಗಾರಕ್ಕೆ ಪ್ರಧಾನ್ಯವಿದ್ದರೂ ಸ್ತ್ರೀ ಪಾತ್ರಗಳ
ನದಲ್ಲಿ ತೋರುವಷ್ಟಿಲ್ಲ. ಇವರಿಂದ
ತುಣಿಗೆ ವಿವಾಹದ ಶೃಂಗಾರವ್ಯವಹಾರ
ಕ ಹೆಚ್ಚಿನದು ವಿವಾಹ ಪೂರ್ವದಲ್ಲಾಗಲಿ
ಹಾನಂತರವಾಗಲಿ ಇಲ್ಲವೇ ಇಲ್ಲ ಎಂದು
ಷ್ಟವಾಗುತ್ತದೆ. ತಾಯ್ತನವನ್ನು
ಮಾಡುವ ಕಥೆಗಳಿಗೆ ಕೊರತೆಯಿಲ್ಲ. ಆದರೆ
ನಕ್ಕೆ ಮಹತ್ವವಿಲ್ಲವೆಂಬ ಅರಿವು
ಣ ಉಂಟಾಗುವಂತಾಗಿ ತಾಯ್ತಂದೆ
ಾದ ಸತಿಪತಿಯರಲ್ಲಿ ತಂದೆ ಕೇವಲ ವ್ಯವ
ರ, ಮದಿವೆಯ ಯಂತ್ರವೆಂಬಂತೆ ಚಿತ್ರಿ
ಟ್ಟದ್ದು ತಾಯಿ ಅಂಥ ಮಮತೆಗೇ
ಕನ್ನ ಹೆಚ್ಚಿ ಪತಿಯನ್ನು ಪ್ರೀತಿಸಿ
ದ ಪಡುವ ಅವಳ ಶಕ್ತಿ ನ್ಯೂನವಾಗು
ತಿಯೂ ಮಕ್ಕಳ ಪಾಲನೆಪೋಷಣೆಯಲ್ಲಿ
ಯ ನೆರವನ್ನು ಪಡೆಯದೆ ಅನನುಭವಿಕ
ಯನ್ನು ಅಳವಡಿಸಿಕೊಂಡು ಅದೇ
ದರ್ಶವೆಂದು ತಿಳಿದುಕೊಳ್ಳುವಂತೆಯೂ
ತವಾಗಿದೆ. ಗೃಹಕೃತ್ಯದಲ್ಲಿಯ ದಕ್ಷತೆ,
ರ್ಯ, ಸಾಹಸ, ವಿಚಾರಶಕ್ತಿ ಈ ಯಾವು
ಕತೆಯಲ್ಲಿ ಉಲ್ಲೇಖಿಸಿರುವುದಿಲ್ಲ-
ಂದ ಗೃಹಿಣಿ ಕೇವಲ ಪ್ರೀತಿಯೊಂದಿ
.ಅದೂ ಹೆಚ್ಚಾಗಿ ಮಕ್ಕಳಲ್ಲಿ-ಆದರ್ಶಳಾ
ಳು ಎಂಬ ಭಾವನೆಪಡುವಂತಾಗಿದೆ.
ವ್ಯವಹಾರಜ್ಞಾನಶೂನ್ಯತೆಯೇ ಗುಣ
ತೋರುವಂತೆ ವರ್ಣಿಸಲ್ಪಟ್ಟಿರುತ್ತದೆ.
ನ್ನು ಶೃಂಗಾರದತ್ತ ಹೊರಳಿದರೂ ಸ್ತ್ರೀ
ನ್ಯವಾಗಿ ಪಡ್ಡೆ ಮತ್ತು ಸುಂದರಿ;
ಮಾಯಾವಿನಿ ಇಲ್ಲವೆ ಅಳುಬುರುಕ
ಪ್ರೇಮಮಯಿ. ತರ್ಕಶಕ್ತಿ ಎಳ್ಳಷ್ಟೂ
ರ ವ್ಯಾಹತ ನಡೆನುಡಿ ಆಚಾರ ವಿಚಾರ
ಅವಳ ಬಂಡವಾಳವಾಗಿದ್ದು, ಅವಳ ದೆಸೆ
ದ ಅವಳ ಆಪ್ತರಿಗೆ ಅನೇಕ ತೊಂದರೆ
ಒದಗಿದರೂ ಅವಕ್ಕೆ ಅವಳೇನೂ ಹೊಣೆ
, ಅವಳೆಂದರೆ ಕರುಣದ ಕಾರಂಜಿ,
ತೆಯ ಮೂರ್ತಿ, ಸದಾ ಸಹಾನುಭೂ
ಯೋಗ್ಯಳು ಎಂಬಂತೆ ವಿವರಣೆಯಿದ್ದು
ಅಪ್ರಯೋಜಕಳೂ ಅಜ್ಞಳೂ ವಿಶ್ವ
ಕಳೂ ಆಗಿರುವುದೇ ಆದರ್ಶವೆಂಬಂತೆ
ಾರು ಕಥಾವಸ್ತುಗಳಲ್ಲಿ ಒಳ ಹೊಕ್ಕು
ದರೆ ತಿಳಿಯುವಂತಿದೆ. ಇದರಿಂದ ಈ
ಕನ್ನೋದುವ, ಈ ಚಿತ್ರಗಳನ್ನು
ನುವ ನಮ್ಮ ಬಾಲಕಿಯರ, ವಯಸ್ಕ
ರ ಬುದ್ಧಿ ಹೇಗೆ ಬೆಳೆದೀತು?

ಪ್ರೇಮದ ಪ್ರಲೋಭನ ಭೇದ

ಲ್ಲದೆ, ಪ್ರೇಮ ವ್ಯವಹಾರಗಳಲ್ಲಿ ಸೌಂದರ್ಯ
ಕಾರಗಳಿಗೆ ಗಂಡು ಸೋಲುವಂತೆ ಚಿತ್ರಿ
ವುದು ಅತಿರೇಕವಾಗಿ, ದುರ್ಭಾಗ್ಯ ವಶ
ದ ಸೌಂದರ್ಯ ಸಾಕಷ್ಟಿಲ್ಲದ ಮತ್ತು
ದ ವಸ್ತುಗಳನ್ನು ಕೊಳ್ಳಲು ಶಕ್ತಿ
ದ ಹುಡುಗಿ ಸಮಾಜಬಹಿಷ್ಕೃತ
ಉಳಿಯಬೇಕೋ ಹೇಗೆಂದು ಪ್ರಶ್ನೆ
ಯುವಂತಾಗಿದೆ. ಸೌಂದರ್ಯ ಅಲಂಕಾರ
ಪ್ರಲೋಭನ ಕ್ಷಣಿಕವೆಂಬುದು ಸರ್ವ
. ಹೋಗಲಿ, ಕ್ಷಣಿಕವೇ ಆದರೂ
ದಲ್ಲಿ ಆನಿಸಬೇಕು, ಅಥವಾ ಇದ್ದರೆ
ನ್ನು ಕಂಡು ಗಂಡಿನಂತೆಯೇ ಸ್ವತಂತ್ರ
ಯಿಂದ, ಸ್ವಯಂಸ್ಫೂರ್ತ ಪ್ರೀತಿಯಿಂದ
ಗಂಡನ್ನು ವರಿಸುವದೋ? ಅದೂ ಇಲ್ಲ.
ಮುದ್ದು ಕಾಸು ಅಥವಾ ಅತಿ ವಿರಳ
ಅವನ ವಿದ್ಯಾದಿ ಗುಣ ಇವುಗಳನ್ನೇ
ಅರಿಸುವುದು. ಇದರಿಂದ ಪ್ರೇಮಶಕ್ತಿ
ಅದಿಕ ಗಂಡಿಗೂ ಹೆಣ್ಣಿಗೂ ಬೇರಾಗು

ವಂತಾಗಿ ಅವರ ದಾಂಪತ್ಯದಲ್ಲಿ ಆಧುನಿಕರಾದ ನಾವು ಬಯಸುವ "ಮಿತ್ರತ್ವ"ದ ಸವಿ ದೊರಕದೆ ವಿರಸ ಪ್ರಸಂಗ ಉತ್ಪದಿಸುವಂತಾಗಿದೆ. ಇದರ ಪರಿಣಾಮ ಸಾಮಾಜಿಕ ತರುಣ ತರುಣಿಯರ ಮೇಲೆ ಆಗದಿರುವುದೆ?

ದರಿದ್ರೆಗಾದರೂ ದರಿದ್ರನಿಗಿಂತ ಸ್ವಲ್ಪವಾದರೂ ಹೆಚ್ಚಿನ ಫ್ಯಾಶನ್ ಇರಬೇಕು ಎಂಬುದು ಸಿನೆಮಾಗಳ ಮೂಲಸೂತ್ರ. ಅಲ್ಲದೆ ಶೃಂಗಾರ ವ್ಯವಹಾರದಲ್ಲಿ ಗಂಡಿನ ಅತ್ಯನ್ನು ಖತಿ ಮತ್ತು ಹೆಣ್ಣಿನ ಅತಿಪರಾಙ್ಮುಖತೆಗಳೇ ಮರ್ಯಾದೆ, ರಸಿಕತೆ ಎಂದು ತೋರುವಂತೆ ಚಿತ್ರಿಸುವುದು, ಅಭಿನಯಿಸುವುದು ಹೆಣ್ಣಿನ ಕಾಮಜೀವನಕ್ಕೊಂದು ದುರಾದರ್ಶವಾಗಿ ದುಷ್ಪರಿಣಾಮಕ್ಕೆ ಕಾರಣವಾಗುತ್ತದೆ. ವೇಶ್ಯೆಯರನ್ನೇನೋ ಇದ್ದಕ್ಕಿದ್ದ ಹಾಗೇ ಚಿತ್ರಿಸಲಾಗುತ್ತದೆ–ಅದೊಂದು ಮಾಫಿ.

ಪರಪ್ರತ್ಯಯನೇಯತ್ವ ಚೆಂದವೆ?

ಎಲ್ಲಕ್ಕಿಂತ ಹೆಚ್ಚಾಗಿ ಸ್ವದೇಹಾಲಂಕರಣವೇ ಶೋಭೆಯೆಂದು ತೋರಿಸುವಂತೆ, ವ್ಯವಹಾರದಲ್ಲಿ ನಿಷ್ಕ್ರಿಯತೆ ಮತ್ತು ಪರಾವಲಂಬನವೇ ಸುಂದರಿಯ, ನಾಗರಿಕೆಯ, ಸಭ್ಯೆಯ, ಸೌಮ್ಯೆಯ ಮಾರ್ಗ ಎಂದು ಪ್ರದರ್ಶಿಸುವುದು ಸ್ತ್ರೀಸಮಾಜಕ್ಕೆ ಘೋರ ಅನ್ಯಾಯವನ್ನು ಎಸಗಿದಂತಾಗಿದೆ. ಸ್ತ್ರೀಯ ಮಮತೆ ಕೇವಲ ಮಕ್ಕಳವರೆಗೆ ಇರುವಂತೆಯೂ ಪುರುಷನ ಪ್ರೀತಿ ಕೇವಲ ಸುಂದರಿಯ ಮಟ್ಟಿಗೆ ಇರುವಂತೆಯೂ ವರ್ಣಿತವಾಗಿರುವುದು ಅಪಾಸ್ತವವಲ್ಲದೆ ಅಯೋಗ್ಯವೂ ಅಸಾಧೂಪದೇಶವೂ ಆಗಿದೆ. ಸ್ವತಃ ಹೆಣ್ಣೇ ಬರೆದ ಕತೆಕಾದಂಬರಿಗಳನ್ನು ಕಂಡರೂ ಇದೇ ಹಾಡು. ಇಂದಿನ ಸ್ತ್ರೀ ಸ್ವತಂತ್ರಳೆಂಬ ಗರ್ಜನೆಯನ್ನು ಕೇಳಿದರೆ ದಿಕ್ಕಿಲ್ಲ, ಹೊಣೆಯಿಲ್ಲದೆ ಹಕ್ಕುಬೇಕೆಂಬ, ಪಾಲು ಬೇಕೆಂಬ ಆಕ್ರೋಶವನ್ನು ಆಲಿಸಿದರೆ ಅದಕ್ಕೆ ಎಣೆಯಿಲ್ಲ; ಆದರೆ ಅಭಿರುಚಿಯಲ್ಲಿ, ಸೌಂದರ್ಯದೃಷ್ಟಿಯಲ್ಲಿ, ವಸ್ತುಮೌಲ್ಯನಿರ್ಣಯದಲ್ಲಿ ಪುರುಷವಿಚಾರಗಳಿಗೆ ಅಡಿಯಾಳಾಗಿ ಬಾಳುತ್ತಿರುವ ಈ ಸುಧಾರಕ ವರ್ಗದ ಮಹಿಳೆಯರು ಮತ್ತೇನನ್ನು ಬರೆದಾರು!

ವಿಚಾರದಾಸ್ಯ, ಅಭಿರುಚಿದಾಸ್ಯ ಇವು ಬುದ್ಧಿಗತದಾಸ್ಯಗಳು, ಹೆಣ್ಣಿನ ಆತ್ಮಕ್ಕೇ ಅಂಟಿಕೊಂಡಂಥವು. ಅವನ್ನು ಬಿಟ್ಟು ಪುರುಷ ಸದೃಶ ಆದರೆ ತದ್ಭಿನ್ನವಾದ ದೃಷ್ಟಿಯಿಂದ ಅವಲೋಕಿಸಿದರೇನೇ ಪುರುಷ ಸಾಮ್ಯ ಸ್ತ್ರೀಯ ವ್ಯಕ್ತಿತ್ವಕ್ಕೆ ಉಂಟಾದೀತಲ್ಲದೆ ಅನ್ಯಥಾ ಸಾಧ್ಯವಿಲ್ಲ ಎಂಬುದು ಮಾನಸ ವ್ಯವಹಾರದ ಸೂಕ್ಷ್ಮರೀತಿ ನೀತಿಗಳನ್ನು ಬಲ್ಲವರಿಗೆ ಮನದಟ್ಟಾಗದಿರದು. ಗಂಡು ಹೆಣ್ಣಿನತ್ತ ನೋಡಿದಂತೆ ಗಂಡಿನತ್ತ ಹೆಣ್ಣು ನೋಡುವುದನ್ನು ಅಭ್ಯಸಿಸಬೇಕು. ಗಂಡು ಹೆಣ್ಣನ್ನು ನೋಡಿದಂತೆ ಹೆಣ್ಣು ಹೆಣ್ಣನ್ನು ನೋಡಿದರೆ (ಆ ಕುತೂಹಲವನ್ನು ವ್ಯಕ್ತಪಡಿಸಿದರೆ) ಅಥವಾ ಗಂಡು ಗಂಡನ್ನು ನೋಡಿದಂತೆ ಹೆಣ್ಣು ಗಂಡನ್ನು ನೋಡಿದರೆ ಅದರಿಂದ ಸ್ತ್ರೀ ಪುರುಷರ ಪ್ರೀತಿನೀತಿಯಲ್ಲಿ ಸಾಮರಸ್ಯ, ಸಾದೃಶ್ಯ, ಸಾಮಂಜಸ್ಯ ಉಳಿಯದು. ಈ ಮರ್ಮವನ್ನರಿಯದ ಸ್ತ್ರೀಪುರುಷಪಾತ್ರಗಳು ಎಂದಾದರೂ ಸಹಜವೂ ಜೀವಂತವೂ ರಸಿಕತೆಯುಳ್ಳವೂ ಆದಾವೇ? ಈ ಅಂಶವನ್ನು ಕಥಾವಸ್ತು ಸಾಗುವಾಗ ಬರುವ ಪಾತ್ರವರ್ಣನೆಯಲ್ಲಿ ಸೂಡಕ್ಕೆ ತೊಂಬತ್ತೊಂಬತ್ತು ಕಡೆ ಇಂದು ನೋಡಬಹುದಾಗಿದೆ. ಇದೆಲ್ಲಿಯ ವಾಸ್ತವ ಸಾಹಿತ್ಯ, ಇದೆಂತಹ ಪ್ರಗತಿಪರತೆ, ಇದೇನು ಸುಧಾರಣೆ!

ಭೀರುತ್ವವು ಸೌಂದರ್ಯವೆ?

ಸ್ತ್ರೀಯ ಪ್ರರುಷಥಯ ಮತ್ತು ಪುರುಷ ದರ್ಶನದಿಂದ ಉಂಟಾಗುವ ಲಜ್ಜೆ ಇವುಗಳು ಎಷ್ಟೆಷ್ಟು ಹೆಚ್ಚಿದ್ದರೆ ಅಷ್ಟಷ್ಟು ನಯ, ನಾಜೂಕು, ಚೆಂದ, ಬೆಡಗು, ಮರ್ಯಾದೆ, ಮುಡಿ ಹೆಚ್ಚೆಂಬ ಹಳೆಯ ಕಾಲದಿಂದ ನಡೆದು ಬಂದ ಪರಂಪರೆಯ ಬೆಂಕಿಗೆ ಇಂದು ಮತ್ತಷ್ಟು ಗಾಳಿ ಬೀಸಿ ಉರಿಸಾಡಲಾಗಿದೆ. ಇದನ್ನೇಕೆ ಸ್ತ್ರೀವಾದಿಗಳು ಲಕ್ಷಿಸುವುದಿಲ್ಲವೋ ನಾ ಕಾಣೆ; ತಿರುಳನ್ನು ಬಿಟ್ಟು ಸಿಪ್ಪೆಗಾಗಿ ಒದ್ದಾಡುವವರ ಲಕ್ಷಣ ಇನ್ನೆಂತಹದಾದೀತು? ಈ ಬಗೆಯ ಬೆಂಡಿಕನ್ನು "ಮುಗ್ಧತೆಯೆಂಬುದು ದುಗ್ಧ ಸಾಗರದಮೊದು" ಎಂಬುದಕ್ಕೂ "ಮುಗ್ಧ ಸುಂದರ ಮೂರ್ಖಯೊಳ" ಎಂಬುದಕ್ಕೂ ನಡು

ಬಿಟ್ಟು ನೋಡಿದರೆ ಅರ್ಥಮಾಡಿಕೊಳ್ಳುವುದು ಸಾಧ್ಯವಿದೆ.

ಪ್ರೇಮವ್ಯವಹಾರದಲ್ಲಿ ಸ್ವಾತಂತ್ರ್ಯಕ್ಕಿಂತ "ಪರಸ್ಪರಚ್ಛಂದಾನುವರ್ತನೆ, ಪರಸ್ಪರ ದಾಕ್ಷಿಣ್ಯ" ಇವೇ ಮೂಲಾಧಾರ. ಪ್ರೇಮದಲ್ಲಿ ತ್ಯಾಗವಿರಬೇಕೆಂಬುದರ ಅರ್ಥ ಇದೇ. ಪರಸ್ಪರ ಸ್ವಾತಂತ್ರ್ಯವೆಂದರೆ ಸ್ವಚ್ಛಂದತೆ, ಅದು ಒಡಕಿನ ಮೂಲ; ಸಮಸ್ಯೆಯ ಆಗರ. ಗಟ್ಟಿಯಾಗಿ ಕೇಳಿದರೆ ಆದರ್ಶ ಪ್ರೇಮಕ್ಕೆ ಸತಿ ಪತಿಯರ ಪರಸ್ಪರ ದಾಸ್ಯವೇ ಆಧಾರ ಎಂದು ಹೇಳಿದರೂ ತಪ್ಪಾಗದು. ಪುರುಷರ ಅತಿ ಸ್ವಾತಂತ್ರ್ಯವನ್ನು ನಿಂದಿಸುವುದೂ ಸ್ತ್ರೀಯ ಅತಿದಾಸ್ಯವನ್ನು ಅಲ್ಲಗಳೆಯುವುದೂ ನಿಷೇಧ ನೀತಿಯಾಯಿತಲ್ಲವೆ ವಿಧಿಮಾರ್ಗವಾಗದು. ಹಾಗಲ್ಲದೆ ಸ್ತ್ರೀಯಾದರೂ ಅಜ್ಞಾನ ಅಧೈರ್ಯಗಳಿಂದ ಪತಿಯ ಇಚ್ಛೆಯಂತೆ ನಡೆಯುವುದನ್ನು ತೋರಿಸುವುದು ಹೆಚ್ಚಾಗಿದೆಯಲ್ಲದೆ ಜ್ಞಾನಯುಕ್ತ ಪ್ರೀತಿಯಿಂದ, ಧೈರ್ಯದಿಂದ ಸ್ವಯಂ ಸ್ಫೂರ್ತಿಯಿಂದ ಮೊದಲು ಹೆಜ್ಜೆಯಿಟ್ಟು ಅಥವಾ ಸರಿಸಮ ಹೆಜ್ಜೆಯಿಟ್ಟು ಪ್ರೀತಿಸುವದನ್ನು ಆಧುನಿಕ ಕತೆ, ಕಾದಂಬರಿ, ಕವಿತೆ ಇತ್ಯಾದಿ ವಿವಿಧ ರೂಪದ ಸಾಹಿತ್ಯದಲ್ಲಿ ಹೆಚ್ಚಾಗಿ ಕಾಣಸಿಗದು. ಈ ದೋಷವನ್ನು ನಿವಾರಿಸಲು ಮಹಿಳೆಯರೇ ಕಂಕಣತೊಟ್ಟು (ಕೇವಲ ಮುಕ್ತ್ಯಾದೇಶನದ ಇಲ್ಲವೆ ಹೇಡಿತನದ ಅಥವಾ ಫ್ಯಾಶನ್ನಿನ, ಇಲ್ಲವಾದರೆ ಸಿರಿಯ ಬಳಿ ತೊಟ್ಟುಕೊಳ್ಳುವುದಲ್ಲ) ಹೊಸದೃಷ್ಟಿಯನ್ನವಳಡಿಸಿಕೊಂಡು ಕನ್ನಡ ಸಾಹಿತ್ಯಕ್ಕೆ ಹೊಸಕೃತಿಗಳ ಒಪ್ಪವನ್ನಿಡುವುದು ಅತ್ಯಗತ್ಯವಾಗಿದೆ. ವಿಮರ್ಶಕರೂ ಮನಃಶಾಸ್ತ್ರಜ್ಞರೂ ಸಮಾಜ ನೀತಿವಿದರೂ ಈ ಅಂಶವನ್ನು ಅಳೆದು ತೂಗಿ ನೋಡಿ ನಿಜವಾದ ಮಹಿಳೋದ್ಧಾರಕ ಬುದ್ಧಿಯಿಂದ ಮಹಿಳೆಯರ ಮಾನಸಿಕ ಗುಲಾಮಗಿರಿಗೆ ಕಾರಣಗಳಾದ ಮೇಲೆ ಹೇಳಿದ ನಿದರ್ಶನಗಳು ಸಾಹಿತ್ಯ ಕಲೆಗಳಲ್ಲಿ ಪುನಃ ತಲೆದೋರದಂತೆ ಯತ್ನಿಸುವುದು ಅವ್ಯ ಕರ್ತವ್ಯವೆಂದು ನನ್ನ ನಮ್ರ ವಿನಂತಿ.

— ಸುಭದ್ರ

ವರ್ಣವಿನ್ಯಾಸ!

ಸುಯೆಜ ಕಾಲುವೆಯ ಕಂತಾರಾ ಎಂಬ ಯುದ್ಧಕಾಲದ ಸಾರಿಗೆ ಠಾಣೆಯ ರೇಲ್ವೆ ನಿಲ್ದಾಣದಲ್ಲಿ ಸಾಲುದ್ದಕ್ಕೆ ಹತ್ತು ಶಾಯು ಖಾನೆಗಳಿವೆಯೆಂದು ಲಂಡನ್ "ಟ್ರಿಬ್ಯೂನ್" ಪತ್ರಿಕೆ ವರದಿ ಮಾಡುತ್ತದೆ. ಅವುಗಳ ಬಾಗಿಲುಗಳಲ್ಲಿದ್ದ ಹಲಗೆಗಳು ಅನುಕ್ರಮವಾಗಿ ಹೀಗೆ ಸಾರಿ ಹೇಳುತ್ತಿವೆ:

ಯುರೋಪಿಯನ್ ಅಧಿಕಾರಿಗಳಿಗಾಗಿ
ಏಶಿಯಾಟಿಕ್ ಅಧಿಕಾರಿಗಳಿಗಾಗಿ
"ಬಣ್ಣದ" (ಅಂದರೆ ಕರೇ) ಅಧಿಕಾರಿಗಳಿಗಾಗಿ
ಯುರೋಪಿಯನ್ ವಾರಂಟ್ ಆಫೀಸರ ಮತ್ತು ಸಾರ್ಜಂಟರಿಗಾಗಿ
ಏಶಿಯಾಟಿಕ್ ವಾರಂಟ ಆಫೀಸರ ಮತ್ತು ಸಾರ್ಜಂಟರಿಗಾಗಿ
"ಬಣ್ಣದ" ವಾರಂಟ ಆಫೀಸರ ಮತ್ತು ಸಾರ್ಜಂಟರಿಗಾಗಿ
ಇತರ ಯುರೋಪಿಯನ್ ಶ್ರೇಣಿಗಳಿಗಾಗಿ
ಇತರ ಏಶಿಯಾಟಿಕ್ ಶ್ರೇಣಿಗಳಿಗಾಗಿ
ಇತರ ಬಣ್ಣದ ಶ್ರೇಣಿಗಳಿಗಾಗಿ
ಸಹಾಯಕ ಮಹಿಳಾದಲಗಳಿಗಾಗಿ!

ಶಾಯುಖಾನೆಗಳಲ್ಲಿ ಕೂಡ ವರ್ಣ ಭೇದ! ನಿಗ್ರೋಗಳ ನಾಯಿಗಳಿಗಾಗಿ ಬೇರೆ ಸ್ಮಶಾನ ರಚಿಸಿದ ಬಿಳಿಯರ ಜಗತ್ತಿನಲ್ಲಿ ಏನೇನು ಸಾಧ್ಯವಿಲ್ಲ.

ಮೇಲೆಮೇಲೆ ಹೇಳುವದಾದರೆ, ಮನುಷ್ಯ ಕುಲವನ್ನು ಮುಬ್ಬಗೆಯಾಗಿ ವಿಂಗಡಿಸಬಹುದು: ಢುಡಿದು ಸಾಯುವವರು, ಕೊರಗಿ ಸಾಯುವವರು ಮತ್ತು ಬೇಸತ್ತು ಸಾಯುವವರು. ..ವಿನ್‌ಸ್ಟನ್ ಚರ್ಚಿಲ್

ಚಂದ್ರನಗರದ ನಗರಸಭಾಧ್ಯಕ್ಷ ಶ್ರೀ ದೇವೇಂದ್ರದಾಸರು ಭಾರತೀಯ ರಾಷ್ಟ್ರಧ್ವಜವನ್ನು ಹಾರಿಸಿದರು. ಈ ಸಮಾರಂಭಕ್ಕಾಗಿ ನಗರ ಸಭಾಭವನದಲ್ಲಿ ಹತ್ತು ಸಾವಿರದಷ್ಟು ಜನ ನೆರೆದಿತ್ತು.

ಸಿಂಗಪುರದಲ್ಲಿ ಕ್ರಾಂತಿಕಾರಿಗಳು ಕೌಲಕುಬು ಬಾಹ್ರು ಎಂಬ ಪಟ್ಟಣವನ್ನು ಮುತ್ತಿ ಗುಂಡು ಹಾರಿಸಿದರು; ಆದರೆ ಅದರಿಂದ ಯಾವ ಅಪಾಯವೂ ಸಂಭವಿಸಲಿಲ್ಲ. ಅಲ್ಲೀಗ ಕರ್ಫ್ಯೂ ಜಾರಿ ಮಾಡಲಾಗಿದೆ; ಪೋಲೀಸು ಮತ್ತು ಮಿಲಿಟರಿ ಗಸ್ತು ಸಾಗಿದೆ.

ಮಲಯದ ಕ

೧೯೦೦ ರೋಗಿಗಳಿಗೆ ಆಶ್ರ

ಕುಷ್ಠರೋಗ ಅಥವಾ ತೊನ್ನು ಸಮಾಜದ ದೃಷ್ಟಿಯಲ್ಲಿ ತಿರಸ್ಕಾರವನ್ನುಂಟು ಮಾಡುವ ಘನರೋಗ. ಅದರ ಸೋಂಕು ಬೇರೆ ಕೆಲ ಕಡಿಮೆ ತಿರಸ್ಕಾರಕ್ಕೊಳಗಾದ ರೋಗಗಳಷ್ಟು ಭಯಾನಕವಾಗಿಲ್ಲವೆಂದು ತಜ್ಞರು ಕಂಡುಹಿಡಿದಿದ್ದರೂ ಸಮಾಜ ದೃಷ್ಟಿ ಮಾತ್ರ ಬದಲಾಗಿಲ್ಲ. ಉಷ್ಣವಲಯದಲ್ಲಿ ಈ ರೋಗದ ಹಾವಳಿ ಹೆಚ್ಚು. ಭಾರತದಲ್ಲಿಯೂ ಲಕ್ಷಾಂತರ ಜನ ದುರ್ಭಾಗ್ಯರು ಈ ರೋಗಕ್ಕೆ ತುತ್ತಾಗಿ ತಲೆ ತಗ್ಗಿಸಿಕೊಂಡು ಬಾಳುತಿದ್ದಾರೆ.

ಭಾರತದಲ್ಲಿಯೂ ಅಲ್ಲಲ್ಲಿ ಈ ಭಾಗ್ಯಹೀನರ ಬಗ್ಗೆ ಆಸ್ಪತ್ರೆ, ವಸತಿಗಳಿದ್ದರೂ ಮಲಯದಲ್ಲಿರುವ ಭಾರಿ ಕುಷ್ಠರೋಗಿ ವಸತಿಯ ಮಾದರಿಯ ಮೇಲೆ ಇಲ್ಲೂ ಸಂಸ್ಥೆಗಳನ್ನು ಕಟ್ಟಿದರೆ ಈ ನೊಂದ ಜೀವಿಗಳಿಗೆ ತುಂಬ ಹಿತವಾದೀತು. ಮಲಯ ಸಿಂಗಾಪುರಗಳಲ್ಲಿರುವ ಎಲ್ಲ ಕುಷ್ಠ ರೋಗಿಗಳನ್ನೂ ಈ ವಸತಿಗೆ ವರ್ಗಾಯಿಸಲಾಗುತಿದೆ. ಯಾರಿಗಾದರೂ ಕುಷ್ಠ ಅಂಟಿದೆಯೆಂಬ ಸಂಶಯ ಹುಟ್ಟಿದರೆ ಅವನನ್ನು ಕಡ್ಡಾಯವಾಗಿ ಆಮೂಲಾಗ್ರ ವೈದ್ಯಕೀಯ ಪರೀಕ್ಷೆಗೆ ಗುರಿ ಮಾಡಲಾಗುವದು. ರೋಗಲಕ್ಷಣಗಳು ಸಿದ್ಧವಾದರೆ ಅವನು ಈ ವಸತಿಗೆ ಹೋಗಬೇಕಾಗುವದು.

ಸುಂಗೇ ಬುಲೋದಲ್ಲಿರುವ ಈ ಕುಷ್ಠರೋಗಿಗಳ ವಸತಿ ಮಲಯಾದ ಸಂಯುಕ್ತ ಸರಕಾರದಿಂದ ನಡೆಸಲ್ಪಡುತ್ತದೆ. ಅಲ್ಲಿ ಜಾತಿವರ್ಣ ರಾಷ್ಟ್ರೀಯತೆಗಳ ಭೇದವಿಲ್ಲದೆ ಸಮಸ್ತ ಮಲಯ—ಸಿಂಗಾಪುರಗಳಿಂದ ರೋಗಿಗಳನ್ನು ಸ್ವಾಗತಿಸಲಾಗುತ್ತದೆ. ಸದ್ಯಕ್ಕೆ ಇದರಲ್ಲಿ ೧೯೦೦ ರೋಗಿಗಳು ವಾಸಿಸುತಿದ್ದಾರೆಂದು ಬ್ರಿಟಿಷ ಸುದ್ದಿ ಸಂಸ್ಥೆ ತಿಳಿಸುತ್ತದೆ. ಇವರಲ್ಲಿ ಕೆಲ ಭಾರತೀಯರೂ ಇದ್ದಾರೆ.

ರೋಗಿಗಳ ವಸತಿಯಾದರೂ ಇದರಲ್ಲಿನ ವಾತಾವರಣ ಹೊರಗಿನದಕ್ಕಿಂತ ಬಹಳ ಭಿನ್ನವಾಗಿಲ್ಲ. ಸಾಮಾನ್ಯವಾಗಿ ಈ ರೋಗಕ್ಕೆ ತುತ್ತಾಗಿ ರುಗ್ಣಾಲಯವನ್ನು ಸೇರಿದವರಲ್ಲಿ ಎದ್ದು ಕಾಣುವ ನಿರಾಶಾಭಾವ, ವಿರಕ್ತಿಗಳು ಇಲ್ಲಿ ಕಾಣಸಿಗುವದಿಲ್ಲ.

ಸುಂಗೇ ಬುಲೋ ವಸತಿ ಸ್ವಯಂಪೂರ್ಣ, ಸ್ವಾವಲಂಬಿ ಸಂಸ್ಥೆ. ಅದರಲ್ಲಿ ಅದರದೇ ಪ್ರಾರ್ಥನಾಗೃಹಗಳೂ ಆಸ್ಪತ್ರೆಯೂ ಇವೆ. ಆಸ್ಪತ್ರೆಯಲ್ಲಿ ದಾರುಣಾವಸ್ಥೆಯಲ್ಲಿರುವ ರೋಗಿಗಳನ್ನು ಶುಶ್ರೂಷಿಸುತ್ತಾರೆ. ಅದರ ಡಾಕ್ಟರ್ ಮತ್ತು ಮುಖ್ಯ ದಾದಿಯನ್ನು ಬಿಟ್ಟರೆ ಉಳಿದ ಎಲ್ಲ ಕೆಲಸಗಾರರೂ ಕುಷ್ಠರೋಗಿಗಳೇ ಆಗಿರುವರು. ಬಿಲಿಯಾರ್ಡ್ಸ್, ರೇಡಿಯೋ ಮೊದಲಾಗಿ ಎಲ್ಲ ಬಗೆಯ ಆಟ, ನೋಟ, ಹಾಡುಗಳೇ ಮೊದಲಾದ ಮನೋರಂಜನದ ಸಾಧನಗಳೂ ಅಲ್ಲಿವೆ. ಅಲ್ಲಿನ ಪುಸ್ತಕಾಲಯಕ್ಕೆ ಅಸಂಖ್ಯ ಪುಸ್ತಕ, ಪತ್ರಿಕೆಗಳು ಬರುತ್ತವೆ.

ಅದು ತನ್ನದೇ ಒಂದು ಜಗತ್ತು. ಅಲ್ಲಿನ ನಿವಾಸಿಗಳಿಗೆ ಬ್ರಹ್ಮಚಾರಿ – ಬ್ರಹ್ಮಚಾರಿಣಿಯರಿಗೆ ಬೇರೆಯೆ ವಸತಿಗಳೂ ಕೌಟುಂಬಿಕರಿಗೆ ಬೇರೆಯೆ ಮನೆಗಳೂ ಇವೆ. ಕೆಲ ವಸತಿಕಾರರು ವ್ಯಾಪಾರ ವ್ಯವಹಾರವನ್ನೂ ಮಾಡುತ್ತಾರೆ.

ವಸತಿಯಲ್ಲಿ ಸಾಮಾಜಿಕ ತಿರಸ್ಕಾರದ ಭಯವಿಲ್ಲದುದರಿಂದ ವೇಷಭೂಷಣಗಳಲ್ಲಿ ಅಲ್ಲಿನವರು ಸಾಮಾನ್ಯ ಮಾನವರಂತೆಯೆ ವರ್ತಿಸುತ್ತಾರೆ. ಹುಡುಗಿಯರು ಸಿಂಗಾರ ಮಾಡಿಕೊಂಡು ಹೂಮುಡಿದುಕೊಳ್ಳುವದೂ ಉಂಟು. 'ತಂತಮ್ಮ ಮನೆ—ಕೋಣೆಗಳನ್ನು ಚಿತ್ರಪಟ್ಟಗಳಿಂದ ಅಲಂಕರಿಸಿಕೊಂಡು ಸಾಮಾನ್ಯ ಲೌಕಿಕರಂತೆ ಅವರು ವರ್ತಿಸುತ್ತಾರೆ ಮಕ್ಕಳಿಗೆ ಎಲ್ಲ ಬಗೆಯ ಶಿಕ್ಷಣ ವ್ಯವಸ್ಥೆಗಳೂ ಇವೆ.





ಹೊಸ ಪುಸ್ತಕಗಳು

ಸಮಾಜದ ವಿರಾಡ್ರೂಪದರ್ಶನ

ಬರಿ ೧೩೨ ಪುಟಗಳ, ಕೇವಲ ೧॥ ರೂಪಾಯಿ ಬೆಲೆಯ ಚಿಕ್ಕ ಪುಸ್ತಕವಾಗಿ ತೋರುವ ಶ್ರೀ. ಶಂ. ಬಾ. ಜೋಶಿಯವರು ಬರೆದ ಮತ್ತು "ಮಿಂಚಿನ ಬಳ್ಳಿ" ಪ್ರಕಾಶಿಸಿದ "ಸಮಾಜ ದರ್ಶನ" ಎಂಬ ಗ್ರಂಥ ಈಗಷ್ಟೇ ನಮ್ಮ ಸಾಮಾಜಿಕರಿಗೆ ಎಡುರಾಗಿದೆ. ಸಮಾಜಶಾಸ್ತ್ರವೆಂಬ ದೊಡ್ಡ ವಿಷಯವನ್ನು ಬಹಳ ಪ್ರಯತ್ನದಿಂದ ಸುಲಭಗ್ರಾಹ್ಯವಾಗಿ ಮಾಡಲು ಗ್ರಂಥಕರ್ತರು ಶ್ರಮಿಸಿದ್ದು ಕಂಡುಬರುತ್ತದೆ.

ಇಂದಿನ ಭಾರತದಲ್ಲಿ ಸಮಾಜವೆಂಬುದಿಲ್ಲ

"ಸಮಾಜ ಎಂಬುದು ಉಂಟೆ?", "ಸಮಾಜ ವಿಚಾರ", "ಸಮಾಜ ವಿಕಾಸ" "ವ್ಯಕ್ತಿ ಮತ್ತು ಸಮಾಜ" ಎಂಬ ನಾಲ್ಕು ಅಧ್ಯಾಯಗಳಲ್ಲಿ ಲೇಖಕರು ಸಮಾಜದ ದರ್ಶನವನ್ನು ಮಾಡಿಸಿಕೊಡಲು ಹೊರಟಿದ್ದಾರೆ. ಮೊದಲಿನ ೨೦ ಪುಟಗಳಲ್ಲಿ ಸಮಾಜ ಎಂಬುದು ಉಂಟೆ? ಎಂಬ ಪ್ರಶ್ನೆಗೆ ಉತ್ತರಕೊಡಲು ಪ್ರಯತ್ನಿಸಲಾಗಿದೆ. "ಗಂಡಿಗೆ ಹೆಣ್ಣಿನ ಆಕರ್ಷಣ; ಹೆಣ್ಣಿಗೆ ಮಕ್ಕಳ ಹುಚ್ಚು; ಇದು ಸೃಷ್ಟಿಕ್ರಮ. ಇದಕ್ಕೆ ವಿಪರೀತವಾಗದಂತೆ, ಏನನ್ನು ಹಾರೈಸಲಿಕ್ಕಾದೀತೋ ಅಷ್ಟೇ ಲೇಸು, ಇದನ್ನು ಮೀರಿ ಮಾಡಬಯಸುವ ಕಸರತ್ತು ಅಸ್ವಾಭಾವಿಕ, ಅದು ಸಹಜ ಮಧುರಕಾರ್ಯವೆನಿಸಲಾರದು" ಎಂದು ನಿರಾಶರಾಗುವದು ಒಂದು ಮನೋಧರ್ಮ; ಎರಡನೆಯದಾಗಿ ಎಲ್ಲವನ್ನೂ ಹೀಯಾಳಿಸುತ್ತ ತಾನೇ ಹೆಚ್ಚೆಂದು ತಿರುಗುವ ಮನೋಧರ್ಮ—ಮೂರನೆಯದಾಗಿ ಸಂಸಾರವನ್ನು ಮಾಯೆಯೆಂದು ತಿರಸ್ಕರಿಸಿ ವನಾಂತರದ ಏಕಾಂತವನ್ನು ಬಯಸುವ ಮನೋಧರ್ಮ; ಇವುಗಳಿಂದ ಮತ್ತು ಸಮಾಜ ಮತ್ತು (ಜಾತಿ) ಧರ್ಮದ ಕಲ್ಪನೆಗಳು ಒಂದರೊಳಗೊಂದು ಬೆರೆತುಕೊಂಡು ಬೆಳೆದುಬಂದುದರಿಂದ ಈಗಿನ ಕಾಲಕ್ಕೆ ಲಾಭಕ್ಕಿಂತ ಹಾನಿಯೇ ಹೆಚ್ಚಾಗಿದೆ; ಪರಲೋಕದ ಸುಖಕ್ಕಾಗಿ ಜನತೆ ಧರ್ಮಕಾರ್ಯವೆಸಗುವ ಪ್ರವೃತ್ತಿಯುಳ್ಳದ್ದಾಗಿರುವುದರಿಂದ ಸಮಾಜಕ್ಕಾಗಿ ಅದು ಏನನ್ನೂ ಮಾಡಿಲ್ಲ. ಆದುದರಿಂದ ಭಾರತದಲ್ಲಿ ಸಮಾಜ ಎಂಬುದಿಲ್ಲ, ಎಂದರೆ ಸಮಾಜ ಇಲ್ಲಿ ಕೇವಲ ಬಾಲ್ಯಾವಸ್ಥೆಯಲ್ಲಿದೆ ಎಂದು ಲೇಖಕರು ತೀರ್ಮಾನಿಸಿದ್ದಾರೆ.

ಸಾಮ್ಯವಾದ ಮತ್ತು ಸಾಧನಶುದ್ಧಿ

ಎರಡನೆಯ ಮತ್ತು ಮೂರನೆಯ ಅಧ್ಯಾಯಗಳಲ್ಲಿ ಹಲವಾರು ಪಾಶ್ಚಾತ್ಯ ಸಮಾಜ ಶಾಸ್ತ್ರಜ್ಞರ ಮತ್ತು ತತ್ವಜ್ಞಾನಿಗಳ ವಿಚಾರಗಳನ್ನು ಸಂಕಲಿಸಿಕೊಡಲಾಗಿದೆ. ಒಬ್ಬನ ತೀರ್ಮಾನವನ್ನು ಇನ್ನೊಬ್ಬನು ಖಂಡಿಸಿರುವುದೂ ಉಕ್ತವಾಗಿದೆ. ಅಂತ್ಯದಲ್ಲಿ ಸೈದ್ಧಾಂತಿಕವಾಗಿ ತಮ್ಮ ನಿಜಭಾರತೀಯ ಸೂಕ್ಷ್ಮ ವಿಚಾರಗಳನ್ನು ಲೇಖಕರು ಅಲ್ಲಲ್ಲಿ ಕೊಡುತ್ತ ಬಂದಿದ್ದಾರೆ.

"ಮೊದಲು, ಎಲ್ಲರಿಗೂ ಸಮಾನ-ಸಾಮಾನ್ಯ ಆಸಕ್ತಿಯಿದ್ದಲ್ಲಿಯೆ ಸಮಾಜವು ಭದ್ರವಾಗಿ ಉಳಿಯಬಲ್ಲದು. ಒಂದೊಂದು ಪಂಗಡದ ಭಿನ್ನ ಭಿನ್ನ ಆಸಕ್ತಿಗಳಿದ್ದಲ್ಲಿ ಸಾಮಾನ್ಯ ಸಂಕಲ್ಪವು ನಿಷ್ಪನ್ನವಾಗಲಾರದು," ಎಂದು ಪ್ರಾರಂಭಿಸಿ, ಸಮಾಜ ವಿಭಾಗಗಳನ್ನು ನಿರ್ದೇಶಿಸಿ, ಮಾನಸಶಾಸ್ತ್ರದ ಗೌರವವನ್ನು ಗ್ರಂಥಕರ್ತರು ಪ್ರಶಂಸಿಸಿದ್ದಾರೆ. ಅನಂತರ, "ಜೀವವೂ ಭೌತಿಕ ಶರೀರದ ಒಂದು ಅಂಶ; ಮನಸ್ಸು ಅಥವಾ ಬುದ್ಧಿಗೆ ಸ್ವತಂತ್ರ ಸ್ಥಾನವಿಲ್ಲ.... ಲೈಂಗಿಕ ಆಕರ್ಷಣವೇ ಎಲ್ಲ ಕರ್ಮಪ್ರವೃತ್ತಿಯ ಮೂಲ. ಲೈಂಗಿಕ ಆಕಾಂಕ್ಷೆಗಳನ್ನು ಒಳಗೊಳಗೇ ದಬ್ಬಿ ಬಿಗಿದಿಡುವುದರಿಂದ ಮಾನವನ ಜೀವನದಲ್ಲಿ ಕಗ್ಗತ್ತಲು ಕವಿಯುತ್ತದೆ. ಎಂಬೀಬಗೆಯ ವಿಚಾರಗಳ ಪ್ರಚಾರದಿಂದ ಸಂಯಮವು ಅಸ್ವಾಭಾವಿಕವಾದ ಕಾರ್ಯವೆಂಬ ಭಾವನೆಯು ಬಲಿತು ಕಾಮುಕತೆ, ವಿಲಾಸಕ್ಕೆ ಪರಮಾವಧಿ ಉಕ್ಕು" ಬಂದ ಪಾಶ್ಚಾತ್ಯ ಚಾರ್ವಾಕ ವಿಚಾರದಿಂದ ಪ್ರಾರಂಭಿಸಿ ನೀಚೆಯ ಪಾಶವಿಯಾದ ಅತಿಮಾನವ ವಾದವನ್ನು ವಿವರಿಸಿ, ಡಾರ್ವಿನ್ನನ ಬಲಶಾಲಿಯಾದವನೇ ಬಾಳಬಲ್ಲನು ಎಂಬುದರಿಂದ ಉಂಟಾದ ಮಂಗಬಗೆಯನ್ನು ಸಮರ್ಥನೆ ಮಾಡಿಕೊಳ್ಳುವ ಮನೋಧರ್ಮದತ್ತ ಲಕ್ಷ್ಯಸೆಳೆದು, ಆರ್ಥಿಕ ಸಾಮ್ಯವಾದವನ್ನು ಪುರಸ್ಕರಿಸಿ, ಆದರೆ ಅದರ ಸಾಧನಶುದ್ಧಿಯನ್ನು ಒತ್ತಿ ಹೇಳಲಾಗಿದೆ. ಪಾಶ್ಚಾತ್ಯ ಪೌರಸ್ತ್ಯ ದೃಷ್ಟಿಭೇದವನ್ನು ಆಯಾ ವರ್ಗದ ಪುರುಷಾರ್ಥಗಳ ಮೇಲಿಂದ ನಿರ್ದೇಶಿಸಿ ತನ್ಮೂಲಕ ಆಗುತ್ತಿರುವ ಮಾರ್ಪಾಟನ್ನು ಎತ್ತಲಾಗಿದೆ. ಮೊದಲಿನ ಅಧ್ಯಾಯದಲ್ಲಿ ಸೂಚಿತವಾದ ಗ್ರಂಥಕರ್ತರ ಭಾರತಸಮಾಜ ವಿಡಂಬನಪ್ರವೃತ್ತಿ ಇಲ್ಲಿಯೂ "ಭಾರತದಲ್ಲಿ ನಾಲ್ವತ್ತುಕೋಟಿ ಜನಗಳಿದ್ದುದೇನೋ ನಿಜ. ಆದರೆ ಎಷ್ಟು ಜನಗಳೋ ಅಷ್ಟು ಸ್ವತಂತ್ರ ಲೋಕಗಳು" ಎಂಬ ವಾಕ್ಯದಲ್ಲಿ ಮೂಡಿಬಂದಿದೆ. ಚಾತುರ್ವರ್ಣ್ಯದ ವಿಷಯವನ್ನೆತ್ತಿ ಅದು ಶ್ರಮವಿಭಾಗದ ತತ್ವವನ್ನವಲಂಬಿಸಿದೆಯಲ್ಲದೆ ಜನ್ಮವನ್ನು ಸರ್ವಥಾ ಅಲ್ಲ ಎಂದು ಜೋಶಿಯವರು ಸಾರಿದ್ದಾರೆ. ಜನ್ಮದಿಂದ ವರ್ಣವನ್ನು ನಿಶ್ಚಯಿಸುವ ಭಾರತೀಯ ಪದ್ಧತಿಯನ್ನು ಹಳಿದಿದ್ದಾರೆ.

ಸಮನ್ವಯದ ದೃಷ್ಟಿ ಮತ್ತು ಪರಿಪೂರ್ಣತೆಯತ್ತ ನಡೆ

ಅನಂತರ ಮಾನವರು ಮೂಲತಃ ಸತ್ಪ್ರವೃತ್ತಿಪ್ರಧಾನನು ಎಂಬ ಅಂಶವನ್ನು ಸಮರ್ಥವಾಗಿ ಲೇಖಕರು ಪ್ರತಿಪಾದಿಸಿದ್ದಾರೆ; ಕಡೆಯ ನಿರ್ಣಯವೆಂದು ಅವರು, "ಉಪನಿಷತ್ತಿನ ಭಾಷೆಯಲ್ಲಿ ಹೇಳಬಹುದಾದರೆ, ಮೊದಲನೆಯದು ಅಸಂಭೂತಿ. ಇದರ ಉಪಾಸನೆಯಿಂದ ಅಮೃತತ್ವದ ಆನಂದವು ಪ್ರಾಪ್ತವಾಗುತ್ತದೆ. ಎರಡನೆಯದು ಸಂಭೂತಿ. ಇದನ್ನು ಒಲಿಸಿಕೊಂಡವರು ಸಂಸಾರದೊಳಗಿಂದ ಸುಖದಿಂದ ಪಾರಾಗುತ್ತಾರೆ. ಆದರೆ ಬರಿ ಈ ಸಂಭೂತದ ಬೆಂಬತ್ತಿದವರು ನಿಜಾನಂದಕ್ಕೆ ಅಥವಾ ಸದಾನಂದಕ್ಕೆ ಎರವಾಗುತ್ತಾರೆ. ಕೇವಲ ಯಾವುದೊಂದನ್ನೇ ಆರಾಧಿಸುವುದು ಕಗ್ಗತ್ತಲೆಯ ದಾರಿ" ಎಂಬ ವಾಕ್ಯಗಳಲ್ಲಿ ತ್ಯಾಗಭೋಗಗಳ, ಇಹಪರಗಳ, ಶ್ರೇಯಃಪ್ರೇಯಗಳ, ಪಾಶ್ಚಾತ್ಯತ್ವ ಪೌರಸ್ತ್ಯತ್ವಗಳ ಸಮನ್ವಯ ಮಾಡಬೇಕೆಂಬ ತಮ್ಮ ಅಂತರ್ಯವನ್ನು ಹೊರಗೆಡಹಿದ್ದಾರೆ; "ಅತಿ ಸರ್ವತ್ರ ವರ್ಜಯೇತ್" ಎಂಬುದನ್ನು ವಿವರಿಸಲು ಹೆಣಗಿದ್ದಾರೆ. ಸಾಮಾನ್ಯರಿಗೆ ಈ ದೃಷ್ಟಿಗಿಂತ ಪಥ್ಯವಾದ ದೃಷ್ಟಿ ಮತ್ತೊಂದಿಲ್ಲ.

ಸಮಾಜವಿಕಾಸದ ಅರ್ಥ ಹೇಳುವಲ್ಲಿ ವಿಕಾಸವೆಂದರೆ ಯಾವಾಗಲೂ ಪ್ರಗತಿಯೆಂದೇ ಅರ್ಥವಾಗದೆಂಬ ಅಂಶವನ್ನು ಪ್ರಸ್ತುತ ಸಮಾಜಶಾಸ್ತ್ರಜ್ಞರು ಮನಗಾಣಿಸಲು ಯಶಸ್ವಿಯಾಗಿ ಪ್ರಯತ್ನಿಸಿದ್ದಾರೆ; "ಆದರೂ ಸಮಾಜವು ಪರಿಪೂರ್ಣತೆಯ ಕಡೆಗೇ ಸಾಗಿದೆ" ಎಂದೂ ಜೊತೆಗೇ ಒಕ್ಕಣಿಸಿದ್ದಾರೆ. ಇದಕ್ಕೆ ಉಪನಿಷತ್ತುಗಳ ಸಾಕ್ಷಿಯನ್ನು ಹಾಸ್ಯಧ್ವನಿಯಿಂದ ಉಲ್ಲೇಖಿಸಿದ್ದಾರೆ. ವಿವಿಧ ತಜ್ಞರ ವಿಕಾಸಕಲ್ಪನೆಯನ್ನು ಹೇಳುತ್ತ, "ದೇವರ ಹೆಸರನ್ನು ತಕ್ಕೊಳ್ಳದೇ ಇರುವುದು, ಅಷ್ಟೇ ಏಕೆ, ದೇವರೇ ಇಲ್ಲವೆಂದು ಔದ್ಧತ್ಯದಿಂದ ಪ್ರತಿಪಾದಿಸುವುದು ಆಧುನಿಕತೆಯ ಲಕ್ಷಣ; ಸುಶಿಕ್ಷಿತತನದ ಕುರುಹು. ಇಂದು ಇದೇ ಫ್ಯಾಶನ್ನು" ಎಂಬ ವಿಡಂಬನೋಕ್ತಿಯನ್ನಾಡಿ, ೪೦೦೦ ವರ್ಷಗಳ ಹಿಂದೆ ಯಾಜ್ಞವಲ್ಕ್ಯನು ದೇವನಾಮನಿರ್ದೇಶವಿಲ್ಲದೆ ಮಾಡಿದ ವಿಕಾಸ ಸಿದ್ಧಾಂತವನ್ನು ಲೇಖಕರು ಕೊಂಡಾಡಿದ್ದಾರೆ; ಮತ್ತು ಪ್ರಗತಿಯ ಒಂದು ಘಟ್ಟವು ಮುಗಿದೊಡನೆ ಹೊಸ ಘಟ್ಟವು ಕ್ಷಿತಿಜದ ಮೇಲೆ ಕಣ್ಣೆದುರಿಗೆ ಬಂದೇಬಿಡುತ್ತದೆ. ಇಂತು ಪೂರ್ಣತೆಯು ಯಾವಾಗಲೂ ಕ್ಷಿತಿಜದಲ್ಲಿ—ಕಣ್ಣೆದುರಿಗೇ" ಎಂದು ವಾಸ್ತವತೆ ಹೇಗೆ ಆದರ್ಶದಿಂದ ಭಿನ್ನ ಎಂಬುದನ್ನು ಹೇಳಿದ್ದಾರೆ. ಅಲ್ಲದೆ, ಪೂರ್ಣತೆ ಎಂದರೆ ಜಗತ್ತಿನ ಪ್ರಲಯ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ. ಹಾಗೆಂದು ಆದರ್ಶವನ್ನು ಅಸಾಧ್ಯವೆಂದು ಬಿಡಬಾರದೇಕೆ? ಎಂಬ ಪ್ರಶ್ನೆ ಏಳಬಹುದೆಂದು ಅದು ಹಾಗಲ್ಲ— ಪೂರ್ಣತೆಯ ಆದರ್ಶದಲ್ಲಿ ಶ್ರದ್ಧೆಯಿಂದ ದೃಷ್ಟಿಯನ್ನು ಸ್ಥಿರಗೊಳಿಸಿ, ತನ್ನ ಅನುದಿನದ ನಡೆವಳಿಯಲ್ಲಿ ಅಪೂರ್ಣತೆಯ ಅರಿವೆಯು ಇರುವಲ್ಲಿಯೇ ಮಾನವರ ಕ್ಷೇಮವಿದೆ ಎಂದೂ ಜೋಶಿಯವರು ಸಾಧಿಸ ಹೊರಟಿದ್ದಾರೆ. ಏತನ್ಮಧ್ಯೆ ಅಪೂರ್ಣತೆಗಳು ಪರಸ್ಪರ ಪೂರಕಗಳಾಗಿ ಸಮಾಜದ ಬಂಧವನ್ನು ಉಳಿಸಿವೆಯೆಂದು ಹೇಳಿ, ಆದರ್ಶದತ್ತ ದೃಷ್ಟಿಯನ್ನು ನಿಷ್ಠೆಯಿಂದ ಇಡುವುದನ್ನು ಅವರು ಪ್ರತಿಪಾದಿಸಿದ್ದಾರೆ.

ಆಸ್ತಿಕತೆ ರಸಿಕತೆಗಳ ನಿಜಸ್ವರೂಪ

ವ್ಯಕ್ತಿ ಮತ್ತು ಸಮಾಜಗಳ ಅರ್ಥವನ್ನು ನಾಲ್ಕನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ವ್ಯಕ್ತಿಗೆ ಸ್ವಾರ್ಥ, ಅಹಂಕಾರ, ವೈಶಿಷ್ಟ್ಯಗಳು ಆಧಾರವೆಂದೂ ವಿರಾಡ್ರೂಪದ ವಿಶ್ವಶಕ್ತಿಯೆನಿಸುವ ಸಮಾಜಕ್ಕೆ ನಿಃಸ್ವಾರ್ಥ, ನಿರಹಂಕಾರ, ನಿರ್ವೈಶಿಷ್ಟ್ಯಗಳು ಅಡಿಗಲ್ಲೆಂದೂ ಹೇಳಲಾಗಿದೆ. ತನ್ನತನವನ್ನು ಕಾಯ್ದುಕೊಳ್ಳುವದರಿಂದ ವ್ಯಕ್ತಿತ್ವವುಂಟಾಗುವುದೆಂದೂ ತನ್ನತನ ಅಳಿದು ವಿಕಾಸಹೊಂದಿದರೆ ವ್ಯಕ್ತವಾದ ವ್ಯಕ್ತಿ ಅವ್ಯಕ್ತವಾದ ಅದರೆ ವಿಶ್ವವ್ಯಾಪಿಯಾದ ಸಮಾಜದಲ್ಲಿ ವಿಶ್ವಕುಟುಂಬಿತ್ವ ಹೊಂದಿ ಲೀನವಾಗುತ್ತದೆಯೆಂದೂ ಪ್ರತಿಪಾದಿಸಲಾಗಿದೆ. ಈ ನಡುವೆ, ಅನಾಯಾಸವಾಗಿ ಬಂದ ರೂಪಾದಿಗುಣಗಳಿಗಿಂತ ಸ್ವಶ್ರಮದಿಂದ ಸಂಪಾದಿಸಿದ ಆಂತರಿಕವ್ಯಕ್ತಿತ್ವ ಹಿರಿದು ಎಂದೂ ಮಹಾವ್ಯಕ್ತಿಗಳು ಸಮಾಜದ ತಿರಸ್ಕಾರ ಪುರಸ್ಕಾರಗಳನ್ನು ಲೆಕ್ಕಿಸದೆ ತಮ್ಮದೇ ಆದ ದಾರಿಯಲ್ಲಿ ಮುಂದುವರಿಯುತ್ತಾರೆಂಬ ಮಾತಿನಲ್ಲಿ ಮಹಾತ್ಮರ ಸಾಹಸವೃತ್ತಿಯನ್ನೂ ಪ್ರಶಂಸಿಸಲಾಗಿದೆ. ವ್ಯಕ್ತಿತ್ವವನ್ನು ಪಡೆವ ಹಂಬಲು ತಿಳಿವಳಿಕೆ ಬಂದಂತೆ ಅಳಿಯುವುದು... ತತ್ವನಿಷ್ಠೆಯಿಂದ ಕಾರ್ಯಪ್ರವೃತ್ತರಾದ ಪ್ರಾಮಾಣಿಕರಿಗೆ ವ್ಯಕ್ತಿತ್ವವು ತನ್ನ ತಾನೆ ಅನುಸರಿಸುವದು... ಹೆಸರಿನ ಹುಚ್ಚಿನಿಂದಲೇ ಮುಂದೆ ಬಂದು ಮೆರೆದಾಡುವವರನ್ನು ಆದರ್ಶರೆಂದು ಯಾವ ಸಮಾಜವು ತನ್ನ ತಲೆಯ ಮೇಲಿರಿಸಿಕೊಳ್ಳುವುದೋ ಅದು ತನ್ನ ಅಧಃಪಾತದ ಪೂರ್ವಸಿದ್ಧತೆಯನ್ನು ನಡೆಸಿರುತ್ತದೆ... ಕೈಕೊಂಡ ಕಾರ್ಯದಲ್ಲಿ ಅಂತರ್ಗತ ಹಿರಿಮೆಯನ್ನು ಮನಗಂಡು ಅದರಲ್ಲಿ ತೊಡಗುವವರೆ ಆಸ್ತಿಕರು... ಕೇವಲನಾವೀನ್ಯಕ್ಕಾಗಿನವೀನತೆಯನ್ನಾಶ್ರಯಿಸುವುದು ಹಿತಕರವಲ್ಲ.. ಸಮಾಜದ ಧಾರಣೆಗೆ ಕಾರಣವಾಗುವ ಕೃತಿಯೇ ಧರ್ಮ... ಸಮಾಜವೆಂಬುದು ಚೈತನ್ಯ ಸಾಗರ.. ಆಶ್ಚರ್ಯಕ್ಕಾಗಿ (ಅದು ಸ್ಫೂರ್ತಿಯ ಉಗಮ) ಕೃತ್ರಿಮ ಸಾಧನಗಳನ್ನು... ಸಿನೆಮಾ, ರೇಡಿಯೋ, ವ್ಯಾಸಪೀಠ, ರಂಗಭೂಮಿ, ನೈಟ್‌ಕ್ಲಬ್, ಪತ್ತೆದಾರಿ ಕಾದಂಬರಿ, ರೋಮಾಂಚಕಾರಿ ಉತ್ತಾನ ಶೃಂಗಾರ ಕಥೆ ಮತ್ತು ಕವಿತೆ, ಮದ್ಯ, ಮದಿರಾಕ್ಷಿ... ಇಂತಹ ಸಾಧನಗಳಿಂದ ಎಂತೂ ಮೈಮರೆಯಲು ಒದ್ದಾಟವು ನಡೆದಿರುವುದು.. ರಸಿಕತೆ, ಸಂಸ್ಕೃತಿಯನ್ನು ಹೆಚ್ಚಿಸಿಕೊಂಡವರಿಗೆ ಸಹಜ ಆಶ್ಚರ್ಯದ ತನ್ಮಯತೆಯಿಂದ ಪ್ರಾಪ್ತವಾಗುವ ಆನಂದದ ಶಾಂತಿಯು ಮೇಲಿನ ಕೃತ್ರಿಮ ಸಾಧನಗಳಿಂದ ಎಂದೂ ದೊರೆಯದು... ವಿವಿಧತೆಯಲ್ಲಿ ಸೌಂದರ್ಯವಿದೆ.,. ಸಮಾಜವೆಂಬುದು ಒಂದು ಕಲಾಮಂದಿರ. ಅದರಲ್ಲಿರುವ ವಿಧವಿಧದ ಚಿತ್ರಗಳೂ ಮೂರ್ತಿಗಳೂ ಎಲ್ಲ ಮಾನವ ವ್ಯಕ್ತಿಗಳು. ಕೆಲವೊಂದು ಮೂರ್ತಿ ಚಿತ್ರಗಳನ್ನು ಒಂದೊಂದು ವಿಶಿಷ್ಟ ಮರ್ಯಾದೆಯಿಂದ ಕಾಣಬೇಕಿರುತ್ತದೆ. ಈ ಮರ್ಯಾದೆಯು ಸರಿಯಾಗಿ ಸಾಧಿಸದೆ ಇದ್ದರೆ ವ್ಯಕ್ತಿಗತ ಸೌಂದರ್ಯವು ಮನಸ್ಸಿಗೆ ಹಿಡಿಯುವುದಿಲ್ಲ... ಮರ್ಯಾದೆಯನ್ನು ಇಟ್ಟು ನೋಡುವ ಹದವು ತಿಳಿದರೆ ಲೋಕದಲ್ಲಿ ಅಸೌಂದರ್ಯವೆಂಬುದೇ ಇಲ್ಲ... ವ್ಯಕ್ತಿಯು ತಾನೇ ತನ್ನ ಹಿನ್ನೆಲೆ, ಸ್ಥಾನ ಮರ್ಯಾದೆಗಳನ್ನು ನಿರ್ಧರಿಸಿಕೊಂಡು ನಿಂತು ಸಮಾಜಮಂದಿರದ ಅಂದವನ್ನು ಅಭಿವೃದ್ಧಿಗೊಳಿಸಲು ನೆರವಾಗುವುದು ಕರ್ತವ್ಯವಾಗಿರುತ್ತದೆ... 'ಪರಸ್ಪರಂ ಭಾವಯಂತಃ ಶ್ರೇಯಃ ಪರಂ... Secrecy is sin--ಗುಟ್ಟುಮಾಡುವುದು ಪಾಪಕರ... ಉಡುಪುತೊಡಪು ಹೇಗೆ ವ್ಯಕ್ತಿಯ ಅಂತರಂಗದ ಬಾಹ್ಯಪ್ರದರ್ಶನವೆನ್ನಬಹುದೋ ಹಾಗೆಯೇ ಮಾತು, ಶೈಲಿ, ಭಾಷೆಯ ವಿಸ್ತಾರ, ಕಲಾಸಾಹಿತ್ಯದ ಮಟ್ಟ ಮತ್ತು ಶೈಲಿಗಳು ಆಯಾ ಸಮಾಜದ ಅಂತರಂಗದ ಬಾಹ್ಯಪ್ರತೀಕ... ಮಾನವನ ಎಲ್ಲ ಶಕ್ತಿಯ ಕೇಂದ್ರ ಸಮಾಜ. ಸಮಾಜದ ಎಲ್ಲ ಸಾಮರ್ಥ್ಯದ ಉಗಮವು ಅನಂತಗುಣಪೂರ್ಣ ಸ್ವಯಂಪ್ರಕಾಶ... ಊರ್ಧ್ವಮೂಲಮಧಃಶಾಖಂ ಅಶ್ವತ್ಥಂ ಪ್ರಾಹುರವ್ಯಯಂ ಎಂದು ಗೀತೆಯು ವರ್ಣಿಸಿದ ಮುಗಿಲತ್ತಣಿಂದ ನೆಲದ ಕಡೆಗೆ ಚಿಗಿವಶಾಶ್ವತವೃಕ್ಷ ಎಂದುಹೇಳಿ, ವ್ಯಕ್ತಿಗಳು ಸಕಲಜೀವ ಸ್ನೇಹಭಾವದವರಾಗಿ ಸಮಾಜದ ಮುಖಾಂತರವಾಗಿತಮ್ಮ ಪ್ರೀತಿಯ ತ್ಯಾಗ ಸೇವೆಗಳ ಮೂಲಕ ಅನಂತನ ಉಪಾಸನೆ ಮಾಡಿ ಜೀವನದಲ್ಲಿ ಕೃತಾರ್ಥರಾಗುವುದೇ ಶ್ರೇಯೋಮಾರ್ಗ..ಎಂದು ತೀರ್ಮಾನಿಸಿ ಶ್ರೀ ಶಂ, ಬಾ. ಜೋಶಿಯವರು ಕಡೆಯ ಅಧ್ಯಾಯದಲ್ಲಿ ವ್ಯಕ್ತಿ ಮತ್ತು ಸಮಾಜಗಳ ಪರಸ್ಪರ ಸಂಬಂಧದ, ಶ್ರೇಯೋಭಿವೃದ್ಧಿಗಳ ಸಾಧನೆಯ ಮಾರ್ಗವನ್ನು ನಿರ್ದೇಶಿಸಿದ್ದಾರೆ.

ನೆನಪು ಕಹಿಯಿಲ್ಲ

ಲೇಖಕರು : ಶ್ರೀಮತಿ ಕೃಷ್ಣಾ ಹಠಿಸಿಂಗ, ಅನುವಾದಕರು : ದೇ. ಜವರೇಗೌಡ, ಪ್ರಕಾಶಕರು : ಜೀವನ ಪ್ರಕಟನಾಲಯ ಮೈಸೂರು. ಬೆಲೆ ರೂ. ೨-೮-೦ ಪುಟಗಳು ೨೪೭.

ಶ್ರೀಮತಿ ಕೃಷ್ಣಾ ಹಠಿಸಿಂಗರ ಈ ಗ್ರಂಥವು ಆತ್ಮಕಥೆಯನ್ನು ಹೊಸ ಬಗೆಯಲ್ಲಿ ನಿರೂಪಿಸುತ್ತದೆ. ಈ ಗ್ರಂಥದಲ್ಲಿ ಅವರ ಜೀವನ ದಾರಂಭದಿಂದ ೧೯೪೩ನೆಯ ರಾಜಕೀಯ ಆಂದೋಲನದ ವರೆಗಿನ ತಮ್ಮ ಜೀವನ ಮತ್ತು ರಾಜಕೀಯ ಇತಿಹಾಸಗಳ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟಿದ್ದಾರೆ. ಆನಂದಭವನದ ವರ್ಣನೆ, ಜವಾಹರಲಾಲರ ಬಗ್ಗೆ ಕೆಲ ಚಿತ್ರಗಳು ಮತ್ತು ತಮ್ಮ ತಂದೆಯವರ ವ್ಯಕ್ತಿತ್ವದ ಚಿತ್ರ ಒಳ್ಳೆ ಆಕರ್ಷಣೀಯವಾಗಿವೆ. ನೆಹರು ಮನೆತನದ ಪರಿಚಯ ಮಾಡಿಕೊಳ್ಳಲು ಈ ಗ್ರಂಥ ಅತ್ಯಂತ ಸಹಾಯಕಾರಿಯಾಗಿದೆಯೆಂದು ಹೇಳಬಹುದು.

ಲೇಖಕರು ಪ್ರತಿಯೊಂದು ಘಟನೆಯನ್ನು ಸೂಕ್ಷ್ಮವಾಗಿ ಅವಲೋಕಿಸಿ ಅದರ ಮಹತ್ವವನ್ನು ಪೃಥಕ್ಕರಿಸಿ ಸುಂದರವಾಗಿ ಚಿತ್ರಿಸಿದ್ದಾರೆ. ಸೆರೆಮನೆಯಲ್ಲಿ ಸ್ತ್ರೀಯರು ಅನುಭವಿಸಬೇಕಾದ ಕಷ್ಟ ನಿಷ್ಠುರಗಳ ಸಹಜ ಚಿತ್ರವನ್ನು ಕೊಟ್ಟಿದ್ದಾರೆ. ಯಾವ ಘಟನೆಯ ಬಗೆಗೂ ಅತಿಶಯೋಕ್ತಿಗಳನ್ನು ಕೊಟ್ಟಿರುವದಿಲ್ಲ. ಶೈಲಿ ಹೃದಯಂಗಮವಾಗಿ ಸುಂದರವಾಗಿದೆ. ಕೆಲ ದೃಶ್ಯಗಳಂತೂ ತೀರ ಮನೋವೇಧಕವಾಗಿವೆ. ಆದರೆ ಚಿತ್ರಗಳ ಕಾಲಾವಧಿಯನ್ನು ಸರಿಯಾಗಿ ಕೊಟ್ಟಿರುವದಿಲ್ಲ. ಅದೊಂದನ್ನು ಬಿಟ್ಟರೆ ಇದು ತೀರ ಉತ್ತಮವಾದ ಗ್ರಂಥವೆಂದು ಹೇಳಬಹುದು.

ಮೂಲ ಲೇಖನದಲ್ಲಿಯ ಭಾವನೆ, ಅಭಿಪ್ರಾಯ, ಶೈಲಿಗಳಿಗೆ ಕುಂದು ಬಾರದಂತೆ ಅನುವಾದಿಸುವದು ಅನುವಾದಕನು ಲಕ್ಷಿಸತಕ್ಕ ಮುಖ್ಯ ಸಂಗತಿಯಾಗಿದೆ. ಈ ಗ್ರಂಥವನ್ನು ಅನುವಾದಿಸಿದ ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕ ದೇ ಜವರೇ ಗೌಡರು ಅನುವಾದನ ಕಾರ್ಯವನ್ನು ಅಷ್ಟೇನೂ ಯಶಸ್ವಿಯಾಗಿ ಮಾಡಿಲ್ಲವೆಂದು ಹೇಳಬೇಕಾಗುತ್ತದೆ. ಮೂಲ ಲೇಖನದ ರುಚಿ ಅನುವಾದಿತ ಗ್ರಂಥದಲ್ಲಿ ಸ್ವಲ್ಪವೂ ಕಂಡುಬರುವದಿಲ್ಲ. ಇದು ಕೇವಲ ಶಾಬ್ದಿಕ ಅನುವಾದವಾಗಿರುವಂತೆ ಭಾಸವಾಗುತ್ತದೆ, ಯಾಂತ್ರಿಕವಾಗಿ ತೋರುತ್ತದೆ.

ಗ್ರಂಥದಲ್ಲಿ ಮುದ್ರಣ ದೋಷಗಳು ಬಹಳ ಉಳಿದುಕೊಂಡಿವೆ. ಕೆಲ ಸಂದರ್ಭಗಳಲ್ಲಿ ಈ ದೋಷಗಳ ಪರಿಣಾಮವಾಗಿ ಅರ್ಥವೇ ಆಗುವದಿಲ್ಲ.

ಅನುವಾದಕರು ಹೆಚ್ಚು ಪರಿಶ್ರಮ ವಹಿಸಿದ್ದರೆ ಈ ಗ್ರಂಥವನ್ನು ಸುಂದರವಾಗಿ ಅನುವಾದಿಸಬಹುದಾಗಿತ್ತೆಂಬುದು ಕೆಲ ಸನ್ನಿವೇಶಗಳ ಯಥಾನುವಾದದಿಂದ ಕಂಡುಬರುವದು. ಅನುವಾದಕರು ಶಾಬ್ದಿಕ ಅನುವಾದದತ್ತ ಹೆಚ್ಚು ಲಕ್ಷ್ಯಕೊಡದೆ ಮೂಲ ಲೇಖನಗಳಲ್ಲಿಯ ಭಾವನೆಗಳನ್ನು ಅಳವಡಿಸಿಕೊಂಡು ಅನುವಾದ ಮಾಡಲು ಪ್ರಯತ್ನಿಸುವದು ಹೆಚ್ಚು ಒಳಿತು ಕೆಲ ವ್ಯಾಕರಣ ದೋಷಗಳನ್ನು ಕೆಳಗಿನ ಅಪಪ್ರಯೋಗಗಳಲ್ಲಿ ಕಾಣಬಹುದು.

ಪುನರುಚ್ಚರಿಸಿದರು, ಸಶಸ್ತ್ರಧಾರಿಗಳಾದ ಜಾಜ್ವಲ್ಯವಾದ, ಅಂತರ್ರಾಷ್ಟ್ರೀಯ, ಯಜಮಾನ್ಯ, ಕೃಪಾಂಗ, ಭಾರತೀಯರು, ಆರೋಗ್ಯದೃಢಕಾಯಳಾದ, ಮನರಂಜಕ, ಅರ್ಥಾಮರ್ಥವಾದ, ಜವಹಿರೆ, ಜವಹರರ, ಬಾಪುಜೀಯವರು, ವಿಶಿಷ್ಟ, ಗಾಂಧೀಜಿಯವರ, ಜಿಗುಪ್ಸೆ, ನೈಚ್ಯಾಹಾರ, ಅಧೈರ್ಯತೆ, ವೈಯುಕ್ತಿಕ.

ಶೈಲಿಯಲ್ಲಿಯ ಸಾತ್ವಿಕ ಸಂತಾಪಧ್ವನಿ

ಮೊದಲನೆಯ ಅಧ್ಯಾಯದಲ್ಲಿ ಲೇಖಕರು ಇಂದಿನ ಭಾರತೀಯ ಸಮಾಜವನ್ನು ಬಣ್ಣಿಸಹೋಗಿ ಅದನ್ನು ಬಹಳ ತಿರಸ್ಕಾರಕ್ಕೆ ಗುರಿಮಾಡಿದ್ದಾರೆ; ವ್ಯಕ್ತಿಗಳ ಕೆಲ ಪ್ರವೃತ್ತಿಗಳನ್ನು ಹೀಗಳೆದಿದ್ದಾರೆ. ಜಗತ್ತಿನ ಇತರಸಮಾಜಗಳೊಡನೆ ಹೋಲಿಸಿದರೆ ಸಧ್ಯದ ಭಾರತೀಯ ಸಮಾಜವು ಕೆಲವಂಶಗಳಲ್ಲಿ ಮೇಲೆಂದೂ ಇನ್ನು ಕೆಲವಂಶಗಳಲ್ಲಿ ಕೀಳೆಂದೂ ಹೇಳಬೇಕಾಗುತ್ತದೆ. ಈ ತರ್ಕಶುದ್ಧತೆಯು ಯೋಗ್ಯತಾನಿರ್ಣಯದಲ್ಲಿ ಮತ್ತು ಭಾರತೀಯ ಸಮಾಜದ ವಿವಿಧ ಮನೋಧರ್ಮಗಳ ವಿವರಣೆಯಲ್ಲಿ ಸಾಕಷ್ಟು ಕಂಡುಬಂದಿಲ್ಲ. ಅವಕ್ಕೆ ಕಣ್ಣೆದುರೇ ಭಾರತೀಯ ಸಮಾಜವಿಂದು ಅಧಃಪತನದ ಹಾದಿ

-೧೨ನೆಯ ಪುಟಕ್ಕೆ

ಜುಲೈ ೪ ರಿಂದ ೧೦ ರ ವರೆಗೆ

ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ

ಮೇಷ

ನಿಮ್ಮ ಮತ್ತು ಹೆಂಡತಿಯ ಆರೋಗ್ಯ ಚನ್ನಾಗಿದ್ದರೂ ನಿಮ್ಮ ಮಕ್ಕಳಲ್ಲೊಬ್ಬರಿಗೆ ಯಾವುದಾದರೊಂದು ಆಘಾತದಿಂದ ಗಂಭೀರ ಸ್ವರೂಪದ ಅಸ್ವಸ್ಥವಾಗಬಹುದು. ಉಳಿದ ಮಕ್ಕಳ ವರ್ತನೆಯಾವದೂ ಅಷ್ಟು ಆನಂದಕರವಿಲ್ಲ. ಉಳಿದ ವಿಚಾರಗಳಲ್ಲಿ ಈ ವಾರ ನಿಮಗೆ ತುಂಬ ಅನುಕೂಲ. ಮನೆತನದ ಗೌರವವನ್ನು ಹೆಚ್ಚಿಸುವ ಒಂದು ಸಂಗತಿ ನಡೆಯುವದು. ಉದ್ಯೋಗದಲ್ಲಿ ಯಥೇಷ್ಟ ಪ್ರತಿಷ್ಠೆ, ಲಾಭ. ಬೆಲೆಬಾಳುವ ವಸ್ತುಗಳ ಸಂಗ್ರಹ. ವಾದ, ಸ್ಪರ್ಧೆಗಳಲ್ಲಿ ನಿಮ್ಮ ಕೈಯೇ ಮೇಲಾದರೂ ಶತ್ರುವಿನ ಒಳಸಂಚುಗಳಿಂದ ನೀವು ವ್ಯಸ್ತರಾಗುವಿರಿ. ಭೆಟ್ಟಿಯಿಂದ ಕಾರ್ಯ ಸಾಧಿಸದು. ಪತ್ರವ್ಯವಹಾರ ನೆಟ್ಟಗೆ. ಪ್ರವಾಸವೂ ಸುಖವಾಗಿ ನೆರವೇರುವದು. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ೧ ನೆ ಚರಣಗಳಿಗೆ ಅನಿಷ್ಟವಿಲ್ಲ. ತಾ. ೫, ೬, ೯, ೧೦ ಅನುಕೂಲ.

ವೃಷಭ

ಪತಿಪತ್ನಿಯರ ಆರೋಗ್ಯವೂ ಅನ್ಯೋನ್ಯವೂ ಚನ್ನಾಗಿದ್ದರೂ ಹೊರಗಿನವರ ಕೂಡ ಕಲಹವಾದೀತು. ಸ್ಥಾವರದಲ್ಲಿ ಒಂದೆಡೆ ಅನುಕೂಲ ಮತ್ತೊಂದೆಡೆ ಪ್ರತಿಕೂಲ ಸಂಗತಿ ಘಟಿಸಬಹುದು. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭ ಚನ್ನಾಗಿರುವದಲ್ಲದೆ ಶತ್ರುವಿನ ವಿರುದ್ಧ ನೀವು ಯಶಸ್ವಿಗಳಾಗುವಿರಿ. ಆದರೂ ಅವನ "ಕಿತಾಪತಿ" ಯೇನೂ ಕಡಿಮೆಯಾಗುವದಿಲ್ಲ. ಬಿಟ್ಟರೆ ಉಪಾಯವಿಲ್ಲ, ಇದ್ದರೆ ತೊಂದರೆಯೆನಿಸುವ ವ್ಯಕ್ತಿಯನ್ನು ಕೂಡಿರಬೇಕಾದೀತು. ಪ್ರವಾಸಕ್ಕೆ ಅನುಕೂಲ ಕಾಲವಿದಲ್ಲ. ಭೆಟ್ಟಿ ಪತ್ರವ್ಯವಹಾರಗಳಿಗೆ ಅಡ್ಡಿಯಿಲ್ಲ. ರೋಹಿಣಿಯ ಕೊನೆಯ ೩ ಮತ್ತು ಮೃಗಶಿರದ ೧ ನೆ ಚರಣಕ್ಕೆ ತೊಂದರೆಗಳು ಕಡಿಮೆ. ತಾ. ೬, ೭, ೮ ಅನುಕೂಲ.

ಮಿಥುನ

ನಿಮ್ಮ ಮತ್ತು ನಿಮ್ಮ ಪತ್ನಿಯ ಆರೋಗ್ಯಕ್ಕೆ ಆಗಾಗ್ಗೆ ಪೀಡೆಗಳು ಬರಬಹುದಲ್ಲದೆ ತಾಯಿಯಿದ್ದರೆ ಅವರಿಗೂ ಭೂತಚೇಷ್ಟೆಯಂಥ ಉಪದ್ರವಗಳು ಗಂಟುಬೀಳುವ ಸಂಭವವುಂಟು. ಉಳಿದ ಪ್ರಾಪಂಚಿಕ ಸುಖ ನೆಟ್ಟಗೆ. ಆದರೆ ಉದ್ಯೋಗದಲ್ಲಿ ಒಮ್ಮೆಲೆ "ಸ್ಟಂಟ್" ಮಾಡಹೋಗಿ ಅದು ಹುಸಿಯಾಗಿ ನೀವೇ ತೊಂದರೆಗೆ ಬೀಳಬಹುದು. ಸಾಲಿಗರ ಕೈಯಲ್ಲಿ ಜುಟ್ಟು ಕೊಟ್ಟಿದ್ದರೆ ಅವರೂ ಕೈತೊಳೆದುಕೊಂಡು ಬೆನ್ನು ಹತ್ತಬಹುದು. ವಾದ ಸ್ಪರ್ಧೆಗಳಲ್ಲಿ ಹಿಂದೇಟು. ಶತ್ರುಗಳಿಗಿಂತ ಮಿತ್ರರ ಕಾಟವೇ ಹೆಚ್ಚಾಗುವದು. ಪ್ರವಾಸ ಹಿತ. ಭೆಟ್ಟಿಯಾಗಲಿ ಪತ್ರವ್ಯವಹಾರವಾಗಲಿ ಫಲಕಾರಿಯಾಗದು. ಆರ್ದ್ರೆಯ ಕೊನೆಯ ೩ ಮತ್ತು ಪುನರ್ವಸುವಿನ ೧ ನೆ ಚರಣಗಳಿಗೆ ವಿಶೇಷ ಕಷ್ಟವಿಲ್ಲ. ತಾ. ೫, ೬, ೯ ಅನುಕೂಲ.

ಕರ್ಕ

ಪ್ರಕೃತಿ ಉತ್ತಮ. ಆದರೆ ಉದ್ಯೋಗದಲ್ಲಿ ತುಂಬ ಪ್ರತಿಷ್ಠೆ ಪಡೆದು ಬಹಳ ಗಳಿಸಿದರೂ ಸಿಕ್ಕಾಪಟ್ಟೆ ವೆಚ್ಚಮಾಡಿದರೆ ಆದೆಲ್ಲಿಗೂ ಬಾರದೆಂದು ಮರೆಯದಿರಿ. ಸಾಲವನು ಕೊಂಬಾಗ ಹಾಲೋಗರುಂಡಂತೆ ಎಂಬ ಸರ್ವಜ್ಞ ವಚನವನ್ನು ನೆನೆದುಕೊಳ್ಳಿರಿ. ವಾದ ಸ್ಪರ್ಧೆಗಳಲ್ಲಿ ಎರಡೂ ಪಕ್ಷಗಳು ಇದ್ದಲ್ಲೇ ಇರುವವು. ಪ್ರವಾಸಾದಿ ಕಾರ್ಯಗಳು ಸುಖಾವಹವಾದರೂ ಒಂದೆರಡು ತಲೆಚಿಟ್ಟೇರಿಸುವ ಪತ್ರಗಳು ಬರಬಹುದು. ಪುಷ್ಯದ ಕೊನೆಯ ೩ ಮತ್ತು ಆಶ್ಲೇಷೆಯ ೧ ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೪, ೭, ೮ ಅನುಕೂಲ.

ಸಿಂಹ

ಹೆಂಡತಿಯ ಆರೋಗ್ಯದ ಕಡೆ ನೀವು ಚನ್ನಾಗಿ ಲಕ್ಷ್ಯ ಕೊಡಬೇಕಲ್ಲದೆ ನಿಮ್ಮೊಳಗೆ ತಪ್ಪು ತಿಳುವಳಿಕೆಯಿಂದ ಮನನೋಯದಂತೆ ನೋಡಿಕೊಳ್ಳಬೇಕೆಂದು ಸೂಚಿಸಬೇಕಾಗಿದೆ. ಮಕ್ಕಳ ಮಾತು-ಕೃತಿಗಳೂ ನಿಮ್ಮ ಮನಸ್ಸಿಗೊಪ್ಪುವದಿಲ್ಲ. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಪ್ರತಿಷ್ಠೆಯ ಬಗ್ಗೆ ಜಾಗರೂಕರಾಗಿರಬೇಕು. ಅಸಭ್ಯ ಅತಿಥಿಗಳು ಪಯ ಮಾಡಿಸಬಹುದು. ವಾದ ಸ್ಪರ್ಧೆಗಳಲ್ಲಿಯೂ ನೀವು ಹಿಂದೆ ಸರಿಯಬೇಕಾಗುವದು. ಪ್ರವಾಸ, ಪತ್ರವ್ಯವಹಾರ ಅನುಕೂಲವಾದರೂ ಭೆಟ್ಟಿಯಿಂದ ಫಲ ದೊರೆಯದು. ಮಘೆಯ ೩ ನೆ ಮತ್ತು ಪೂರ್ವದ ೧ ನೆ ಚರಣಗಳಿಗೆ ಇದ್ದುದ್ದರಲ್ಲಿ ವಾಸಿ. ತಾ. ೪, ೫, ೯, ೧೦ ಅನುಕೂಲ.

ಕನ್ಯಾ

ಹೆಂಡತಿಗೆ ಸ್ವಲ್ಪ ಪಿತ್ತವಿಕಾರವಾಗಬಹುದು. ಉಳಿದ ವಿಷಯಗಳಲ್ಲಿ ನೀವು ಹೊಟ್ಟೆಕಿಚ್ಚು ಬಿಟ್ಟರೆ ಸುಖಿಗಳಾಗಿರುವಿರಿ. ಏಕೆಂದರೆ ನಿಮಗೆ ಉದ್ಯೋಗದಲ್ಲಿ ಲಾಭ, ಪ್ರತಿಷ್ಠೆಗಳು ಸಿಕ್ಕಿದರೂ ಮತ್ತೊಬ್ಬರ ಏಳಿಗೆ ನೋಡಿ ಅಸೂಯೆ ಪಡುವ ಬುದ್ಧಿ ಬರಬಹುದು. ಹಣ ವೆಚ್ಚ ಮಾಡಿಯಾದರೂ ಹಿಡಿದ ಕೆಲಸ ಸಾಧಿಸುವಿರಿ. ವಾದ ಸ್ಪರ್ಧೆಗಳಲ್ಲಿ ಸ್ಥಿತಿಗತಿ ಇದ್ದಂತೆಯೆ ಇರುವದು. ಪ್ರವಾಸಾದಿ ಕಾರ್ಯಗಳು ಹಿತವಾಗಿರುವವು. ಹಸ್ತದ ಕೊನೆಯ ೩ ಮತ್ತು ಚಿತ್ರೆಯ ೧ ನೆ ಚರಣಗಳಿಗೆ ಅಷ್ಟು ಚಿಂತೆಯಿಲ್ಲ. ತಾ. ೪, ೫, ೬, ೭ ಅನುಕೂಲ.

ತುಲಾ

ಹೆಂಡತಿಗೆ ಅಸ್ವಸ್ಥ. ಉದ್ಯೋಗದಲ್ಲಿ ಪ್ರತಿಷ್ಠೆ ಕಡಿಮೆ. ಶತ್ರುವಿನ ತೊಂದರೆ ಅಸಾಧ್ಯ ಇರುವಾಗ ನಿಮಗೆ ಅವಶ್ಯವಿಲ್ಲದ ಕೆಲಸಕ್ಕೆ ಕೈಹಾಕಿ ಸುಮ್ಮನೆ ಫಜೀತಿಗೇಕೆ ಬೀಳುವಿರಿ? ಸನ್ಮಿತ್ರರ ಸಹವಾಸದಿಂದ, ಹೇರಳವಾಗಿ ಬರುವ ಲಾಭದಿಂದ ಸಂತೋಷಪಡಲು ಯತ್ನಿಸಿರಿ. ಶತ್ರುವಿಗೆ ಹಾನಿಯಾದರೂ ನಿಮಗೆ ಲಾಭವಿಲ್ಲ. ಪ್ರವಾಸಾದಿ ಕಾರ್ಯಗಳಿಗೆ ಅಷ್ಟು ಯೋಗ್ಯ ಕಾಲವಿದಲ್ಲ. ಸ್ವಾತಿಯ ಕೊನೆಯ ೩ ಮತ್ತು ವಿಶಾಖೆಯ ೧ ನೆ ಚರಣಗಳು ಅಷ್ಟು ಕಷ್ಟಪಡಬೇಕಾಗುವದಿಲ್ಲ. ತಾ. ೫, ೬, ೭, ೮ ಅನುಕೂಲ.

ವೃಶ್ಚಿಕ

ನಿಮ್ಮ ಪ್ರಕೃತಿ ಅಷ್ಟು ಚನ್ನಾಗಿಲ್ಲವಾದರೂ ಹೆಂಡತಿ ಮಕ್ಕಳದು ಸ್ವಸ್ಥ. ಮಕ್ಕಳುಮರಿಗಳ ಕೆಲ ಕೃತಿಗಳಿಂದ ನೀವು ಸಂತಪ್ತರಾಗುವಿರಿ. ಉದ್ಯೋಗದಲ್ಲಿ ಲಾಭ ಒಳಿತಾಗಿದ್ದರೂ ಆಗದವರು ನಿಮ್ಮ ಪ್ರತಿಷ್ಠೆ ಕೆಡಿಸಲು ಯತ್ನಿಸಬಹುದು. ಇದ್ದ ವ್ಯವಸಾಯ ಬಿಟ್ಟು ಇನ್ನೊಂದಕ್ಕೆ ಕೈಕೊಡುವ ಹಂಬಲಕ್ಕೆ ಬೀಳುವಿರಿ. ಶತ್ರು ಪ್ರತ್ಯಕ್ಷವಾಗಿ ಸೋತರೂ ಒಳಗಿಂದೊಳಗೆ ಸೇಡು ತೀರಿಸಿಕೊಳ್ಳುವ ಹವಣಿಕೆಯಲ್ಲಿದ್ದೇ ಇರುವನೆಂದು ಮರೆಯಬೇಡಿರಿ. ಭೆಟ್ಟಿ ಫಲವಿಲ್ಲ. ಪ್ರವಾಸ ಸುಖಕರ, ಪತ್ರವ್ಯವಹಾರ ಸಫಲ. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠದ ೧ ನೇ ಚರಣಗಳಿಗೆ ತೊಂದರೆ ಕಡಿಮೆ. ತಾ. ೭, ೮, ೯, ೧೦ ಅನುಕೂಲ.

ಧನು

ಮಕ್ಕಳಿಗೂ ತಂದೆತಾಯಿಗಳಿಗೂ ಸ್ವಲ್ಪ ಜಡ್ಡಾಗಬಹುದು. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಲೆಕ್ಕ ಮೀರಿ ದೊರೆತರೂ ನೀವು ಖರ್ಚಿನ ಕೈ ಬಿಗಿಹಿಡಿಯದಿದ್ದರೆ ಹೇಗೆ ನಿಮ್ಮ ಸ್ಥಿತಿ ಸುಧಾರಿಸಬೇಕು? ಕೈಯಲ್ಲಿ ಸತ್ಕೃತ್ಯ ಮಾಡುವಾಗಲೂ ಮನಸ್ಸು ದುರ್ಬುದ್ಧಿಯಲ್ಲೇ ಇದ್ದರೆ ಏನು ಪುಣ್ಯ ಅಕಸ್ಮಾತ್ ಲಾಭದ ಯೋಗವಿದೆ. ವಾದ ಸ್ಪರ್ಧೆಗಳಲ್ಲಿ ಅನುಕೂಲ. ಪತ್ರವ್ಯವಹಾರದಿಂದ ಕೆಲಸವಾಗದು. ಭೆಟ್ಟಿಯಾಗಬೇಕು. ಪ್ರವಾಸ ಹಿತಕಾರಿ. ಮೂಲದ ಕೊನೆಯ ೨ ಮತ್ತು ಪೂರ್ವಾಷಾಢದ ೧ ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೪, ೫, ೯, ೧೦ ಅನುಕೂಲ.

ಮಕರ

ನಿಮ್ಮ ಪ್ರಕೃತಿಯೂ ನೆಟ್ಟಗಿಲ್ಲ. ಮೇಲಾಗಿ ಮನೆಯಲ್ಲಿ ಒಬ್ಬರಿಗೊಬ್ಬರು ಕಾದಾಡುವಾಗ ನಿಮಗೆ ಮಾತ್ರ ಬಾಯಿಗೆ ಚಂಡು ತುರುಕಿ ಬೆನ್ನಿಗೆ ಲತ್ತೆ ಕೊಟ್ಟಂತಾಗುವದು. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭ ಚನ್ನಾಗಿದ್ದರೂ ವೆಚ್ಚವೂ ಬಹಳ. ವಾದ ಸ್ಪರ್ಧೆಗಳಲ್ಲಿ ಯಥಾಸ್ಥಿತಿ. ಪ್ರವಾಸ, ಪತ್ರವ್ಯವಹಾರಗಳು ಫಲಕಾರಿಯಾಗುವ ಸಂಭವ ಕಡಿಮೆ. ಭೆಟ್ಟಿ ಉತ್ತಮ. ಶ್ರವಣದ ಕೊನೆಯ ೩ ಮತ್ತು ಧನಿಷ್ಠೆಯ ೧ ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೪, ೫, ೬, ೭ ಅನುಕೂಲ.

ಕುಂಭ

ನಿಮ್ಮ ಪ್ರಕೃತಿ ಚನ್ನಾಗಿಲ್ಲದ್ದರಿಂದಲೊ ಏನೋ ಹೆಂಡತಿಯ ಮೇಲೆ ಸಿಟ್ಟು ಸಿಡುಕು ಹೆಚ್ಚುವದು. ಮನೆಯಲ್ಲಿ ಅತಿಥಿಗಳೂ ನೌಕರರೂ ಹೆಚ್ಚಿಕೊಂಡು ಬಿಡುವರು. ಉದ್ಯೋಗದಲ್ಲಿ ಪ್ರತಿಷ್ಠೆ ಚನ್ನಾಗಿದ್ದರೂ ಲಾಭ ಕಡಿಮೆ. ದಾನಧರ್ಮಗಳನ್ನು ಮಾಡುವಿರಿ. ಆಸ್ತಿಯಲ್ಲಿ ಹೊಸ ಶತ್ರುವೊಬ್ಬನು ಕಾಟ ಕೊಡಲಾರಂಭಿಸುವನು. ವಾದಸ್ಪರ್ಧೆಗಳಲ್ಲಿ ಹಿಂದಿದ್ದಂತೆ. ಪ್ರವಾಸ ತ್ರಾಸದಾಯಕ. ಆದರೆ ಭೆಟ್ಟಿ ಪತ್ರವ್ಯವಹಾರಗಳಿಗೆ ಅಡ್ಡಿಯಿಲ್ಲ. ಶತತಾರೆಯ ಕೊನೆಯ ೩ ಮತ್ತು ಪೂರ್ವಾಭಾದ್ರದ ೧ ನೆ ಚರಣಗಳಿಗೆ ಅಷ್ಟು ತೊಂದರೆಯಿಲ್ಲ. ತಾ. ೭, ೮, ೯ ಅನುಕೂಲ.

ಮೀನ

ಎಲ್ಲರ ಪ್ರಕೃತಿ ಚನ್ನಾಗಿದ್ದರೂ ಒಬ್ಬೊಬ್ಬರು ಒಂದೊಂದು ಕಡೆ ಮುಖ ತಿರುವಿ ಸುಖವನ್ನು ಹಾಳುಮಾಡಿಕೊಳ್ಳುವಿರಿ. ಉದ್ಯೋಗದಲ್ಲಿ ಪ್ರತಿಷ್ಠೆ ಚನ್ನಾಗಿದ್ದರೂ ಲಾಭ ಅಷ್ಟಕ್ಕಷ್ಟೆ. ವೆಚ್ಚ ಹೆಚ್ಚಾದರೂ ಉದ್ದೇಶ ಸಿದ್ಧಿಸುವದೊಂದು ಸಮಾಧಾನ. ಮಿತ್ರರಲ್ಲಿ ವಿರೋಧ. ವಾದ ಸ್ಪರ್ಧೆಗಳಲ್ಲಿ ಯಶ. ಪ್ರವಾಸಾದಿ ಕಾರ್ಯಗಳಿಗೆ ಅನುಕೂಲ. ಉತ್ತರಾಭಾದ್ರದ ಕೊನೆಯ ೩ ಮತ್ತು ರೇವತಿಯ ೧ ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೭, ೮, ೯, ೧೦ ಅನುಕೂಲ.

ತೀರ ಸುಲಭ!

ಸರ್ಕಸಿನಲ್ಲಿ ಜನಸಂದಣಿ ಕಿಕ್ಕಿರಿದಿರುತಿತ್ತು. ಹೆಂಗಸೊಬ್ಬಳು ಅತ್ಯಂತ ಕ್ರೂರ ಮೃಗಗಳನ್ನು ಕೂಡ ತಾನು ಹೇಳಿದಂತೆ ಕುಣಿಸುವದು ಆದರ ವೈಶಿಷ್ಟ್ಯವಾಗಿತ್ತು. ಅವಳು ರಂಗದ ಮೇಲೆ ನಿಂತು ತುಟಿಗಳ ನಡುವೆ ಒಂದು ಸಕ್ಕರೆಯ ಉಂಡೆಯನ್ನು ಆದುಮಿ ಹಿಡಿಯುತಿದ್ದಳು. ಅತ್ಯಂತ ಭಯಾನಕವಾದ ಸಿಂಹವೂ ತೀರ ನಮ್ರವಾಗಿ ಬಂದು ಅವಳಿಗೆ ತಲೆವಾಗಿ ಆ ಮೇಲೆ ಆ ಉಂಡೆಯನ್ನು ಅವಳ ತುಟಿಗಳಿಂದ ತೆಗೆದುಕೊಂಡು ಹೋಗುತಿತ್ತು. ಜನರೆಲ್ಲ ದಂಗುಬಡಿದು ನೋಡುತಿದ್ದರು.

ಆದರೆ ಒಬ್ಬನು ಮಾತ್ರ ಚಪ್ಪಾಳೆ ಬಾರಿಸಲಿಲ್ಲ. ಅವನು ಕೂಗಿದನು: "ಅದೇನು ಮಹಾ? ಯಾರು ಬೇಕಾದರೂ ಮಾಡಬಹುದು!"

"ನೀ ಮಾಡಬಲ್ಲೆಯಾ?" ರಿಂಗ್‌ಮಾಸ್ತರನು ಆಹ್ವಾನ ಕೊಟ್ಟನು.

"ಓಹೋ" ಎಂದಿತು ಆ ದನಿ. "ಆ ಸಿಂಹ ಮಾಡಿದಷ್ಟೇ ಚನ್ನಾಗಿ ನಾನು ಆ ಕಸರತ್ತನ್ನು ಖಂಡಿತ ಮಾಡಬಲ್ಲೆ!"

ಕೊಂಕು ನುಡಿ

ಚುಂಬನದಿಂದ ರೋಗಾಣುಗಳು ಹಬ್ಬುವೆ ಇರಬಹುದು; ಆದರೆ ಅದು ಸಂಯಮಶಕ್ತಿಯನ್ನಂತೂ ಕುಂದಿಸುತ್ತದೆ.

—ಲುಯಿ ಎರಿಕ್‌ಸನ್ (ರೇಡಿಯೋ ನಟ)

❊

ನಿಮ್ಮ ಪಂಥ ನ್ಯಾಯವಾಗಿದ್ದರೆ ಗಂಡಸಿನಂತೆ ಛಲ ಹಿಡಿಯಿರಿ; ನಿಮ್ಮದು ತಪ್ಪಾಗಿದ್ದರೆ ಹೆಂಗಸಿನಂತೆ ಛಲತೊಡಿರಿ.—ಪಿ. ಜೆ. ಟೌಲಟ್

❊

ಸಾತ್ವಿಕನಾಗಿರುವದು ಶ್ರೇಷ್ಠ; ಸಾತ್ವಿಕತೆಯನ್ನುಪದೇಶಿಸುವದು ಮತ್ತಷ್ಟು ಶ್ರೇಷ್ಠ- ತೊಂದರೆಯೂ ಕಡಿಮೆ.

—ಮಾರ್ಕ್ ಟ್ವೇನ್

❊

ತನ್ನ ತಪ್ಪುಗಳಿಗೆ ಮನುಷ್ಯ ಅನುಭವವೆಂದು ಹೆಸರಿಡುತ್ತಾನೆ.

—ಅಸ್ಕರ್ ವೈಲ್ಡ

❊

ಕುರಿಗಳ ಸಮಾಜಕ್ಕೆ ಕಾಲಾಂತರದಲ್ಲಿ ತೋಳಗಳ ಆಳಿಕೆಯೇ ದೊರಕುವದು ಖಂಡಿತ. —ಬರ್ಟ್ರಂಡ್ ಜವನೆಲ್

"ಜಲಜನಕ ಮಿಶ್ರಿತ ಎಣ್ಣೆ" ಯ ಮೊದಲ ಹೆಜ್ಜೆ

ಗುಡ್ಡದಷ್ಟು ಜನಾಭಿಪ್ರಾಯದ ಒತ್ತಾಯದ ನಂತರ ಭಾರತ ಸರಕಾರ ಇದೀಗ ಚಲಿಸತೊಡಗಿದೆ. ಹಲವು ದುರಂತ ಮಾಸಗಳ ನಂತರ ಆದೀಗ "ವನಸ್ಪತಿ" ತುಪ್ಪದ ವಿರುದ್ಧ ಅರೆಮನಸಿನ ಒಂದು ಕ್ರಮವನ್ನು ತೆಗೆದುಕೊಂಡಿದೆ. ವನಸ್ಪತಿ ಎಣ್ಣೆಯನ್ನು ಉತ್ಪಾದನ ಮಾಡುವ ಯಾವ ಕಾರಖಾನೆಗಳೂ ತಮ್ಮ ಉತ್ಪತ್ತಿಯ ಡಬ್ಬಿಗಳ ಮೇಲೆ "ವನಸ್ಪತಿ" ಅಥವಾ "ವೆಜಿಟೆಬಲ್ ಪ್ರೋಡಕ್ಟ್" ಎಂಬ ಶಬ್ದಗಳನ್ನು ೧೯೪೯ ಆಗಸ್ಟ ೧ ರ ನಂತರ ಉಪಯೋಗಿಸತಕ್ಕದ್ದಲ್ಲವೆಂದು ವಿಧಿಸಲಾಗಿದೆ. ಆ ಸರಕುಗಳನ್ನು ಉತ್ಪಾದಕರು ಸಂದರ್ಭಾನುಸಾರವಾಗಿ "ಜಲಜನಕ ಮಿಶ್ರಿತ ಶೇಂಗಾ ಎಣ್ಣೆ" ಅಥವಾ "ಜಲಜನಕ ಮಿಶ್ರಿತ ಶೇಂಗಾ ಮತ್ತು ಕೊಬ್ಬರಿ ಎಣ್ಣೆ" ಎಂದು ಕರೆಯಬೇಕೆಂದು ಆಜ್ಞಾಪಿಸಲಾಗಿದೆ.

ಇಷ್ಟನ್ನು ಎಷ್ಟೋ ತಿಂಗಳುಗಳ ಹಿಂದೆ ಮಾಡಬಹುದಾಗಿದ್ದರೂ ಈಗಾದರೂ ಮಾಡಿದ್ದು ಒಳಿತಾಯಿತು. ಆದರೆ ತುಪ್ಪದಲ್ಲಿ ಈ ಸರಕನ್ನು ಬೆರಸಿ ಮಾರದಂತೆ ಮಾಡಿ ಗ್ರಾಹಕರ ಹಿತವನ್ನು ರಕ್ಷಿಸಲು ಮಾತ್ರ ಇದರಿಂದಲೂ ಸಹಾಯವಾಗದು.

(ಹರಿಜನ) — ಜೆ. ಸಿ. ಕು.

[illegible]

ಅಗ್ರಲೇಖ

ಹೇಯ ವರ್ತನೆ

ಕಲಕತ್ತೆಯಲ್ಲಿ ನಡೆದ ಶಾಸನಸಭೆಯ ಒಂದು ಉಪಚುನಾವಣೆಯಲ್ಲಿ ಶ್ರೀ ಶರಚ್ಚಂದ್ರ ಬೋಸರು ಕಾಂಗ್ರೆಸ್ ಹುರಿಯಾಳನ್ನು ಸೋಲಿಸಿದ್ದಾರೆ. ಇದು ಕಾಂಗ್ರೆಸ್ ಮುಂದಾಳುಗಳನ್ನು ಬೆಚ್ಚಿಸಿದೆ. ಕೆಲವರು ಅದನ್ನು ಶರತ್ ಬಾಬುಗಳ ವೈಯಕ್ತಿಕ ವಿಜಯವೆಂದೂ ಮತ್ತೆ ಕೆಲವರು ಅದು "ಕಾಂಗ್ರೆಸ್ಸಿನೊಳಗೂ ಅದರ ಆಡಳಿತೆಯಲ್ಲಿಯೂ ಸೇರಿಕೊಂಡಿರುವ ಸ್ವಜನಪಕ್ಷಪಾತ, ವಶೀಲಿ, ಲಂಚಗುಳಿತನವೇ ಮೊದಲಾದವುಗಳ ವಿರುದ್ಧ ಜನರ ಘಟನಾತ್ಮಕ ಪ್ರತಿಭಟನೆಯ ವಿಜಯ"ವೆಂದೂ ವರ್ಣಿಸಿದರೆ, ಇನ್ನೂ ಕೆಲವರು, ಕಾಂಗ್ರೆಸ್ಸಿನೊಳಗಿನ ಗುಂಪುಗಳು ತೀರ ಕೆಳಮಟ್ಟಕ್ಕಿಳಿದು ಹೋಗಿ ಸದ್ಯದ ಕಾಂಗ್ರೆಸ್ ಮಂತ್ರಿಮಂಡಲವನ್ನು ಉರುಳಿಸಬಯಸಿದ ಕೆಲ ಪ್ರಮುಖ ಕಾಂಗ್ರೆಸ್ಸಿಗರೇ ಕಾಂಗ್ರೆಸ್ ಹುರಿಯಾಳಿನ ವಿರುದ್ಧ ಕೆಲಸ ನಡೆಸಿದುದೇ ಅದಕ್ಕೆ ಕಾರಣವೆಂದು ವಿವರಿಸಿದ್ದಾರೆ.

ಈ ಆರೋಪಗಳ ಮೇಲೆ ತೀರ್ಮಾನ ಮಾಡಿಕೊಳ್ಳಲು ಬೇಕಾದ ಸಲಕರಣೆಗಳು ನನ್ನಲ್ಲಿಲ್ಲ; ಇದು ಹೀಗೆ ಅದು ಹಾಗೆ ಎಂದು ವಿವರಣೆಗಿಳಿಯುವ ಅಪೇಕ್ಷೆಯೂ ನನಗಿಲ್ಲ. ಆದರೆ ನನ್ನನ್ನು ಚಿಂತಾಕ್ರಾಂತನನ್ನಾಗಿ ಮಾಡಿರುವ ಸಂಗತಿಯೆಂದರೆ ಚುನಾವಣೆಯ ಪ್ರಚಾರದಲ್ಲಿ ಭಾಗವಹಿಸಿದವರು ಎರಡು ಗಂಭೀರವಾದ ವಿಷಯಗಳಲ್ಲಿ ನಡೆಸಿದ ಹೇಯವರ್ತನೆ. ರಾಷ್ಟ್ರಧ್ವಜವನ್ನು ಸುಟ್ಟಿದ್ದೊಂದು, ಶ್ರೀಮತಿ ಸುಚೇತಾ ಕೃಪಲಾನಿಯವರ ಮೇಲೆ ನಿರ್ಲಜ್ಜೆಯಿಂದ ಕೈಮಾಡಿದ್ದು ಇನ್ನೊಂದು. ಅವರನ್ನು ಬೈದು ಭಂಗಿಸಿ, ಹೊಡೆದು, ಹೇಯವಾದ ರೀತಿಯಲ್ಲಿ ಬೇಕೆಂದೇ ಅವಮಾನಗೊಳಿಸಲಾಯಿತೆಂದು ಕೇಳುತ್ತೇನೆ.

ಡಾಕ್ಟರ್ ಬಿ. ಸಿ. ರಾಯರು ಪ್ರಾಂತದ ನೇತೃತ್ವವನ್ನು ವಹಿಸಬೇಕೋ, ಡಾ. ಪಿ. ಸಿ. ಘೋಷರೋ ಅಥವಾ ಶ್ರೀ ಶರಚ್ಚಂದ್ರ ಬೋಸರೋ ಎಂಬ ಪ್ರಶ್ನೆ ಗೌಣವಾದುದು. ನನಗೆ ಅರ್ಥವಾಗುವ ಮಟ್ಟಿಗೆ ಅವರೊಳಗಿರುವ ಸ್ಪರ್ಧೆ ಕೇವಲ ವ್ಯಕ್ತಿಗತವಾದುದು. ಹೆಸರಿಸಬಹುದಾದ ಯಾವ ತಾತ್ವಿಕ ಮತಭೇದಗಳೂ ಅವರಲ್ಲಿದ್ದಂತಿಲ್ಲ. ಆದರೆ ನಮ್ಮ ದೇಶದ ಜನರಿಗೆ ಕೊಡಬೇಕಾದ ಸಾಂಸ್ಕೃತಿಕ ಮತ್ತು ನೈತಿಕ ನಿರ್ದೇಶವೂ ಶಿಕ್ಷಣವೂ ಈ ಸ್ಪರ್ಧೆಗಿಂತಲೂ ಹೆಚ್ಚು ಮಹತ್ವದವು. ಭಾರತದ ಭಾವೀ ನಾಗರಿಕರು (ಬಂಗಾಲದಲ್ಲಿ ಘಟಿಸಿದ್ದು ಬೇರೆಕಡೆಯೂ ಘಟಿಸಬಹುದು) ರಾಜಕಾರಣದಲ್ಲಿ ಕೆಲವರೊಂದು ಪಕ್ಷದಲ್ಲಿ, ಬೇರೆ ಕೆಲವರು ಇನ್ನೊಂದು ಪಕ್ಷದಲ್ಲಿ ಇರುವರೆಂಬ ಒಂದೇ ಕಾರಣಕ್ಕಾಗಿ ರಾಷ್ಟ್ರಧ್ವಜವನ್ನು ಅವಮಾನಿಸುವ ಮತ್ತು ರಾಷ್ಟ್ರಪುತ್ರಿಯರನ್ನು ಬೈದು ಭಂಗಿಸುವ ತರಬೇತಿಯನ್ನು ಪಡೆಯುವರೆ? ಇದಾವ ಸಂಸ್ಕೃತಿಯೆಂದು ಕೇಳಬಹುದೆ? ಅದು ಭಾರತೀಯವೊ, ಬಂಗಾಲಿಯೊ, ಇಟಲಿಯದೋ, ಜರ್ಮನಿಯದೊ, ರಶಿಯದ್ದೊ, ಆಧುನಿಕವೊ ಅಥವಾ ಪ್ರಾಚೀನವೊ? ಅದೆಲ್ಲಿಯದೇ ಇರಲಿ, ಈ ಸಂಸ್ಕೃತಿ ನೀತಿಬಾಹಿರವೂ ಪೌರುಷಹೀನವೂ ಅಲ್ಲವೆ? ಈ ಬಗೆಯ ಚುನಾವಣೆಯ ದುರಾಚಾರಕ್ಕೆ ಹೊಣೆಗಾರರಾದವರು ಯಾವ ಪಕ್ಷದವರಿದ್ದರೂ ಅವರು ಸರ್ವಥಾ ಖಂಡನೀಯರೇ ಸರಿ. ಬಂಗಾಲಿಗಳು, ಏಕೆ, ಯಾವ ಜನರೂ—ನಯನೀತಿಗಳ ನಡೆವಳಿಯನ್ನು ಅಲ್ಲಗಳೆಯುವಷ್ಟು ವಿಕಾರವಶರಾಗುವ ಮೂಲಕ ಸರಿಯಾದ ಆಡಳಿತೆಯನ್ನು ಸಂಪಾದಿಸಲು ಸಮರ್ಥರಾಗಲಾರರು. ಯಾವ ಪಕ್ಷದ ಹೆಸರಲ್ಲಿ ಈ ರಾಕ್ಷಸೀ ಕೃತ್ಯಗಳು ನಡೆದವೊ ಅದು ರಾಷ್ಟ್ರಧ್ವಜಕ್ಕಾದ ಉದ್ದೇಶಪೂರ್ವಕ ಅಪಮಾನಕ್ಕಾಗಿ ರಾಷ್ಟ್ರಕ್ಕೂ ಶ್ರೀಮತಿ ಸುಚೇತಾ ಕೃಪಲಾನಿಯವರ ಮೇಲೆ ನಾಚಿಕೆಯಿಲ್ಲದೆ ಕೈಮಾಡಿದ್ದಕ್ಕಾಗಿ ಅವರಿಗೂ ಕ್ಷಮಾಯಾಚನೆ ಮಾಡಿಕೊಳ್ಳಬೇಕಾದ್ದು ಯುಕ್ತ. ಈ ದುರ್ವರ್ತನೆಯ ಘೋರತನವನ್ನು ನಾವು ಮನಗಾಣೋಣ. ತನ್ನ ಧ್ವಜವನ್ನೆ ಮಣ್ಣುಮುಕ್ಕಿಸುವ ಮತ್ತು ತನ್ನ ಪುತ್ರಿಯರನ್ನೆ ಅವಮಾನಿಸುವ ಜನಕ್ಕೆ ಒಳ್ಳೆಯ ಸರಕಾರವನ್ನಾಗಲಿ ಸುಖವನ್ನಾಗಲಿ ಪಡೆಯುವ ಅರ್ಹತೆಯೇ ಇಲ್ಲ.

ಹೊಸದಿಲ್ಲಿ — ಕಿ. ಘ. ಮಶ್ರುವಾಲಾ

೨೪—೬-೪೯

ಅತಿಪ್ರಸರಣ ಮತ್ತು ಅತಿಮೂಲ್ಯಗಳ ವಿರುದ್ಧ ಹೋರಾಟ

ಅತಿಪ್ರಸರಣ ಅತಿಮೂಲ್ಯಗಳಿಂದಾದ ವಿಷಮವೃತ್ತಗಳ ಬಗ್ಗೆ ಹಿಂದುಸ್ತಾನ ಪಾಕಿಸ್ತಾನದ ಸರಕಾರಗಳಷ್ಟೇ ಅಲ್ಲ, ಜಗತ್ತಿನ ಎಲ್ಲ ಸರಕಾರಗಳೂ ರಾಜಕೀಯ ಪಕ್ಷಗಳೂ ತಲೆಕೆರೆದುಕೊಳ್ಳಹತ್ತಿವೆ. ಕಳೆದ ಅಗಸ್ಟಿನಲ್ಲಿ ಭಾರತ ಸರಕಾರವು ಅರ್ಥಶಾಸ್ತ್ರಜ್ಞರ, ತಜ್ಞರ ಮತ್ತು ಉದ್ಯಮಿಗಳ ಪರಿಷತ್ತೊಂದನ್ನು ಕರೆದು ಸಪ್ಟಂಬರ್ ಅಕ್ಟೋಬರುಗಳಲ್ಲಿ ಪರಿಷತ್ತಿನ ಪುರಸ್ಕಾರಗಳನ್ನು ಪರೀಕ್ಷೆಗೊಳಪಡಿಸಿತು. ಆದರೆ ಸರಿಯಾಗಿ ಪರೀಕ್ಷೆಯಾದಾಗ ಅವು ನ್ಯೂನವೆಂದು ತಿಳಿದುಬಂದಿತು. ಕೇಂದ್ರ ಮತ್ತು ಪ್ರಾಂತಿಕ ಮುಂಗಡ ಪತ್ರಗಳ ಮಂಡನೆಗೆ ಕೂಡಿದ ಶಾಸನ ಸಭೆಗಳಲ್ಲಿ ಈ ವಿಷಯ ಮುಖ್ಯವಾಗಿ ಚರ್ಚಿಸಲ್ಪಟ್ಟಿತು. ಆದರೆ ಇನ್ನೂ ಮೊದಲ ಮಹಾಯುದ್ಧ ಮುಗಿದ ಕೂಡಲೆ ಬ್ರಿಟಿಶ್ ಸರಕಾರ ಯಶಸ್ವಿಯಾಗಿ ಬಳಸಿದ ಮದ್ದಿನಂಥ ಮದ್ದನ್ನು ಹುಡುಕಿ ತೆಗೆಯಲಾಗಲಿಲ್ಲ. ಆ ಮದ್ದೆಂದರೆ, ಯುದ್ಧ ನಿರ್ಮಿಸಿದ ಒಂದು ರೂಪಾಯಿಯ ನೋಟುಗಳನ್ನು ಹಿಂತೆಗೆದುಕೊಂಡದ್ದು. ಪಾಶ್ಚಾತ್ಯ ಅರ್ಥನೀತಿ ಔದ್ಯಮಿಕವಿದ್ದುದರಿಂದ ಅಂಥ ಕ್ರಮಗಳನ್ನು ತೆಗೆದುಕೊಂಡದ್ದರಿಂದ ಯುರೋಪು ಅಮೇರಿಕಗಳಲ್ಲಿ ಬಹಳ ನಿರುದ್ಯೋಗಕ್ಕೆ ಕಾರಣವಾದುದೇನೋ ನಿಜವೇ, ಆಗಲೂ (ಈಗಲೂ) ಕೃಷಿಪ್ರಧಾನವಾದ ನಮ್ಮ ಅರ್ಥನೀತಿಗೆ ಅವುಗಳಿಂದ ಯಾವ ಹಾನಿಯೂ ತಟ್ಟಲಿಲ್ಲ. ಅದುದರಿಂದ ಅಂಥ ಸುಧಾರಣೆಯನ್ನು ಈಗ ನಮ್ಮ ದೇಶದಲ್ಲಿ ಮಾಡಿದರೆ ಅದು ಅಷ್ಟೇ ಆಶ್ಚರ್ಯಕರವಾದ ಪರಿಣಾಮವನ್ನುಂಟು ಮಾಡುವುದಲ್ಲದೆ, ಇಂದಿನ ಮತ್ತು ಮುಂದಿನ ಅವಶ್ಯಕತೆಯನ್ನು ಪೂರಯಿಸಲು ಬೇಕಾಗಿರುವ ಆಹಾರವನ್ನು ಹೆಚ್ಚಾಗಿ ಬೆಳೆಯಲು ದುರದೃಷ್ಟವಶದಿಂದ ವಿಕ್ಷಿಪ್ತ ಮಾರ್ಗಹಿಡಿದ ಕೃಷಿಕರ್ಮವನ್ನು ಹಳ್ಳಿಗಳಲ್ಲಿ ಪುನಃ ಪ್ರತಿಷ್ಠಾಪಿಸಿದಂತಾಗುವುದು. ಹೊಸ ಬೆಳ್ಳಿಯ ರೂಪಾಯಿ ಚಲಾವಣೆಗೆ ಬಂದೊಡನೆಯೇ ಆ ಸುಧಾರಣೆಯನ್ನು ಮಾಡಬಹುದು ಮತ್ತು ಅದೊಂದೋ ನೇರವಾದ, ತರ್ಕಶುದ್ಧವಾದ ಮತ್ತು ಅತ್ಯಂತ ಯಶಸ್ವಿಯಾಗಿ ಬಳಸಬಹುದಾದ ಮದ್ದೆಂಬುದನ್ನು ಈಗ ಭಾರತ ಸರಕಾರ ಅರಿತುಕೊಳ್ಳಬೇಕಾಗಿರುವುದರಿಂದ ಅದನ್ನು ಬಳಸುವುದರಲ್ಲಿ ಇನ್ನು ಮುಂದೆ ಹಿಂದು ಮುಂದೆ ನೋಡುವ ಅಥವಾ ವಿಲಂಬವೃತ್ತಿಯನ್ನು ವಹಿಸಬಾರದು. ಭಾರತ ಸರಕಾರ ಮಾಡಬೇಕಾದ ಕೆಲಸವಿಷ್ಟೆ: (ಸದ್ಯ: ೨ ರೂಪಾಯಿ ನೋಟನ್ನು ಲೆಕ್ಕಕ್ಕೆ ಹಿಡಿಯದೆ) ಬೆಳ್ಳಿಯ ಮತ್ತು ಕಾಗದದ ರೂಪಾಯಿಗಳ ಪರಸ್ಪರ ಮೂಲ್ಯಪ್ರಮಾಣವನ್ನು ಮೊದಲ ಮಹಾಯುದ್ಧಾಂತ್ಯದಲ್ಲಿದ್ದಷ್ಟಕ್ಕೆ ಹತ್ತಿರ ಹತ್ತಿರವಾಗುವಂತೆ ಸರಿಪಡಿಸಿಬಿಡುವುದು.

ಹೀಗೆ ಮಾಡಿದರೆ ಭೂಕಂದಾಯದಲ್ಲಿ ಕೊರತೆಯುಂಟಾದೀತೆಂದು ಸರಕಾರ ಎಣಿಸಲು ಕಾರಣವಿಲ್ಲ. ಏಕೆಂದರೆ, ಹಾಗೆ ಆಗುವ ಸಂಭವವಿದ್ದದ್ದೇ ಆದರೆ ಅದಕ್ಕೆ ಬಹಳ ಮೊದಲೇ ಮಿಕ್ಕ ಆದಾಯ ಮತ್ತು ಮಿತವ್ಯಯಾದಿಗಳಿಂದ ಸರಕಾರ ೩ ಅಥವಾ ೬ ತಿಂಗಳುಗಳಲ್ಲಿ ಆ ಕೊರತೆಯನ್ನು ನೀಗಿಸಿಕೊಳ್ಳಬಹುದು. ಅತ್ಯಸಂತುಷ್ಟಿಯಿಂದ ಪರಿಷತ್ತಿನ ಅಪ್ರಯೋಜಕವಾದ ಸೂಚನೆಗಳಿಗೆ ಜೋತುಬಿದ್ದಿರುವುದು ಅಥವಾ ನಮ್ಮ ದೇಶಕ್ಕೆ ಹೊಂದದ ಪಾಶ್ಚಾತ್ಯ ದೇಶಗಳ ನೇತೃತ್ವದಲ್ಲಿ ನಿಷ್ಠೆಯನ್ನು ಅಚಲವಾಗಿಟ್ಟು ಕರುಣಾಜನಕ ಸ್ಥಿತಿಯಲ್ಲಿ ಕುಳಿತುಕೊಳ್ಳುವುದಕ್ಕಿಂತ, ಭಯಂಕರವಾಗಿ ಎಲ್ಲೆಡೆಯಲ್ಲೂ ಹಬ್ಬಿರುವ ಮುಖ, ದುರ್ನೀತಿ, ದುರಾಚಾರ, ಅತೃಪ್ತಿ ಇವುದ್ವೇಷದ ರೂಪತಾಳಲು ಬಹಳಕಾಲ ಹಿಡಿಯದೆನ್ನುವಂತಿರುವ ಪರಿಸ್ಥಿತಿ ಸಮಸ್ಯೆಯನ್ನು ತಾನು ಜಯಪ್ರದವಾಗಿ ಬಗೆಹರಿಸದ್ದರಿಂದ ಉಂಟಾಯಿತೆಂಬುದನ್ನು ಗಮನಿಸಿ, ಭಾರತ ಸರಕಾರವು ಈ ಕ್ರಮವನ್ನು ಈಗಿಂದೀಗ ಆಚರಣೆಗೆ ತರಬೇಕು. ನನ್ನ ಸ್ವಂತ ಅನುಭವದ ಪ್ರಕಾರ ಈ ಕ್ರಮದಿಂದ ೩ ರಿಂದ ೬ ತಿಂಗಳೊಳಗೆ ಎಲ್ಲ ಕಷ್ಟಗಳೂ ಮಹಾಮಂತ್ರದಿಂದಹೊಡೆದೋಡಿಸಲ್ಪಡುವಂತೆ ಮಾಯವಾಗುವುವು ಎಂದು ಹೇಳುವ ಧೈರ್ಯವನ್ನು ನಾನು ಮಾಡುತ್ತೇನೆ. ಇದರ ಮೇಲೆ, ಇನ್ನು ಯಾವ ಕ್ರಮವೂ ಯಶಸ್ವಿಯಾಗದೆಂಬುದನ್ನೂ ನಾನು ಭಾರತ ಸರಕಾರದ ಮುಂದಿಡುವ ಸಾಹಸ ಮಾಡುತ್ತೇನೆ.

— ಕೆ. ಪಿ. ವರ್ಮ

(ಟಿಪ್ಪಣಿ: ಇದೊಂದು ಧೀರತನದ ಸಲಹೆ. ಆದರೆ ಅದರ ಜಯವು ಇತರ ಆದಾಯ ಮತ್ತು ಮಿತವ್ಯಯಾದಿಗಳನ್ನು ಸರಕಾರ ವ್ಯವಸ್ಥೆಗೊಳಿಸಿದರೆ ಮಾತ್ರ ಸಾಧ್ಯ ಎಂಬ ಶರ್ತಿನ ಮೇಲೆ ನಿಂತಿದೆ.

ನನಗೆ ವಿಚಾರಮಾಡುತ್ತ ಹೋದ ಹಾಗೆ ಐಶ್ವರ್ಯದ ಕೃತಕಮಾಪಕವಾದ ಹಣದ ಬದಲು ನಿಜಮಾಪಕವಾದುದನ್ನು ತರಬೇಕೆನಿಸುತ್ತದೆ. ಸ್ವತಂತ್ರ ಮುದ್ರಣಕ್ಕೆ ಅವಕಾಶವಿದ್ದ ಹಳೆಯ ಕಾಲದ ಹಣದಲ್ಲಿ ಕೊನೆಯಪಕ್ಷ ನಿಶ್ಚಿತ ಪರಿಮಾಣದ ಚಿನ್ನಬೆಳ್ಳಿಗಳಾದರೂ ಇರುತ್ತಿದ್ದವು. ಇಂದಿನ ಹಣವು ಕೊಡುವವನ ಮುಟ್ಟಲು ಬಾರದಂತಹ ನಂಬಿಗೆಯನ್ನು ಮಾತ್ರ ಪ್ರತಿನಿಧಿಸುತ್ತದೆ. ವಾಯುಮಾಪಕ ಯಂತ್ರದಂತೆ ಅದು ಕಾಲಕಾಲಕ್ಕೆ ದೇಶದೇಶಕ್ಕೆ ಭಿನ್ನವಾಗುತ್ತದೆ. ಒಂದು ಪೇಟೆ ಬಟ್ಟೆಯನ್ನು ವಾಯುಮಾಪಕ ಯಂತ್ರದಿಂದ ಅಳೆಯುವರೆಂದುಕೊಳ್ಳೋಣ; ಅಂದರೆ, ಅಳತೆ ಮಾಡುವ ಕಾಲದಲ್ಲಿಯ ಪಾದರಸ ವಿಭಾಗದ ಉದ್ದವೇ ಮಾನದಂಡವೆಂದು ತಿಳಿಯುವುದು. ಆಗ ಪರಿಸ್ಥಿತಿ ಹೇಗಾದೀತು?

ಇದರ ಮೇಲೆ, ಸರಕಾರ ಇರುವವರೆಗೆ ಅದಕ್ಕೆ ತನ್ನ ಸಂಪೂರ್ಣ ಬೆಲೆ ಉಳಿಯುವುದೆಂದಿರುವುದರಿಂದ ಅದನ್ನು ಬೆಳ್ಳಿ ಬಂಗಾರಗಳಂತೆ ಕೂಡಿಡಬಹುದಾಗಿದೆ. ಇದರ ಫಲವಾಗಿ ನಂಬಿಗೆ ಕಡಿಮೆಯಾದ ಹಾಗೆ ಸಂಗ್ರಹ ಮಾಡುವುದು ಹೆಚ್ಚುತ್ತ ಹೋಗುತ್ತದೆ. ಅದರಿಂದ ಅತಿಪ್ರಸರಣ ಅತಿಮೂಲ್ಯಗಳು ಉಂಟಾಗುವವು. ಸಂಗ್ರಹಿಸುವುದನ್ನು ತಡೆಯಲು ಹಣಗಾರರಿಗೆ ಬಡ್ಡಿಯನ್ನು ಕೊಡಲಾಗುವದು. ಅದರಿಂದ ಮತ್ತೊಂದು ಕೃತಕ ಊರುಗೋಲನ್ನು ಕೊಟ್ಟಂತಾಗುವುದು. ಆದರೆ ಬಂಡವಾಳ ಈಗಲೂ ಹೊರ ಹೊರಡಲು 'ನಾಚುತ್ತದೆ'; ಅಂದರೆ, ಅದಕ್ಕೆ ಅಲ್ಪ ಸ್ವಲ್ಪ ಬಡ್ಡಿಯಿಂದ ಸಮಾಧಾನವಾಗದು; ಹೊರಗೆ ಮೊಗದೋರಲು ಒಲ್ಲೆನೆನ್ನುವುದು. ಅದುದರಿಂದ ಮತ್ತಷ್ಟು ಹೆಚ್ಚು ಬಡ್ಡಿಯನ್ನು ಕೊಡುತ್ತೇವೆ ಎನ್ನಲಾಯಿತು. ಅದರಿಂದ ಹಣಕ್ಕೊಂದು ಇಲ್ಲದ ಅಧಿಕಾರವನ್ನು ಅಂಟಿಸಿದಂತಾಯಿತು—ಅದೆಂದರೆ, ಸಾಲಗಾರನ ಕೈಗೆ ಹೋಗಿ ತನ್ನ ಸಂತಾನವನ್ನು ಬೆಳೆಸುವ ಶಕ್ತಿ. ಇದನ್ನೆಲ್ಲ ಒಂದು ಕಠಿನ "ಶಾಸ್ತ್ರ"ವನ್ನಾಗಿ ಮಾಡಲಾಗಿದೆ. ಬಳಸ ಬೇಕಾದ್ದಕ್ಕಿಂತ ಹೆಚ್ಚನ್ನು ನೀವು ಬೆಳೆದರೆ ನೀವು ಮಿತವ್ಯಯ ಮಾಡುತ್ತೀರಿ ಎನ್ನಬಹುದು. ಇದು ಎಲ್ಲರಿಗೂ ತಿಳಿಯುವಷ್ಟು ಸುಲಭವಾದುದು, ದೊಡ್ಡದೊಂದು "ಶಾಸ್ತ್ರ"ವಲ್ಲ. ಶಾಸ್ತ್ರವನ್ನು ರಚಿಸಿದ್ದೇಕೆ ಗೊತ್ತೇ? ಹೆಚ್ಚಿಗೆ ಬೆಳೆಯದೆ, ಕಡಿಮೆ ಬಳಸದೆ ನೀವು ಸಂಪತ್ಸಮೃದ್ಧರಾಗುವೆವೆಂದು ತಿಳಿದುಕೊಳ್ಳುವ ಸ್ಥಿತಿಯನ್ನು ಉಂಟುಮಾಡಲು ಬೇಕಾದ ಯೋಜನೆಯನ್ನು ರಚಿಸಲು ಶಾಸ್ತ್ರವನ್ನು ನಿರ್ಮಿಸಲಾಗಿದೆ.

ಆಲೋಚನೆಮಾಡಿ ನೋಡಿದ ಹಾಗೆ, ಪ್ರತ್ಯಕ್ಷ ಸ್ಪೃಶ್ಯ ಉಪಯುಕ್ತ ಪದಾರ್ಥವಾಗಿರದೆ ಕೇವಲ ಅಸ್ಪರ್ಶನೀಯ ವಿಶ್ವಾಸದ ರೂಪದಲ್ಲಿರುವ ವರೆಗೆ, ಹಣವು ಅಸಂಗ್ರಾಹ್ಯ ಪದಾರ್ಥವೆಂದು ನಿಧಿಸಬೇಕು; ಅದು ವ್ಯಾಪಾರ ಸಂಬಂಧಗಳಲ್ಲಿ ಕೇವಲ ಏಕಮೇವಾದ್ವಿತೀಯವಾದ ವಿಧಿವಿಹಿತ ಚಲಾವಣೆಯನಿಸಬಾರದು. ಆದರೆ ಜೊತೆಗೆ ಇನ್ನೊಂದು ಪದಾರ್ಥವಿರಬೇಕು; ಆ ಪದಾರ್ಥವನ್ನು ಜನರು ಸ್ವತಃ ಬೆಳೆದು ಅಥವಾ ತಯಾರಿಸಿ ಮನಸ್ಸು ಬಂದರೆ, ಆಗತ್ಯವೆನಿಸಿದರೆ ಇನ್ನೊಬ್ಬನಿಗೆ ಕೊಡಲು ಸಾಧ್ಯವಾಗುವಂತಿರಬೇಕು. ಮೊದಲನೆಯ ಕಾರ್ಯವನ್ನು ಸಿಲ್ವಿಯೋಗೆಸ್ಲುಸು ಹೇಳಿದ ಯಾತನಾದ [illegible]

ಬಾಯ್ಡ್ ಓರ್, [illegible] ಮತ್ತು ನಾವು

ಕೆಲ ತಿಂಗಳ ಕೆಳಗೆ ಲಾರ್ಡ್ ಬಾಯ್ಡ್ [illegible] ಅಪಮಂತ್ರಿಸಲಾಯಿತು. [illegible] ಮಾನವನ್ನೂ ಆಹಾರೋತ್ಪಾದನ [illegible] ಸುವ ಸಂಭವವನ್ನೂ ವಿಚಾರಿಸಿ, ಸಮಸ್ಯೆ [illegible] ಯುದ್ಧಕಾಲದ ರೀತಿಯಲ್ಲಿ ಕಠಿಣವರಿ [illegible] ನಮಗೆ ಆಹಾರವಿಷಯದಲ್ಲಿ ಸ್ವಾವ [illegible] ಗಳಾಗಲು ಸಾಧ್ಯವುಂಟೆಂದು ಅವರು [illegible] ಯನ್ನು ಹಳ್ಳಿಸುವ ಸಾಹಸದಲ್ಲಿ [illegible] ಬಾಗಿಲಿಗೆ ಬಂದ ಕತ್ತುವನ್ನೆದುರಿ [illegible] ತೋರುವಷ್ಟೇ ಸ್ಫೂರ್ತಿಯಿಂದ [illegible] ನಿಂತಿದ್ದಾನೆ— ಹಸಿವೆಯೆಂಬ ಶತ್ರು [illegible] ರವರು. ಈ ಸಲಹೆಯನ್ನು ಅವಲಂಬಿ [illegible] ೧೯೫೧ರೊಳಗೆ ಈ ಗುರಿಯನ್ನು [illegible] ಆಸೆಯನ್ನು ಆಹಾರಮಂತ್ರಿಖಾತೆ [illegible] ಕೊಂಡಿದೆ.

ಆದರೆ ಇದಕ್ಕೆ ಬೇಕಾದ ಪೂರ್ವ [illegible] ವಿದೆಯೆ? ಪರಿಸ್ಥಿತಿಯನ್ನೆದುರಿಸಲು [illegible] ಸರಕಾರದ ಯಂತ್ರ . ಹಂಗುದೊರೆದು [illegible] ತೊಡಗಿದೆಯೆ? ಯುದ್ಧಾವಸ್ಥೆಯಲ್ಲಿ [illegible] ಉದ್ದೇಶಗಳನ್ನು ಮರೆಸಿ ಯುದ್ಧ ಪ್ರಯ [illegible] ಅತಿಶಯ ಉತ್ತೇಜನವನ್ನು ಕೊಡಲಾ [illegible] ನಿಯಮ ಸಂಯಮಗಳು ಅಧಿಕಾರ [illegible] ಯನ್ನು ಸಂಪಾದಿಸಿ ಲೋಪ [illegible] ಅಪವ್ಯಯವನ್ನೂ ದೂರೀಕರಿಸುತ್ತವೆ. ನಮ್ಮ ಮುಂದಾಳುಗಳು ಮೊದಲು [illegible] ತಮ್ಮ ಕಳಕಳಿಯನ್ನು ತೋರಿಸಲಿ. [illegible] ಸಮಾರಂಭಗಳಿಗಾಗಿ ಹಣವನ್ನು ಸುರಿಯುವುದೇ ಮೊದಲಾದವುಗಳಿಂದ ಈ ಕೆಲಸ ಸಿದ್ಧಿಸದು. ಲಾರ್ಡ್ ಬಾಯ್ಡ್ ಓರರು ಆಶಾಪಾಶವನ್ನು ಬಹಳ ಬಲದಿಂದ ಕಟ್ಟಿದರೋ ಆ [illegible] ಹದಿಯೆ ಇದರಿಂದ ನಷ್ಟವಾಗಿ ಹೋಗುತ್ತದೆ. ಈ ವಿಶಾಲ ದೇಶದಲ್ಲಿ ಸಾವಿರಗಟ್ಟಲೆ ಟನ್ ಆಹಾರದ ಕೊರತೆ ಬೀಳುವದನ್ನು [illegible] ನ್ನರು ಮನಗಾಣಲಾರರಾದರೂ ಮುಂದಾಳು [illegible] ಗಳೇ ನಡುಪಟ್ಟಿಯನ್ನು ಬಿಗಿ [illegible] ಆಗ ಪರಿಸ್ಥಿತಿಯ ಗಂಭೀರತೆಯ ಅರಿವು ಅವರಿಗಾಗಿಯೆ ತೀರುವದು.

ಬೇರೆ ಬೇರೆ ಶಾಖೆಗಳಲ್ಲಿ ಪರಸ್ಪರ [illegible] ಕ್ಯವೇ ಇಲ್ಲವೆನ್ನಬಹುದು. [illegible] ಗೆಡೆಯಿಲ್ಲದ ತಂತನ್ನ ಕೊಟ್ಟಡಿಯಲ್ಲಿ [illegible] ಯೊಂದು ಶಾಖೆಯೂ ಕೊಳೆಯುತ್ತಿದೆ. ಸಂಬಂಧಪಟ್ಟ ಮಂತ್ರಿಗಳವರಿಗೂ [illegible] ಪಡೆಯಬಲ್ಲ ಕೇಂದ್ರದಲ್ಲಿರುವ ಪ್ರಭಾವ [illegible] ಗಳಾದ ಅಧಿಕಾರೀತರರಿಗೆ ಕೂಡ ಕೃಷಿ [illegible] ಯಿಂದ ಉತ್ತಮ ಬೀಜಗಳನ್ನಾಗಲಿ, [illegible] ವನ್ನಾಗಲಿ, ಇತರ ತಾಂತ್ರಿಕ [illegible] ವನ್ನಾಗಲಿ ಪಡೆಯಲು ಸಾಧ್ಯ [illegible] ಆಹಾರಶಾಖೆಯಂತೂ ಬರಿ [illegible] ದಲ್ಲಿ ಪ್ರಚಾರ ನಡೆಸುವದರಲ್ಲಿ ಮಗ್ನವಾಗಿದೆ ಇದು ಸ್ವಾಭಾವಿಕವೇ ಎನ್ನಿರಿ— [illegible] ಈ ಶಾಖೆಗಳನ್ನು ನಡೆಸುವವರು [illegible] ಮಂಡೂಕಗಳಂಥ ಅಧಿಕಾರಿಗಳು. [illegible] ಈ ವಿಷಯಗಳ ಪ್ರತ್ಯಕ್ಷ ಕಾರ್ಯ [illegible] ಸೊನ್ನೆಯೆ. ಅವರ ಉತ್ತರೋತ್ತರ [illegible] ಕೇವಲ ಕಾಲಠಾಯಿಸ ಔದಾರ್ಯವೇ [illegible] ವಲ್ಲದೆ ಕಾರ್ಯಕ್ಷಮತೆಯ ಯಾವ [illegible] ಅಲ್ಲ. ಅದುದರಿಂದ ಕಾಲಯಾಪ [illegible] ದೊಂದೇ ಅವರ ಧ್ಯೇಯವಾ [illegible] ಈ ಕಲೆಯಲ್ಲಿ ಅವರು ನಿಷ್ಣಾತರು. [illegible] ಮೊದಲು ಮಾಡಬೇಕಾದ [illegible] ಕಾಗದಪತ್ರಗಳ ಕಡತಗಳ ಬಗ್ಗೆ ಅಲ್ಲ, [illegible] ರುವ ಕಾರ್ಯದ ಬಗ್ಗೆ ಸರಿಯಾ [illegible]

— [illegible]

ರೊಂದು ಮಾರ್ಗದಿಂದ [illegible] ಯನ್ನು ಇಳಿಸುವುದರಿಂದ ನೆರವೇ [illegible]

[illegible]

ನಾ [illegible] ಅಪ್ಪುಬಹುದೆಂದುಕೊಳ್ಳುತ್ತೇನೆ.

ವರ್ಧಾ — ಕಿ. ಘ. ಮ.

೩೧.೫.೪೯

ಭಾರತದ ನಿರ್ಯಾತಸಮಸ್ಯೆ

ಲೇಖಕರು: ಶ್ರೀ ಮಹಾಬಲೇಶ್ವರ ಭಟ್ಟ, ಕಾಶೀ ವಿದ್ಯಾಪೀಠ

ಪ್ರತಿಯೊಂದು ರಾಷ್ಟ್ರದ ಏಳಿಗೆ-ಬೀಳಿಗೆಗಳು ಆಯಾ ದೇಶದ ವ್ಯಾಪಾರದ ಮೇಲೆ ಅವಲಂಬಿಸಿರುವವು. ದೇಶವಾಗಲಿ, ರಾಷ್ಟ್ರವಾಗಲಿ, ಒಂಟಿಯಾಗಿ ಅಥವಾ ಇತರರ ಸಹಕಾರವಿಲ್ಲದೆ ಜೀವಿಸಲಾರದು; ಇದಕ್ಕೆ ಇತಿಹಾಸವೇ ಸಾಕ್ಷಿ.

ರಾಷ್ಟ್ರದ ಉನ್ನತಿ ಅವನತಿಯ ಸ್ಥಿತಿಯನ್ನು ತಿಳಿಯುವುದು ಹೇಗೆ? ವ್ಯಾಪಾರವು ನಮಗೆ ಅನುಕೂಲವಾಗಿದ್ದರೆ (favourable) ರಾಷ್ಟ್ರವು ಅಥವಾ ದೇಶವು ಉತ್ಕರ್ಷವನ್ನು ಪಡೆದಿದೆಯೆಂದು ತಿಳಿಯಬೇಕು. ಅದೇ ಪ್ರತಿಕೂಲ (unfavourable) ವಾಗಿದ್ದರೆ ಅವನತಿಯ ಸ್ಥಿತಿಯಲ್ಲಿದೆಯೆಂದು ತಿಳಿಯಬೇಕು. ಒಮ್ಮೆ ವ್ಯಾಪಾರವು ಅನುಕೂಲವಾಗಿರದಿದ್ದಲ್ಲಿ ಸಮತುಲನ (equilibrium) ದ ಮಟ್ಟಕ್ಕಿದ್ದರೂ ಚಿಂತೆಯಿಲ್ಲ.

ಇಲ್ಲಿಯವರೆಗೆ ನಾವು "ಉತ್ಪಾದಿಸಿರಿ ಇಲ್ಲವೆ ನಾಶವಾಗಿರಿ (Produce or Perish) ಘೋಷಣೆ ಮಾಡಿದೆವು. ಈಗ "ನಿರ್ಯಾತ ಮಾಡಿರಿ ಇಲ್ಲವೆ ನಾಶವಾಗಿರಿ" (Export or perish) ಘೋಷಣೆಯನ್ನು ವಾಣಿಜ್ಯ ಮಂತ್ರಿ ಶ್ರೀ. ನಿಯೋಗಿಯವರು ಆರಂಭಿಸಿದರು. ಇದರಿಂದಲೇ ನಮ್ಮ ಆರ್ಥಿಕ ಸ್ಥಿತಿಯು ಸಂತೋಷಜನಕವಿಲ್ಲೆಂದು ಸ್ಪಷ್ಟವಾಗುತ್ತದೆ.

೧೯೪೭—೪೮ ರಲ್ಲಿ ವ್ಯಾಪಾರವು ನಮಗೆ ಪ್ರತಿಕೂಲವಾಗಿತ್ತು. ಅಂದರೆ ನಾವು ೩೦.೦೭ ಕೋಟಿ ರೂಪಾಯಿಗಳ ಋಣಿಗಳಾಗಿದ್ದೆವು; ಅಥವಾ ನಾವು ಹೊರಗಿನಿಂದ ತರಿಸಿದ್ದು ಹೊರಗೆ ಕಳಿಸಿದ್ದಕ್ಕಿಂತ ಅಷ್ಟು ಹೆಚ್ಚಾಗಿತ್ತು. ೧೯೪೮-೪೯ ರಲ್ಲಿ ನಮ್ಮ ಸ್ಥಿತಿಯು ಇನ್ನೂ ಕೆಟ್ಟಿತು. ಈಗ ನಾವು ೯೫.೨೫ ಕೋಟಿ ರೂ. ಗಳ ಸಾಲಗಾರರಾಗಿದ್ದೇವೆ. ಪರಿಸ್ಥಿತಿಯು ಅತ್ಯಂತ ಗಂಭೀರವಾಗಿದೆ. ಸ್ಥಿತಿಯು ಹೀಗಿದ್ದಲ್ಲಿ ನಮ್ಮ ದಿವಾಳಿಯಾಗಲು ಹೆಚ್ಚು ವರ್ಷ ತಗಲಲಾರದು. ಆದುದರಿಂದ "ಹಾಸಿಗೆ ನೋಡಿ ಕಾಲು ಚಾಚು" ಎಂಬ ನಾಣ್ಣುಡಿಯಂತೆ ಪ್ರತಿಯೊಂದು ಹೆಜ್ಜೆಯನ್ನು ಎಚ್ಚರದಿಂದಿಡಬೇಕು.

ಇದಕ್ಕೇನು ಉಪಾಯ? ಉತ್ತರವು ಸ್ಪಷ್ಟವಿದೆ. ಹೆಚ್ಚಾಗಿ ನಿರ್ಯಾತ ಮಾಡಬೇಕು. ವ್ಯಾಪಾರವು ನಮ್ಮ ಅನುಕೂಲದ ಮಟ್ಟಕ್ಕೆ ಬರಬೇಕು ಆದರೆ ನಿರ್ಯಾತ ಮಾಡುವುದಾದರೂ ಏನು? ದವಸ-ಧಾನ್ಯಗಳು ಹೊರಗಿನಿಂದ ಬರುತ್ತವೆ. ಈಗ ಹಾಲಿನ ಡಬ್ಬಿಗಳೂ ವಿಪುಲವಾಗಿ ಬರುತ್ತಿವೆ. ೧೯೪೯ ರಲ್ಲಿ ಕೇವಲ ಹನ್ನೊಂದು ತಿಂಗಳಲ್ಲಿ ನಾವು ೪೬೩ ಕೋಟಿ ರೂ. ಗಳ ಸಾಮಾನನ್ನು ವಿದೇಶಗಳಿಂದ ತರಿಸಿದೆವು.

ಸ್ಥಿತಿಯನ್ನು ಸುಧಾರಿಸಲು ಹಿಂದೆ ಸರಕಾರವು ನಿರ್ಯಾತ ಬಟ್ಟೆಗಳ ಮೇಲಿನ ಸುಂಕವನ್ನು ರದ್ದು ಮಾಡಿದೆ. ಅಲ್ಲದೆ ಎಣ್ಣೆ ಮತ್ತು ಎಣ್ಣೆ ಬೀಜಗಳ ಮೇಲೂ ಸುಂಕ ತೆಗೆದು ಹಾಕಿದೆ.

ತನ್ಮಧ್ಯೇ ವಿದೇಶಗಳಿಂದ ನಮ್ಮ ದೇಶಕ್ಕೆ ಕಲಂಕ ತರುವ ಸುದ್ದಿಗಳು ಸರಕಾರಕ್ಕೆ ತಲುಪಿವೆ ಎಂದು ಶ್ರೀ ನಿಯೋಗಿ ಅವರು ನುಡಿದರು. ಶೇಂಗಾ ಬೀಜಗಳಲ್ಲಿ ಬುದ್ಧಿಪೂರ್ವಕವಾಗಿ ಕಲ್ಲು ಹರಳನ್ನು ಸೇರಿಸುತ್ತಾರೆಂದೂ ಕೀಳು ತರಗತಿಯ ಕತ್ತವನ್ನು ಶ್ರೇಷ್ಠವೆಂದು ಕಳಿಸುತ್ತಾರೆಂದೂ ಸರಕಾರಕ್ಕೆ ದೂರು ಬಂದಿದೆಯಂತೆ. ಅಲ್ಲದೆ ನಿರ್ಯಾತದ ಹರಳೆಣ್ಣೆಯಲ್ಲಿ ನೀರು ಮತ್ತು ಕೊಳಕನ್ನೂ ಸೇರಿಸುವದು ತಿಳಿದುಬಂದಿದೆ.

ಬಟ್ಟೆಯ ವಿಷಯದಲ್ಲೂ ಕಲಂಕವಿದೆ. ಒಳ್ಳೆಯ ಬಟ್ಟೆಯೆಂದು ಹೇಳಿ, ಅವರಿಂದ ಹಣ ಪಡೆದು ಕನಿಷ್ಠ ತರಗತಿಯ ಬಟ್ಟೆ ಕಳಿಸುತ್ತಾರಂತೆ. ಈ ಸುದ್ದಿಗಳು ಭಾರತದ ಕೀರ್ತಿಯನ್ನು ಗಾಂಧಿಯ ದೇಶದ ಕೀರ್ತಿಯನ್ನು- ಮಣ್ಣುಗೂಡಿಸಲು ಸಾಲವೇ! ನಮ್ಮ ಪ್ರಧಾನ ಮಂತ್ರಿ ನೆಹರು ಅವರು ಅನೇಕಾವರ್ತಿ ಈ ತರಹದ ಕೃತ್ಯಗಳನ್ನು ನಿಂದಿಸಿ ಹಾಗೆ ಮಾಡಬಾರದೆಂದು ವ್ಯಾಪಾರಿಗಳಿಗೆ ಪ್ರಾರ್ಥಿಸಿದರು. ಆದರೆ ಇದರಿಂದ ಕಿವುಡನ ಮುಂದೆ ಕೂಗಿದ್ದಷ್ಟೇ ಪ್ರಯೋಜನವಾಯಿತೆಂದು ತೋರುತ್ತದೆ.

ಇಷ್ಟಲ್ಲದೆ ನಮ್ಮ ವಸ್ತ್ರಗಳು ಬೆಲೆಯಲ್ಲಿ ಜಪಾನ ಮತ್ತು ಅಮೇರಿಕೆಯ ವಸ್ತ್ರಗಳಿಗಿಂತ ೨೫ ರಿಂದ ೪೦ ರೂ. ಶೇಕಡಾ ಹೆಚ್ಚು ಇರುತ್ತವೆ. ನಾಲ್ಕು ವರ್ಷಗಳ ಹಿಂದೆ ಲಾಭ ಪಡೆದಂತೆ ನಮ್ಮ ವ್ಯಾಪಾರಿಗಳು ಈಗಲೂ ಅದೇ ಉದ್ದೇಶದಿಂದ ವರ್ತಿಸುವದು ಅತ್ಯಂತ ನಿಂದನೀಯವೇ!

ಅರ್ಥಶಾಸ್ತ್ರದಲ್ಲಿ ಸ್ಥಿರಾಸ್ತಿಗೆ ಇದ್ದಷ್ಟೇ ಬೆಲೆ ಕೀರ್ತಿಗೂ ಇದೆ ಎಂಬುದನ್ನು ನಮ್ಮ ವ್ಯಾಪಾರಿಗಳು ಮರೆಯಬಾರದು. ಯಾಕೆಂದರೆ ಇಂದಿನ ಆರ್ಥಿಕ ಉನ್ನತಿ ಅವನತಿಗಳಿಗೆ ಕೀರ್ತಿಯೂ ಒಂದು ಪ್ರಬಲ ಸಾಧನ.

ಇನ್ನು ಸ್ಟರ್ಲಿಂಗ್ ಶಿಲ್ಕಿನ (Sterling) ಸಮಸ್ಯೆ. ನಮ್ಮ ಅನೇಕ ಕೋಟಿ ರೂ. ಗಳು ಇಂಗ್ಲೆಂಡಿನ ಬ್ಯಾಂಕಿನಲ್ಲಿರುತ್ತವೆ. ಅವುಗಳಿಂದ ನಾವು ಉತ್ಪಾದಕ ಮಾಲು (Capital-Goods) ತರಿಸಬೇಕೆಂದು ಯೋಚಿಸಿದ್ದೆವು. ಆದರೆ ನಾವು ಕೇವಲ ಹತ್ತು ತಿಂಗಳಲ್ಲಿ (ಜೂನ ೧೯೪೮—ಮಾರ್ಚ ೧೯೪೯) ಒಟ್ಟು ೪೧.೩ ಕೋಟಿ ರೂ. ಗಳನ್ನು ಉಪಯೋಗಿಸಿದೆವು. ಇದರಲ್ಲಿ ಅನುತ್ಪಾದಕ ಮಾಲುಗಳು ವಿಪುಲವಾಗಿ ಬಂದಿವೆ. ಅಲ್ಲದೆ ಬ್ರಿಟಿಶರು ನಮಗೆ ಬೇಕಾದಂತೆ ಆ ಹಣವನ್ನು ಸಮಯಕ್ಕೆ ಬೇಕಾದಾಗ ಕೊಡುತ್ತಲೂ ಇಲ್ಲ. ಅದರಿಂದ ನಮ್ಮ ಕೈಗಳು ಕಟ್ಟಿದಂತಾಗಿವೆ.

ಕಳೆದ ಮೇ ೧೨ ಕ್ಕೆ ಒಂದು ಸುದ್ದಿ ಬಂದಿತ್ತು; ಅದರಲ್ಲಿ ಹಿಂದಕ್ಕೆ ನಾಲ್ಕು ಕೋಟಿ ರೂ. ಗಳ ಹಾನಿಯಾಯಿತೆಂದು ಇತ್ತು. ಅದು ಹೇಗೆ?

ಭಾರತ ಸರಕಾರವು ಕೆಲವು ತಿಂಗಳ ಹಿಂದೆ ಇಂಗ್ಲೆಂಡ ಸರಕಾರಕ್ಕೆ ಸ್ಟರ್ಲಿಂಗ್ ಶಿಲ್ಕಿನ ಲೆಕ್ಕದ ಪಟ್ಟಿಯನ್ನು ಕೊಡಲು ಬರೆದಿತ್ತು. ಇಂಗ್ಲೆಂಡ ಸರಕಾರವು ಅದನ್ನು ಕೊಡಲು ವಿಲಂಬ ಮಾಡಿದ್ದರಿಂದ ನಾವು ನಾಲ್ಕು ಕೋಟಿ ರೂ. ಗಳ ಅನುತ್ಪಾದಕ ಸಾಮಾನುಗಳನ್ನು ತರಿಸಿಕೊಂಡೆವು! ಈ ರೀತಿಯಾಗಿ ನಮಗೆ ನಾಲ್ಕು ಕೋಟಿ ರೂ. ಗಳ ಹಾನಿಯಾಯಿತು.

ಇಂತಹ ಕಷ್ಟದ ಸ್ಥಿತಿಯಲ್ಲಿ ನಾವು ಏನು ಮಾಡಬೇಕೆಂಬುದನ್ನು ಶಾಂತಚಿತ್ತರಾಗಿ ವಿಚಾರಿಸಬೇಕು. ನಮ್ಮಲ್ಲಿ ನಮಗೆ ವಿಶ್ವಾಸ ಬೇಕು. ದೃಢತೆ ಬೇಕು. ಇಂದಲ್ಲ ನಾಳೆ ನಮ್ಮ ಸಮಸ್ಯೆಗಳು ಬಗೆಹರಿಯುವವು.

ನಮ್ಮ ಬಂಡವಾಳಗಾರರೂ ವ್ಯಾಪಾರಿಗಳೂ ಸರಕಾರದ ವಿರೋಧಿಗಳೂ ತಮ್ಮ ಕ್ಷುಲ್ಲಕ ಸ್ವಾರ್ಥಗಳನ್ನು ಮೂಲೆಗಿಟ್ಟು ದೇಶದ ನಿರ್ಮಾಣಕ ಕೆಲಸಗಳಲ್ಲಿ ನೆರವಾಗುವರೇ?

ಧನುರ್ವಿದ್ಯೆ, ಖಡ್ಗವಿದ್ಯೆಗಳ ಎರಡು ತೆಲುಗು ಗ್ರಂಥಗಳು

ಮದ್ರಾಸಿನ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ ಲಾಯಬ್ರೇರಿ (ಪೌರಸ್ತ್ಯ ಮಾತೃಕಾ ಭಂಡಾರ) ಪುಸ್ತಕಾಲಯಕ್ಕೆ ಈಚೆಗೆ ಸೇರಿಸಲ್ಪಟ್ಟು ಸದ್ಯವೇ ಪ್ರಕಟಗೊಳ್ಳಲಿರುವ ಎರಡು ಹಳೆಯ ಮಾತೃಕೆಗಳು ೧೬—೧೭ ನೆ ಶತಮಾನಗಳಲ್ಲಿ ಪ್ರಚಲಿತವಾಗಿದ್ದ ಯುದ್ಧಕಲೆಯ ಮೇಲೆ ಬೆಳಕು ಚೆಲ್ಲಬಹುದೆಂದು ಹೇಳಲಾಗಿದೆ.

ಅವುಗಳಲ್ಲಿ "ಧನುರ್ವಿದ್ಯಾವಿಲಾಸ"ವೆಂಬ ೧೮ ಶತಮಾನದ ಒಂದು ತೆಲುಗು ಗ್ರಂಥದಲ್ಲಿ ಬಿಲ್ಲು ಬಾಣಗಳನ್ನು ಉಪಯೋಗಿಸುವ ೩೨ ವಿವಿಧ ವಿಧಾನಗಳನ್ನು ನಿರೂಪಿಸಲಾಗಿದೆ. ಅದನ್ನು ಬರೆದವನು ಕೃಷ್ಣಮಾಚಾರ್ಯ. ಮಹಮದ ಜಾಫರ ಖಾನನೆಂಬ ಧನುರ್ವಿದ್ಯಾವಿಶಾರದನ ಶಿಷ್ಯನಾದ ಮಾಣಿಕ್ಯ ತಿರುಮಲರಾಯನೆಂಬ ಒಬ್ಬ ಪಾಳೆಯಗಾರನಿಗೆ ಇದು ಅರ್ಪಿಸಲ್ಪಟ್ಟಿದೆ. ಮಹಮದ ಜಾಫರಖಾನನೂ ಮಹಮದ ತಿಲಿಚಖಾನನೆಂಬ ಇನ್ನೊಬ್ಬ ಮಹಾಯೋಧನೂ ಸೇರಿ ರಚಿಸಿದ ಇಂಥದೇ ಒಂದು ಪರ್ಶಿಯನ್ ಕೃತಿಯೂ ಇದೆಯಂತೆ.

ನವನಪ್ಪನೆಂಬವನು ಬರೆದ "ಖಡ್ಗ ಲಕ್ಷಣ ಶಿರೋಮಣಿ" ಯೆಂಬ ಇನ್ನೊಂದು ಗ್ರಂಥವೂ ಕುತೂಹಲಜನಕವಾಗಿದೆ. ರಾಜಾ ರಘುನಾಥ ತೊಂಡಮನಿಗೆ ಅರ್ಪಿತವಾದ ಈ ಕೃತಿ ಖಡ್ಗವನ್ನು ಹಿರಿಯುವ ನಾನಾ ಪ್ರಕಾರಗಳ ವಿವರಣೆ ಕೊಡುತ್ತದೆ. ಹೈದರಾಲಿ, ಟಿಪ್ಪುಸುಲ್ತಾನರ ಖಡ್ಗಗಳ ವರ್ಣನೆಯೂ ಅದರಲ್ಲಿದೆ.

ಈ ಗ್ರಂಥಗಳನ್ನು ಸಚಿತ್ರವಾಗಿ ಪ್ರಕಟಿಸಿದರೆ ಆ ಕಾಲದ ಯುದ್ಧವಿದ್ಯೆಯ ಮೇಲೆ ತುಂಬ ಬೆಳಕು ಬೀಳಬಹುದು.

ಸಮಾಜದ ವಿರಾಡ್ರೂಪದರ್ಶನ

(೧೧ ನೆಯ ಪುಟದಿಂದ)

ಯನ್ನು ಹಿಡಿದಿರುವುದು ಕಾಣುತ್ತಿರುವುದರಿಂದ ಉಂಟಾದ ಸಾತ್ವಿಕ ಸಂತಾಪೋದ್ರೇಕ ಕಾರಣವಲ್ಲದೆ ಲೇಖಕರ ವಿಚಾರಸೂಕ್ಷ್ಮತೆಯ ಕೊರತೆಯಲ್ಲವೆನ್ನಬೇಕಾಗುತ್ತದೆ. ಮತ್ತು ಇದು ತಪ್ಪು ಇದು ಸರಿ ಎಂದು ಹೇಳುವಾಗ ಅವತರಣಿಕೆಗಳಲ್ಲಿ ಸಾಂಗತ್ಯ ಮತ್ತು ವಾಕ್ಯರಚನೆಗಳಲ್ಲಿ ಕೆಲ ಮಟ್ಟಿಗೆ ಸ್ಪಷ್ಟತೆಯಿಲ್ಲವಾದುದರಿಂದ ಇದು ಲೇಖಕರ ಸ್ವಂತ ಅಭಿಪ್ರಾಯವೋ ಪರಾಭಿಪ್ರಾಯ ನಿರ್ದೇಶನವೋ ಎಂಬುದು ಥಟ್ಟನೆ ತಿಳಿಯದಿರುವುದು ಮೊದಲ ಅಧ್ಯಾಯದಲ್ಲಿ ಹೆಚ್ಚಾಗಿದೆ. ಅಲ್ಲದೆ ಈ ಅಧ್ಯಾಯದಲ್ಲಿ ಸದ್ಯದ ಭಾರತೀಯರ ತ್ರಿಕರಣಾಶುದ್ಧಿಯನ್ನು ಹೇಳಲು ಉದ್ದೇಶಿಸಿ ವಿಶಿಷ್ಟ ಪುರುಷಾರ್ಥಗಳ ಆರಾಧನೆಯನ್ನು ಹಿಡಿದ ಮನೋವೃತ್ತಿಗಳ ನಿರಾಶೆಯನ್ನು ವರ್ಣಿಸಿ ಅಲ್ಲಿಗೇ ಬಿಟ್ಟಿದ್ದಾರೆ. ಅಲ್ಲದೆ, ಇಲ್ಲಿ ಉದಾತ್ತ ಮಾರ್ಗ ಹಿಡಿದವರಿಗೆ ಒದಗುವ ವಿಘ್ನಗಳನ್ನು ವರ್ಣಿಸಿ ಅವರ ನಿರಾಶೆಯನ್ನು ಉಲ್ಲೇಖಿಸಿಬಿಟ್ಟು ಮುಂದೆ ಬೇರೆಯ ಅಧ್ಯಾಯದ ಅವರ ವಿಘ್ನಾಪ್ರತಿಹತ ಪ್ರಯತ್ನ ಮತ್ತು ಸಿದ್ಧಿಗಳನ್ನು ಕೊಂಡಾಡಿರುವರು. ಈ ಕಾರಣಗಳಿಂದ ಮೊದಲನೆಯ ಅಧ್ಯಾಯದ ಸಂಬಂಧ ಮಿಕ್ಕ ಅಧ್ಯಾಯಗಳೊಡನೆ ತರ್ಕಶುದ್ಧವಾಗಿ ಕೆಲವೆಡೆ ಸಮರ್ಥನೀಯವಾಗದಂತಾಗಿದೆ.

ಸಮಾಜವನ್ನು ಬಿಟ್ಟು ನಡೆವವರಾದ ವಿರಾಗಿಗಳನ್ನೂ ದೇವರ ಹೆಸರಲ್ಲಿ ಧರ್ಮಕಾರ್ಯಗಳನ್ನೆಸಗುವವರನ್ನೂ ನಿಂದಿಸಲು ಕೊಟ್ಟ ಕಾರಣಗಳು ಸಾಕಷ್ಟು ಬಲಿಷ್ಠವಿಲ್ಲ, ವಿವರಪೂರ್ಣವಾಗಿಲ್ಲ. ಆದರೆ ಮುಂದಿನ ಅಧ್ಯಾಯಗಳಲ್ಲಿ ಮಾತ್ರ ಶ್ರೀ ಜೋಶಿಯವರು ಪಾಶ್ಚಾತ್ಯರ ಅರ್ಥಜ್ಞತೆಗೆ ನಿದರ್ಶನವಾಗಿರುವ ಹಲವಾರು ತತ್ವಗಳನ್ನೂ ಸಿದ್ಧಾಂತಾಭಾಸಗಳನ್ನು ಕೊಟ್ಟು ಅವುಗಳಲ್ಲಿಯ ಅಪೂರ್ಣತೆಗಳನ್ನು ಬಯಲಿಗೆಳೆದು ಹಿಂದು ದಾರ್ಶನಿಕ ಮಹಾವಾಕ್ಯಗಳನ್ನು ಉದ್ಧರಿಸಿ ಅವುಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸಿದ್ದು ವೇದ್ಯವಾಗುತ್ತದೆ.

ಪ್ರಯತ್ನದ ಕೃತಕೃತ್ಯತೆ

ಈ ಪ್ರಯತ್ನದಲ್ಲಿ ಅವರು ಬಹಳ ಮಟ್ಟಿಗೆ ಕೃತಕೃತ್ಯರಾಗಿದ್ದಾರೆಂದು ಹೇಳಬಹುದು. ಐಹಿಕವೇ ಸರ್ವಸ್ವವೆಂಬುದೂ ಆಮುಷ್ಮಿಕವೇ ಸರ್ವಸ್ವವೆಂಬುದೂ ಅತಿರೇಕಗಳೆಂದು ಅವನ್ನು ಖಂಡಿಸಿದ್ದು ಸಮಾಜಹಿತದ ದೃಷ್ಟಿಯಿಂದ ಸಮರ್ಥನೀಯವಾಗಿದೆ. ಇದಿ ಪ್ರಬಂಧ ಸಮಾಜಪ್ರಾಧಾನ್ಯವುಳ್ಳದ್ದಾದುದರಿಂದ, ವ್ಯಕ್ತಿ ಸಮಾಜದ ಘಟಕವಾದುದರಿಂದ ಅವೆರಡರ ಸ್ಥಾನಮಾನಗಳನ್ನು, ಪೂರ್ಯತ್ವಪೂರಕತ್ವಗಳನ್ನು, ಪರಸ್ಪರ ಹಿತಸಾಧನೆಯ ಮಾರ್ಗವನ್ನು ಗ್ರಂಥಕರ್ತರು ಬಹಳ ಬಲ್ಲಾಳ್ತನದಿಂದ ವಿವೇಚಿಸಿದ್ದಾರೆ. ಆದರೆ ಸಮನ್ವಯವನ್ನು ಬೋಧಿಸ ಹೊರಟ ಇವರ ಬರಹವನ್ನು ಮೊದಲಿಂದಕಡೆಯವರೆಗೆ ಓದುತ್ತಹೋದಹಾಗೆ ಪ್ರೇಯಸ್ಸು ಶ್ರೇಯಸ್ಸುಗಳ ಏಕಪಕ್ಷೀಯತೆಯನ್ನು ನಡು ನಡುವೆ ಖಂಡಿಸುತ್ತ ಹೋಗಿದ್ದರೂ ಶ್ರೇಯಸ್ಸಿನ ಕಡೆಗೇ ಇವರ ಒಲೆತ ಹೆಚ್ಚೆಂದು ಭಾಸವಾಗುತ್ತದೆ. ಸಮಾಜದ ಸರ್ವೋದಯದ ದೃಷ್ಟಿಯನ್ನು ಇಟ್ಟುಕೊಂಡ ಶ್ರೀ ಜೋಶಿಯವರು ಸಮಾಜದ ಪಾರಮ್ಯವನ್ನು ಕೆಲವೆಡೆ ಉಲ್ಲೇಖಿಸಿ ಮತ್ತೆ ಕೆಲವೆಡೆ ಘಟಕಗಳಾದ ವ್ಯಕ್ತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅದರ ದೋಷಗಳನ್ನೂ ಉಲ್ಲೇಖಿಸಿರುವುದು ಕೆಲಮಟ್ಟಿಗೆ ವ್ಯಾಹತಿಯೆನಿಸುವಂತಿದೆ. ಆದರೆ ಇಷ್ಟು ಮಾತ್ರದಿಂದ ಅವರ ಮರ್ಮಜ್ಞತೆಗೆ ಭಂಗ ಬಂತೆಂದು ಹೇಳಲಾಗದು; ಅದು ಇಂದಿನ ಉಪನ್ಯಾಸಶೈಲಿಯಲ್ಲಿ ಕಂಡುಬರುವ ಸಾಮಾನ್ಯ ದೋಷವಷ್ಟೆ. ಅತಿ ಸೂಕ್ಷ್ಮವಾದ ಶಾಸ್ತ್ರೀಯ ವಿಚಾರಗಳನ್ನು ಸಾರ್ವಜನಿಕರೆದುರಿಡುವಾಗ 'ವಿದ್ವಾನೇವ ವಿಜಾನಾತಿ ವಿದ್ವಜ್ಜನಪರಿಶ್ರಮಂ' ಎಂಬ ಮಾತು ಸತ್ಯವಾಗಿ ಪರಿಣಮಿಸುತ್ತದೆ ಎಂಬುದನ್ನು ಅದು ನಿರ್ದೇಶಿಸುವುದಲ್ಲದೆ, ಪ್ರಬಂಧದಲ್ಲಿಯ ಅಲ್ಪವಿಸಂಗತಿಯ ಅಕ್ಷಮ್ಯತೆಯನ್ನಲ್ಲ. ಕನ್ನಡದಲ್ಲಿ ಇಂತಹ ಪ್ರಾಚೀನ-ಅರ್ವಾಚೀನ ತತ್ವ ಮತ್ತು ಸಿದ್ಧಾಂತಗಳ ಸಮನ್ವಯ, ವಿವೇಚನೆ, ಸೂಕ್ಷ್ಮ ವಿವರಣೆಗಳು ಪ್ರಕಟವಾಗಿರುವುದು ಇದೀಗ ಅಭೂತಪೂರ್ವವೆನಿಸುತ್ತದೆ. ಉಪನ್ಯಾಸದ (ಭಾಷಣ) ಶೈಲಿಯಲ್ಲಿ ಬರುವ ಸಾಮಾನ್ಯ ವಿಲಕ್ಷಣ ಪ್ರಯೋಗಗಳು ಇಲ್ಲಿಯೂ ಬಂದಿವೆ. ಮಹಾತ್ಮ್ಯ, ಅಂಧಃಕಾರ, ಬಲಿಷ್ಠ, ಒಕ್ಕಲತನ, ಶ್ರೇಷ್ಠ, ಕನಿಷ್ಠ, ಪಾಶ್ಚಿಮಾತ್ಯ, ಬೇರಿಜು, ಸಾಣಿ, ದಿನಾಲು ಮುಂತಾದವು ಅವುಗಳ ಕೆಲ ನಿದರ್ಶನಗಳು.

ಸಮಸ್ತ ಭಾರತ

ಮುಂಬಯಿ

ಮುಂಬಯಿ ಪ್ರಾಂತದಲ್ಲಿ ಒರಟು ಮತ್ತು ಮಧ್ಯಮ ತರಗತಿಯ ಬಟ್ಟೆಗಳ ಹಂಚುವಿಕೆಯ ಪ್ರಮಾಣ ನಿರ್ಬಂಧಗಳನ್ನೆಲ್ಲ ಸರಕಾರವು ಕಿತ್ತು ಹಾಕಿದೆ. ಬೇಕಾದವರು ಕಾರ್ಡ-ಕೂಪನ್ನುಗಳನ್ನು ಹಾಜರು ಮಾಡಿ ಬೇಕಾದಷ್ಟು ಈ ವರ್ಗದ ಬಟ್ಟೆ ಕೊಳ್ಳಬಹುದು.

ಸುರತದ ಲೋಹಿಯಾ ದಿನಾಚರಣೆಯ ಸಭೆಯಲ್ಲಿ (ತಾ. ೨೫) ಕಿಸಾನ ಮುಂದಾಳಾದ ಶ್ರೀ ಇಂದುಲಾಲ ಯಾಜ್ಞಿಕರು ಸ್ವರಾಜ್ಯ ದೊರೆತು ಎರಡು ವರ್ಷವಾಗುತ್ತ ಬಂದರೂ ರೈತ ಕೂಲಿಕಾರರಿಗೆ ಅದರ ರುಚಿ ಸಿಕ್ಕಿಲ್ಲವೆಂದೂ ನಾಗರಿಕ ಸ್ವಾತಂತ್ರ್ಯ ಹರಣವು ಜನತಾ ಸರಕಾರಕ್ಕೆ ನಾಚಿಕೆಗೇಡೆಂದೂ ಟೀಕಿಸಿದರು.

ಕಸ್ತೂರಬಾ ಸ್ಮಾರಕ ನಿಧಿಗೆ ಸರದಾರ ವಲ್ಲಭಭಾಯಿ ಪಟೇಲರೇ ಮುಂದಿನ ೩ ವರ್ಷಗಳಿಗಾಗಿ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಶ್ರೀ ಎ. ವಿ. ಥಕ್ಕರರು ಪ್ರಧಾನ ಕಾರ್ಯದರ್ಶಿ.

ಅ. ಭಾ. ಅಂಚೆ ಜನರ ಮತ್ತು ಕೆಳವರ್ಗದ ಅಂಚೆ ನೌಕರರ ಸಂಘದ ಕಾರ್ಯಕಾರಿ ಸಭೆ ಮುಂಬಯಿಯಲ್ಲಿ ಸಭೆ ಸೇರಿ ಜುಲೈ ೧೧ ನ್ನು ನಿಷೇಧ ದಿನವೆಂದು ಆಚರಿಸಲು ನಿರ್ಣಯಿಸಿತು. ಸರಕಾರವು ವಚನಪಾಲನೆಯನ್ನು ವಿಲಂಬಿಸುತ್ತಿರುವದರ ವಿರುದ್ಧ ಈ ಉಪಾಯ. ಸಭೆಯು ಸಂಯುಕ್ತ ಪ್ರಾಂತದ ಶ್ರೀ ಶಿವನಲಾಲ ಸೆಕ್ಸೇನಾ ಮತ್ತು ಕೆ. ಎಲ್. ಶ್ರೀವಾಸ್ತವರನ್ನು ಸಂಘದಿಂದ ೩ ವರ್ಷಗಳವರೆಗೆ ಹೊರತಳ್ಳಿತು. ಆದರೆ ಹೊರತಳ್ಳಲ್ಪಟ್ಟ ಈ ಮಹನೀಯರು ಪ್ರತಿಸ್ಪರ್ಧಿ ಸಂಘವನ್ನು ಸ್ಥಾಪಿಸಿಕೊಂಡು ಶ್ರೀ ದಳವಿಯವರ ನೇತೃತ್ವದಲ್ಲಿ ಅವಿಶ್ವಾಸ ತೋರ್ಪಡಿಸಿದ್ದಾರೆ.

ಹನಸೋಟದ ಬಳಿ ನರ್ಮದಾ ನದಿಯಲ್ಲಿ ನಾವೆಯೊಂದು ಮಗುಚಿಬಿದ್ದು ೪೭ ಪ್ರಯಾಣಿಕರಲ್ಲಿ ೧೬ ಜನರು ಜಲಸಮಾಧಿ ಹೊಂದಿದರು.

ಮುಂಬಯಿ ಪ್ರಾಂತದ ೭ ಜವಳಿ ಗಿರಣಿಗಳು ಮುಚ್ಚಿದ್ದರಿಂದ ೭೦೦೦ ಕೂಲಿಕಾರರು ನಿರುದ್ಯೋಗಿಗಳಾದುದರ ಸಮಸ್ಯೆ ಪರಿಹರಿಸಲು ತ್ರಿಪಕ್ಷ ಸಮಿತಿಯನ್ನು ನೇಮಿಸಬೇಕೆಂದು ಸರಕಾರ ನಿರ್ಧರಿಸಿದೆ.

ಮುಂಬಯಿ ಗಿರಣಿ ಕೂಲಿಕಾರರಿಗೆ ಕೊಡಬೇಕೆಂದು ತೀರ್ಮಾನಿಸಲ್ಪಟ್ಟ ೪½ ತಿಂಗಳ ಬೋನಸ್ಸಿನ ಒಂದಂಶವನ್ನು ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟ ರೂಪದಲ್ಲಿ ಕೊಡಬೇಕೆಂದು ವಿಧಿಸುವ ಕೇಂದ್ರ ಸರಕಾರದ ಸುಗ್ರೀವಾಜ್ಞೆಯ ವಿರುದ್ಧ ತಾ. ೨೫ ಕ್ಕೆ ಕಮ್ಯುನಿಸ್ಟರು ಪ್ರಚೋದಿಸಿದ ಸಂಪು ಪೂರ್ಣ ಅಯಶಸ್ವಿಯಾಯಿತು.

ಮುಂಬಯಿ ನಗರದ ಕಸಗುಡಿಸುವವರ ಸಂಪು, ಮುನಸಿಪಲ್ ಕಮೀಶನರರು ನೌಕರರು ಅನಿರ್ಬಂಧ ಶರಣು ಬರಬೇಕೆಂದು ಬೇಡಿದ್ದರಿಂದ ಮಧ್ಯಸ್ಥಿಕೆಯಿಂದ ಮುಕ್ತಾಯವಾಗುವ ಘಟ್ಟಕ್ಕೆ ಬಂದಿದ್ದರೂ ಮುಕ್ತಾಯವಾಗಲಿಲ್ಲ.

ಮುಂಬಯಿ ನಗರದಿಂದ ಭಿಕ್ಷುಕರ ಉಚ್ಚಾಟನೆಗಾಗಿ ಪೋಲೀಸರ ರಭಸದ ಪ್ರಯತ್ನ ಪ್ರಾರಂಭವಾಗಿದೆ.

ಮಧ್ಯಪ್ರಾಂತ

ಅಕೋಲೆಯಲ್ಲಿ ಒಂದು ಗೋಹತ್ಯೆಯಾದ ಸುದ್ದಿಯಿಂದ ಕ್ಷೋಭೆಯೆದ್ದು ಲೂಟಿ, ಗಲಭೆಗಳಾದುದರ ಫಲವಾಗಿ ಒಬ್ಬನಿಗೆ ಸಾವು ಹಲವರಿಗೆ ಗಾಯವುಂಟಾದವು. ಪೋಲೀಸರು ಪರಿಸ್ಥಿತಿಯನ್ನು ಹಿಡಿತಕ್ಕೆ ತಂದರು.

ನಾಗಪುರದಲ್ಲಿ ಸೇರಿದ ಅ. ಭಾ. ವಕೀಲ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಜಪಾನದ ಯುದ್ಧಾಪರಾಧಿ ವಿಚಾರಣ ಮಂಡಲದಲ್ಲಿ ನ್ಯಾಯಾಧೀಶರಾಗಿದ್ದ ಡಾ. ರಾಧಾವಿನೋದ ಪಾಲರು ಸರಕಾರದ ಕಾರ್ಯಾಂಗದಿಂದ ನ್ಯಾಯಶಾಖೆಯನ್ನು ಬೇರ್ಪಡಿಸಬೇಕೆಂದು ಒತ್ತಾಯ ಮಾಡಿದರು.

ಬಿಹಾರ

ಸಮಾಜವಾದಿ ಮುಖಂಡ ಡಾ. ರಾಮಮನೋಹರ ಲೋಹಿಯಾರವರಿಗೆ ದಿಲ್ಲಿಯಲ್ಲಿ ಸಭೆ ಮೆರವಣಿಗೆಗಳ ನಿರ್ಬಂಧ ಮುರಿದುದಕ್ಕೆ ಆದ ೨ ತಿಂಗಳ ಶಿಕ್ಷೆಯ ವಿರುದ್ಧ ಪಾಟ್ನಾದಲ್ಲಿ ಸೇರಿಸಲಾದ ಲೋಹಿಯಾ ದಿನಾಚರಣೆಯ ಸಭೆಯಲ್ಲಿ ಮಾತಾಡುತ್ತ ಶ್ರೀ ಜಯಪ್ರಕಾಶ ನಾರಾಯಣರು ತಮಗೆ ಪಂ. ನೆಹರೂ ಅವರ ಮುಂದಾಳ್ತನದಲ್ಲಿ ಇದ್ದ ವಿಶ್ವಾಸ ಕಡಿಮೆಯಾಗತೊಡಗಿದೆಯೆಂದು ನುಡಿದರು.

ಹೊಸದಿಲ್ಲಿ

ಲೋಹಿಯಾ ದಿನ ನಿಮಿತ್ತ (ತಾ. ೨೬) ಹೊಸದಿಲ್ಲಿಯ ನೆಹರೂ ಪಾರ್ಕಿನಲ್ಲಿ ಸಭೆ ಸೇರಿದ ಸಾಮ್ಯವಾದಿಗಳು ನಿರ್ಬಂಧ ಮುರಿದಿದ್ದರೂ ಯಾರೂ ಬಂಧಿಸಲ್ಪಡಲಿಲ್ಲ.

ಕಾನಡಾದಿಂದ ಭಾರತಕ್ಕೆ ಬರಬೇಕಾದ ಬ್ರಾಡ್‌ಗೇಜ ರೇಲ್ವೆ ಎಂಜಿನುಗಳಲ್ಲಿ ೩೬ ಒಂದು ವಾರದೊಳಗೆ ಅಲ್ಲಿಂದ ಕಳಿಸಲ್ಪಡುವವೆಂದು ತಿಳಿಯುತ್ತದೆ.

ಸಾರಿಗೆ ಶಾಖೆಯ ಮುಂದೆ ತಮ್ಮ ಸಂಕಷ್ಟಗಳ ಬಗ್ಗೆ ಮತಪ್ರದರ್ಶನ ಮಾಡಲು ಅನಧಿಕೃತ ಮೆರವಣಿಗೆ ತೆಗೆದ ಬಗ್ಗೆ ಬಿ. ಬಿ. ಸಿ. ಐ. ಮತ್ತು ಪಶ್ಚಿಮ ಪಂಜಾಬ ರೇಲ್ವೆ ಕೂಲಿಕಾರರಲ್ಲಿ ೮ ಜನರು ಬಂಧಿಸಲ್ಪಟ್ಟರು.

ಖಾಸಗಿ ಕಾರು ಮತ್ತು ಮೋಟರ ಸೈಕಲ್ಲುಗಳ ಪೆಟ್ರೋಲ ಸೀದಾವನ್ನು ೧೦೦ ಕ್ಕೆ ೫೦ ರಷ್ಟು ಹೆಚ್ಚಿಸಲಾಗಿದೆಯೆಂದೂ ಪ್ರಾಂತ ಮತ್ತು ಸಂಸ್ಥಾನಗಳ ಪೆಟ್ರೋಲ್ ಕೋಟಾವನ್ನು ೧೦೦ ಕ್ಕೆ ೨೫ ರಷ್ಟು ಏರಿಸಿದೆಯೆಂದೂ ಸರಕಾರಿ ಪ್ರಕಟಣೆ ಹೊರಟಿದೆ.

ನಿರಾಶ್ರಿತರ ಆಸ್ತಿಪಾಸ್ತಿಗಳ ಸಂಬಂಧದಲ್ಲಿ ಹಿಂದುಸ್ತಾನ ಪಾಕಿಸ್ತಾನಗಳ ನಡುವೆ ಕರಾಚಿಯಲ್ಲಿ ನಡೆದ ಮಾತುಕತೆಗಳು ವಿಫಲವಾದವು. ನಿರಾಶ್ರಿತರ ಆಸ್ತಿವಿನಿಮಯ ಸರಕಾರಗಳ ಮುಖಾಂತರ ಆಗಬೇಕೆಂಬ ಹಿಂದೀ ಸೂಚನೆಗೆ ಪಾಕಿಸ್ತಾನ ಒಪ್ಪಲಿಲ್ಲ.

ಕೆನಡಾದಲ್ಲಿ ಈಗ ಭಾರತದ ಹೈಕಮಿಶನರರಾಗಿರುವ ಸರದಾರ ಹರಜಿತ ಸಿಂಗ ಮಲಿಕರನ್ನು ಫ್ರಾನ್ಸಿನಲ್ಲಿ ರಾಯಭಾರಿಯಾಗಿ ನೇಮಿಸಲಾಗಿದೆ. ಪ್ಯಾರಿಸ್ಸಿನಲ್ಲಿ ಭಾರತದ ಪ್ರತಿನಿಧಿಯಾದ ಶ್ರೀ ಪಿ. ಪಿ. ಪಿಳ್ಳೆಯವರು ಟೋಕಿಯೋದಲ್ಲಿ ಭಾರತದ ಶಿಷ್ಟಮಂಡಲದ ಧುರೀಣ ಮತ್ತು ವ್ಯಾಪಾರಿ ಮಂಡಲದಲ್ಲಿ ಪ್ರತಿನಿಧಿಗಳಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ರಾಷ್ಟ್ರಘಾತಕ ಚಟುವಟಿಕೆಗಳಿಗಾಗಿ ದಿಲ್ಲಿಯಿಂದ ಮುಹಮ್ಮದ ಸಿದ್ದಿಕ ಮತ್ತು ಅಬ್ದುಲ ಫಕೀರ ಎಂಬಿಬ್ಬರು ಮುಸ್ಲಿಮರನ್ನು ಗಡಿಪಾರು ಮಾಡಲಾಗಿದೆ.

ಘಟನಾ ಸಮಿತಿಯ ಮುಂದಿನ ಅಧಿವೇಶನ ಜುಲೈ ೩೦ ಕ್ಕೆ ಪ್ರಾರಂಭವಾಗುವದು.

ಹಿಂದೀ ಪ್ರಜಾರಾಜ್ಯದ ಪ್ರಥಮ ಅಧ್ಯಕ್ಷತ್ವದ ಗೌರವ ಒಬ್ಬ ಹರಿಜನನಿಗೆ ದೊರಕಬೇಕೆಂದು ಪಂಜಾಬ ಹರಿಜನ ಧುರೀಣ ಶ್ರೀ ಭಗತ ಅಮೀನಚಂದರು ಒಂದು ಹೇಳಿಕೆ ಹೊರಡಿಸಿದ್ದಾರೆ.

ಸಿಲೋನದಲ್ಲಿರುವ ಹಿಂದೀಯರು ದುಡಿದ ಹಣದಲ್ಲಿ ಒಂದಂಶವನ್ನು ಕೂಡ ಭಾರತದಲ್ಲಿರುವ ತಮ್ಮ ಆಶ್ರಿತರಿಗೆ ಕಳಿಸಬೇಕಾದರೆ ಸರಕಾರದಿಂದ ಒಡ್ಡಲ್ಪಟ್ಟಿರುವ ನಾನಾ ಅಡಚಣೆಗಳ ವಿರುದ್ಧ ಭಾರತ ಸರಕಾರ ಸಿಲೋನ ಸರಕಾರಕ್ಕೆ ದೂರಿಕೊಂಡಿದೆ.

ಯುಕ್ತಪ್ರಾಂತ

ಯುಕ್ತಪ್ರಾಂತದಲ್ಲಿ ಈಚೆಗೆ ಅತಿರೇಕ ಸೆಕೆ (೧೧೩ ಡಿಗ್ರಿ) ಯಿಂದ ಹಲವರು ಮರಣ ಹೊಂದಿದ ನಂತರ ಲಖನೋದಲ್ಲಿ ತಾ. ೨೫ ರಾತ್ರಿ ಎರಡು ತಾಸು ಭಾರೀಮಳೆಯಾಗಿ ಉಷ್ಣ ತಗ್ಗಿತು.

ಸಂಯುಕ್ತಪ್ರಾಂತಸರಕಾರಕ್ಕೆ ಕಳೆದ ಆರ್ಥಿಕ ವರ್ಷದಲ್ಲಿ ಮನೋರಂಜನ ಮತ್ತು ಜೂಜಿನ ಕರದಿಂದ ೫೦ ಲಕ್ಷದ ಅಂದಾಜು ಮೀರಿ ೭೦ ಲಕ್ಷ ರೂಪಾಯಿ ಉತ್ಪನ್ನವಾಗಿದೆ. ಹೆಚ್ಚು ಕುಶಲವಾದ ವಸೂಲಿ ಕ್ರಮದಿಂದ ಕರ ತಪ್ಪಿಸಿಕೊಳ್ಳುವವರಿಗೆ ಅವಕಾಶ ಸಿಗದ್ದೇ ಈ ಹೆಚ್ಚಳಕ್ಕೆ ಕಾರಣವಂತೆ.

೨೫೦೦ ವರ್ಷ ಹಿಂದಿನ ಕಾಜಿನ ಕಾರಖಾನೆಯ ಅವಶೇಷಗಳು ಬಸ್ತಿಯೆಂಬಲ್ಲಿ ದೊರಕಿವೆ. ಪ್ರಾಂತಿಕ ಪ್ರಾಚ್ಯವಸ್ತು ಸಂಗ್ರಹಾಲಯದ ಕ್ಯುರೇಟರ ಶ್ರೀ ಎಂ. ಎಂ. ನಾಯರರು ಇದನ್ನು ಶೋಧಿಸಿದರು. ಆ ಕಾಲದಲ್ಲಿಯೂ ಭಾರತದಲ್ಲಿ ನಾನಾ ವರ್ಣದ ಗಾಜು ಸಿದ್ಧವಾಗುತಿತ್ತೆಂದು ಇದರಿಂದ ವ್ಯಕ್ತವಾಗುತ್ತದೆ.

ಹಿಂದುಸ್ತಾನ ಸರಕಾರದ ಅಪ್ಪಣೆಯ ಮೇರೆಗೆ ಬಂಗಾಲ ರೆಗ್ಯುಲೇಶನಿನನ್ವಯ ಸ್ಥಾನಬದ್ಧತೆಯಲ್ಲಿರಿಸಲ್ಪಟ್ಟಿರುವ ಹಿಂದಿನ ರೇವಾ ಮಹಾರಾಜರ ಹೆಬಿಯಸ್ ಕಾರ್ಪಸ್ ಅರ್ಜಿಯನ್ನು ಅಲಹಾಬಾದ ಹೈಕೋರ್ಟು ಕಿತ್ತು ಹಾಕಿತು.

ಮದ್ರಾಸ

ಜಾಹೀರಾತು ಕರದಿಂದಯಾವ ಪ್ರಾಂತಕ್ಕೂ ಸದ್ಯಕ್ಕೆ ಹೆಚ್ಚು ಆದಾಯ ಬರುವಂತಿಲ್ಲವಾದುದರಿಂದ ಜ್ಞಾನಪ್ರಸಾರ ಸಾಧನಗಳಾದ ಪತ್ರಿಕೆಗಳ ಮೇಲೆ ಈ ಕರ ಹೊರಿಸುವದನ್ನು ತಡೆಹಿಡಿಯಬೇಕೆಂದು ಕೇಂದ್ರದಿಂದ ಪ್ರಾಂತಗಳಿಗೆ ಸೂಚನೆ ಬಂದಿದೆಯೆಂದು ವಿಶ್ವಸನೀಯವಾಗಿ ತಿಳಿಯುತ್ತದೆ.

ಮದ್ರಾಸ ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟು ಪರಿಶೀಲನ ಸಮಿತಿಗೆ ಒಪ್ಪಿಸಲ್ಪಟ್ಟ ಗ್ರಾಮ ಪಂಚಾಯತಿ ಮಸೂದೆಯಲ್ಲಿ ೫೦೦ ಮೇಲ್ಪಟ್ಟು ಜನವಸತಿಯುಳ್ಳ ಹಳ್ಳಿಗಳಿಗೆ ಪಂಚಾಯತ ರಾಜ್ಯವನ್ನು ಕೊಡಬೇಕೆಂದು ಸಂಕಲ್ಪಿಸಲಾಗಿದೆ. ವಯಸ್ಕ ಮತದಾನದಿಂದ ಆರಿಸಲ್ಪಟ್ಟ ಈ ಪಂಚಾಯತಿಗಳಿಗೆ ಗ್ರಾಮಾರೋಗ್ಯ, ನೀರಾವರಿ, ಶಿಕ್ಷಣಾದಿಗಳ ಜೊತೆಯೂ ವೃತ್ತಿ ಮೊದಲಾದ ತೆರಿಗೆ ಹೊರಿಸುವ ಅಧಿಕಾರವೂ ಇರುವದು. ಧೂಳಂದಾಯದಲ್ಲಿ ನೂರಕ್ಕೆ ೧೨½ ಅವಕ್ಕೆ ದೊರೆಯುವದು. ಅಧ್ಯಕ್ಷನು ಸದಸ್ಯರಿಂದ ಆರಿಸಲ್ಪಡದೆ ಪ್ರತ್ಯಕ್ಷವಾಗಿ ಹಳ್ಳಿಗರಿಂದ ಆರಿಸಲ್ಪಡುವನು.

ಮದ್ರಾಸಿನ ನಿವೃತ್ತ ಸರ್ಜನ್ ಜನರಲ್ಲರೂ ಹಿಂದೀ ಕ್ರೈಸ್ತ ಸಂಘದ ಅಧ್ಯಕ್ಷರೂ ಆದ ಡಾ. ಚೆರಿಯನ್ನರು ಕಾಂಗ್ರೆಸ್ ಸೇರಿ ಗ್ರಾಮಸೇವೆಯ ಹಂಬಲನ್ನು ವ್ಯಕ್ತಗೊಳಿಸಿದ್ದಾರೆ.

ರಾಮನಾಡು ಜಿಲ್ಲೆಯ ದೇವಕೋಟೆ ತಿರುಪತ್ತೂರುಗಳ ನಡುವೆ ಒಬ್ಬ ಕಮ್ಯುನಿಸ್ಟ ಕೈದಿಯನ್ನು ಮೋಟಾರಿನಲ್ಲಿ ಸಾಗಿಸುತಿದ್ದಾಗ ಪುಂಡರು ಅದರ ಮೇಲೆ ದಾಳಿಮಾಡಿ, ಪೋಲೀಸರ ಕಣ್ಣಿಗೆ ಖಾರಪುಡಿ ಎರಚಿ ಕೈದಿಯನ್ನು ಬಿಡಿಸಿಕೊಂಡೊಯ್ದರು.

ಕಾಣೆಯಾಗಿದ್ದ ಕಮ್ಯುನಿಸ್ಟನಿಗೆ ಆಶ್ರಯವಿತ್ತಿದ್ದ ರಾಯಪುರಂ (ಮದ್ರಾಸ ನಗರ)ನ ಕೆಲಸಗಾರನೊಬ್ಬನಿಗೆ ೩ ತಿಂಗಳ ಸಶ್ರಮಶಿಕ್ಷೆಯಾಗಿದೆ.

ಪಶ್ಚಿಮಬಂಗಾಲ

ಕಲಕತ್ತೆಯ ಹೈಕೋರ್ಟಿಗೆ ಎಂಬತ್ತು ಜನ ಸ್ಥಾನಬದ್ಧರು ಮಾಡಿಕೊಂಡ ಹೇಬಿಯಸ್ ಕಾರ್ಪಸ್ ಅರ್ಜಿಯ ಮೇಲೆ ನಿರ್ಣಯಕೊಡುತ್ತ ನ್ಯಾಯಾಧೀಶರು ೧೯೪೯ ಮಾರ್ಚ ೧೨ ರ ನಂತರ ಸುರಕ್ಷಿತತೆ ಕಾಯದೆಗೆ ಜೀವದಾನ ಮಾಡಿದ್ದು ಅಕ್ರಮವಾಗಿರುವದರಿಂದ ಅರ್ಜಿದಾರರಬಿಡುಗಡೆಯಾಗಬೇಕೆಂದು ವಿಧಿಸಿದರು. ಅಂದಿನಿಂದೀಚೆಗೆ ಹೀಗೆ ಬಂಧಿಸಲ್ಪಟ್ಟ ೫೦೦ ಜನರಿಗೆ ಅನ್ವಯಿಸುವ ಈ ತೀರ್ಪಿನ ನಂತರ ಬಂಗಾಲ ಸರಕಾರ ಅವರ ಮೇಲೆ ಬಂಗಾಲ ಕ್ರಿಮಿನಲ್ ಅಮೆಂಡ್‌ಮೆಂಟ್ ಕಾಯದೆಯನ್ವಯ ಹೊಸ ಸ್ಥಾನಬದ್ಧತೆಯ ಆಜ್ಞೆಗಳನ್ನು ಜಾರಿಮಾಡಿತು.

ಕಲಕತ್ತೆಯಲ್ಲಿ ಪತ್ರಿಕೋದ್ಯೋಗಿಗಳು ಏರ್ಪಡಿಸಿದ ಒಂದು ಸತ್ಕಾರ ಕೂಟದಲ್ಲಿ ಮಾತಾಡುತ್ತ ಭಾರತ ಸರಕಾರದ ಉದ್ಯಮ ಮಂತ್ರಿ ಡಾ. ಶ್ಯಾಮಪ್ರಸಾದ ಮುಖರ್ಜಿಯವರು, ಸರಕಾರವು ಬಂಡವಳಗಾರರ ಕೈಗೂಸಾಗಿದೆಯೆಂಬ ಆರೋಪವನ್ನು ಅಲ್ಲಗಳೆದರು. ಸರಕಾರದ ಧೋರಣೆ ಬಂಡವಳಗಾರರ ಟೀಕೆಗೂ ಗುರಿಯಾಗಿರುವದು ಈ ಆರೋಪದ ಪೊಳ್ಳುತನಕ್ಕೆ ಸಾಕ್ಷಿಯೊದಗುವದು.

ಕಲಕತ್ತೆಯ ಸೆರೆಮನೆಗಳಲ್ಲಿ ಕೆಲ ದಿನಗಳಿಂದ ಉಪವಾಸ ಮಾಡಿದ ಸ್ಥಾನಬದ್ಧ ಕಮ್ಯುನಿಸ್ಟ ಕೈದಿಗಳ ಸ್ಥಿತಿ ಚಿಂತಾಜನಕವಾಗಿಲ್ಲೆಂದು ಸರಕಾರದ ಪ್ರಕಟನೆ ಹೊರಟಿದೆ. ಒಬ್ಬ ಕೈದಿ ಮಾತ್ರ ಕಳೆದ ವಾರ ೨ ದಿನಗಳ ಉಪವಾಸದ ಪರಿಣಾಮವಾಗಿ ಮರಣ ಹೊಂದಿದ್ದನು.

ಪೂರ್ವಪಂಜಾಬ

ಜಲಂಧರದಲ್ಲಿ ಹಾಳುಬಿದ್ದ ಮಸೀದೆಯೊಂದರಲ್ಲಿ ಶಸ್ತ್ರಾಸ್ತ್ರ ಕಾರಖಾನೆ ನಡೆಸುತಿದ್ದ ೩ ಜನ ಶೀಖರು ಬಂಧಿಸಲ್ಪಟ್ಟಿದ್ದಾರೆ. ಪಿಸ್ತೂಲು ಮದ್ದು ಗುಂಡುಗಳು ದೊರೆತಿವೆ.

ಗಾಂಧೀ ಕೊಲೆ ಖಟ್ಲೆಯಲ್ಲಿ ಮರಣದಂಡನೆಗೊಳಗಾದ ಆಪ್ಟೆ ಗೋಡಸೆಯವರ ಪರವಾಗಿ ದಯಾಯಾಚನೆಅಥವಾ ಅಪೀಲಿನವ್ಯವಸ್ಥೆಗಾಗಿ ಹಿಂದು ಮಹಾಸಭೆಯ ಕಾರ್ಯದರ್ಶಿ ವಿ. ಜಿ. ದೇಶಪಾಂಡೆಯವರು ಅಂಬಾಲಾ ಸೆರೆಮನೆಯಲ್ಲಿ ಅವರನ್ನು ಕಂಡರು.

ಗಾಂಧಿ ಕೊಲೆ ಪ್ರಕರಣದಲ್ಲಿ ವಿಶೇಷ ನ್ಯಾಯಸ್ಥಾನದ ಶ್ರೀ ಆತ್ಮಚರಣರು ಮುಂಬಯಿ ಪೋಲೀಸರ ಅಕ್ಷಮತೆಯ ಬಗ್ಗೆ ಮಾಡಿದ ಟೀಕೆಗಳು ಅಕಾರಣವಾಗಿವೆಯೆಂದೂ ಶ್ರೀ ಮುರಾರಜಿಯವರು ತುಂಬ ದಕ್ಷತೆ ವಹಿಸಿದ್ದರೆಂದೂ ಅಪೀಲಿನ ತೀರ್ಪಿನಲ್ಲಿ ನ್ಯಾ. ಭಂಡಾರಿಯವರು ಹೇಳಿದ್ದಾರೆ.

ಲಂಚನಿರ್ಮೂಲನ ಪಡೆಯ ಪ್ರಗತಿ

ಮುಂಬಯಿ ಪ್ರಾಂತದ ಲಂಚ ನಿರ್ಮೂಲನ ಪಡೆಯವರು ಕಳೆದ ಮಾರ್ಚ ಹಾಗು ಏಪ್ರಿಲ ತಿಂಗಳಲ್ಲಿ ಲಂಚಗುಳಿತನ, ಕಳ್ಳಪೇಟೆ, ಪಾಸಿಗಿಂತ ಹೆಚ್ಚು ಜನರಿಗೆ ಊಟಕ್ಕೆ ಹಾಕಿದ್ದು, ಕಳ್ಳತನದಿಂದ ಶಸ್ತ್ರಾಸ್ತ್ರ ಮಾರಿದ್ದು, ಜೂಜಾಟದ ಅಡ್ಡೆ ನಡೆಸಿದ್ದು ಮೊದಲಾದ ಕೆಲವು ಪ್ರಕರಣಗಳನ್ನು ಕಂಡು ಹಿಡಿದು ಆರೋಪಿಗಳನ್ನು ವಿಚಾರಣೆಗೆ ಗುರಿಮಾಡಿದ್ದರಲ್ಲಿ ಕಾಯದೆ ಪ್ರಕಾರ ಕ್ರಮ ಕೈಕೊಳ್ಳಲ್ಪಟ್ಟದ್ದು ಶಿಕ್ಷೆಗೊಳಗಾದವರ ಹೆಸರು ಮೊದಲಾದ ವಿವರಗಳನ್ನು ಕೆಳಗೆ ಕೊಟ್ಟಿದೆ.

೧ ನಾರಾಯಣ ಲಕ್ಷ್ಮಣ ದೇಶಪಾಂಡೆ, ಹಿಂದಿನ ಹೆಡ್ ಕಾನಸ್ಟೇಬಲ ಸೊಲ್ಲಾಪುರ ನಗರ, ೬ ತಿಂಗಳ ಶಿಕ್ಷೆ ೫೦ ರೂ ದಂಡ (ಲಂಚ ತೆಗೆದುಕೊಂಡಿದ್ದು).

೨ ವ್ಹಿ ಆರ್ ಪೂರ್ಣಾಲೆ, ಹಿಂದಿನ, ಸ್ಟೇಶನ ಮಾಸ್ತರ ಫಲಟಣ ೯ ತಿಂಗಳ ಶಿಕ್ಷೆ ೫೦೦ ರೂ. ದಂಡ (ಲಂಚ ತೆಗೆದುಕೊಂಡಿದ್ದು).

೩ ಅನಂತರಾವ ಜಿ ಅಗ್ನಿಹೋತ್ರಿ, ಹಿಂದಿನ ಲಗೇಜ ಕ್ಲಾರ್ಕ ಅಹಮ್ಮದಾಬಾದ ೩ ತಿಂಗಳ ಶಿಕ್ಷೆ ೫೦೦ ರೂ ದಂಡ (ಲಂಚ ತೆಗೆದುಕೊಂಡಿದ್ದು.)

೪ ಮಕದುಮಸಾಬ ದಾದೇಸಾಬ ಮುಲ್ಲಾ, ದಾಸ್ತಿಕೊಪ್ಪ ಜಿಲ್ಲಾ ಬೆಳಗಾವ ೨೦೦ ದಂಡ ದಂಡ (ಶಸ್ತ್ರಾಸ್ತ್ರ ಕಾಯದೆ ಉಲ್ಲಂಘಿಸಿದ್ದು.)

೫ ಗ ಬಿ ದೇಶಪಾಂಡೆ ಹಾಗು ಹಾಗು ವ್ಹಿ ಬಿ ದೇಶಪಾಂಡೆ ಬೆಳಗಾವ, ಕ್ರಮವಾಗಿ ೧೦೦ ಹಾಗು ೧೫೦೦ ರೂ. ದಂಡ (ಪೆಟ್ರೋಲ ಮಾರಾಟದಲ್ಲಿ ಕಳ್ಳಪೇಟೆ).

೬ ಕಾಸೀಮಸಾಬ ಸುಲೇಮಾನಸೇಠ ಹಾಗು ಸರಫುದ್ದೀನ ದುಹಮ್ಮದಸಾಬ ಗೌಸ ಬೆಳಗಾವ ೨೦೦ ಹಾಗು ೫೦ ರೂ. ದಂಡ (ಜೂಜಿನ ಅಪರಾಧ).

೭ ಷಡಕ್ಷರಯ್ಯ ಎಚ್. ಹಿರೇಮಠ ಹುಬ್ಬಳ್ಳಿ ೧ ದಿವಸ ಶಿಕ್ಷೆ ಹಾಗು ೪೦ ರೂ. ದಂಡ(ಜಿಮಣಿ ಎಣ್ಣೆಯಲ್ಲಿ ಕಳ್ಳಪೇಟೆ)

೮ ಎಸ್ ವ್ಹಿ ಓಕಳೆ ಹುಬ್ಬಳ್ಳಿ ೫೦೦ ರೂ. ದಂಡ (೨೪ ಕ್ಕಿಂತ ಹೆಚ್ಚು ಜನರಿಗೆ ಊಟಕ್ಕೆ ಹಾಕಿದ್ದು)

೯ ಹಣಮಂತಪ್ಪ ಪದ್ಮಾಜಿ ಧಾರವಾಡ ೫೦ ರೂ. ದಂಡ (ಅಬಕಾರಿ ಗುನ್ಹೆ)

೧೦ ಹುಬ್ಬಳ್ಳಿಯ ಇಬ್ಬರು ಪೋಲೀಸ ಕಾನಸ್ಟೇಬಲರು ಲಂಚದ ಆರೋಪದಿಂದ ಕೆಲಸದಿಂದ ತಳ್ಳಲ್ಪಟ್ಟಿರುವರು.

ಸಂಸ್ಥಾನಗಳು

ಹೈದರಾಬಾದ ರಜಾಕಾರ ಮುಂದಾಳಾದ ಸಯ್ಯದ ಕಾಸೀಮ ರಜವಿಯ ವಿಚಾರಣೆಗಾಗಿ ಮದ್ರಾಸಿನ ಜೆ. ಎ. ಪಿಂಟೊ, ಸಿಕಂದರಾಬಾದಿನ ನಿವೃತ್ತ ಸೆಶನ್ಸ್ ಜಜ್ ಶ್ರೀ. ಜಗನ್ನಾಥ ರಾವ್, ಮತ್ತು ಮೇದಕದ ಸೆಶನ್ಸ್ ಜಜ್ ಶ್ರೀ. ಅಹಮದ ಅಲಿಖಾನ್ ಇವರಿಂದೊಡಗೂಡಿದ ವಿಶೇಷ ನ್ಯಾಯಾಲಯ ನೇಮಿಸಲ್ಪಟ್ಟಿದೆ. "ಇಮ್ರೋಜ್" ಪತ್ರಿಕೆಯ ಸಂಪಾದಕರಾದ ಶೋಯಬುಲ್ಲಾಖಾನರ ಕೊಲೆ, ಮತ್ತು ಇತರ ಕೊಲೆ-ದರೋಡೆಗಳ ಆರೋಪಗಳು ರಜವಿಯ ಮೇಲೆ ಇವೆ.

ನಲಗೊಂಡ ಜಿಲ್ಲೆಯಲ್ಲಿ ಈಗ ಕಮ್ಯುನಿಸ್ಟರ ಪ್ರಭಾವ ಎಷ್ಟೋ ತಗ್ಗಿದೆಯೆಂದೂ ಜಮೀನುದಾರಿ ನಿರ್ಮೂಲನದಿಂದ ಸಂಸ್ಥಾನದಲ್ಲಿ ರೈತರ ಸ್ಥಿತಿ ಇನ್ನೂ ಸುಧಾರಿಸಲಿದೆಯೆಂದೂ ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರು ಒಂದು ಪ್ರಕಟನೆ ಹೊರಡಿಸಿದ್ದಾರೆ. ಕಮ್ಯುನಿಸ್ಟರು ಕಳೆದ ಆರುತಿಂಗಳಲ್ಲಿ ೧೧೦ ಕಾಂಗ್ರೆಸ್ಸಿಗರ ಕೊಲೆಮಾಡಿದರೆಂದು ಅವರು ಒಂದು ಭಾಷಣದಲ್ಲಿ ಹೇಳಿದರು.

ಕಾಶ್ಮೀರದಲ್ಲಿ ಹೊಸದಾಗಿ ರಚಿಸಲ್ಪಟ್ಟಿರುವ ಪಠ್ಯ ಪುಸ್ತಕಗಳ ೧ ಲಕ್ಷ ಪ್ರತಿಗಳು ಈಗಾಗಲೆ ಮುದ್ರಿತವಾಗಿದ್ದು ಇನ್ನೂ ೨ ಲಕ್ಷ ಪ್ರತಿಗಳು ಮುದ್ರಿಸಲ್ಪಡಲಿವೆ. ಇದಕ್ಕಾಗಿ ಭಾರತ ಸರಕಾರ ೪೮ ಸಾವಿರ ಟನ್ ಕಾಗದ ಪೂರೈಸಿದೆ.

ಹೈದರಾಬಾದ ನಿಜಾಮರು ತಮ್ಮ ಬಂಧುಬಳಗದವರ ಭಾವೀ ಸುರಕ್ಷಿತತೆಗಾಗಿ ತಮ್ಮ ಅಪಾರ ಸಂಪತ್ತಿನಿಂದ ಅನೇಕ ಕೋಟಿ ರೂಪಾಯಿಗಳನು ವಿನಿಯೋಗಿಸಿ ಟ್ರಸ್ಟುಗಳನ್ನು ನಿರ್ಮಿಸುತ್ತಿದ್ದಾರೆಂದೂ ಅವರ ತಮ್ಮ, ಮಕ್ಕಳು, ಹೆಂಡಂದಿರೇ ಮೊದಲಾದವರಿಗೆ ಪ್ರತಿಪ್ರತ್ಯೇಕವಾಗಿ ಸಾವಿರಗಟ್ಟಲೆ ರೂಪಾಯಿ ಉತ್ಪನ್ನ ಪ್ರತಿತಿಂಗಳೂ ಬರುವಂತೆ ಮಾಡುವದು ಇದರ ಉದ್ದೇಶವೆಂದೂ ತಿಳಿಯುತ್ತದೆ.

ವೈಜ್ಞಾನಿಕ ಪರಿಭಾಷೆಯ ಬಗ್ಗೆ ಮುಂಬಯಿ ವಿಶ್ವವಿದ್ಯಾನಿಲಯದ ಗೊತ್ತುವಳಿ

"ಭಾರತದಲ್ಲಿ ವೈಜ್ಞಾನಿಕ ಪರಿಭಾಷೆ" ಎಂಬ ತನ್ನ ಪ್ರಬಂಧದ ಮೂಲಕ ನಮ್ಮ ಭಾಷೆಗಳಲ್ಲಿಯ ವೈಜ್ಞಾನಿಕ ಪರಿಭಾಷೆಯ ಬಗ್ಗೆ ಮುಂಬಯಿ ವಿಶ್ವವಿದ್ಯಾನಿಲಯವು ಸ್ವೀಕರಿಸಿದ ಗೊತ್ತುವಳಿಯನ್ನು ಜನತೆಯ ಇದಿರಿಟ್ಟು ಅದರ ಲಕ್ಷ್ಯವನ್ನು ಸೆಳೆದದ್ದಕ್ಕಾಗಿ ಶ್ರೀ ಪಿ. ಜಿ. ಶಾ ಅವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಬೇಕಾಗಿದೆ. ಆ ಪ್ರಬಂಧವು ೧೩-೩-೪೯ರ "ಹರಿಜನ" ದಲ್ಲಿ ಪ್ರಕಟವಾಗಿದೆ. ಗೊತ್ತುವಳಿಗೆ ಸಂಬಂಧಪಟ್ಟ ಭಾಗ ಈ ಕೆಳಗಿನಂತಿದೆ:

"ಎಲ್ಲ ಆಧುನಿಕ ಭಾರತೀಯ ಭಾಷೆಗಳಲ್ಲಿ ಮೆಟ್ರಿಕ್ಯುಲೇಶನ್ ವಿಜ್ಞಾನವಿಷಯಗಳಿಗೆ ಸರ್ವಸಾಧಾರಣವಾದ ವೈಜ್ಞಾನಿಕ ಪರಿಭಾಷೆಯಿರಬೇಕು ಮತ್ತು ತನ್ನ ದೊಡ್ಡ ಇಂಗ್ಲಿಷ್-ಇಂಡಿಯನ್ ಶಬ್ದಕೋಶದಲ್ಲಿ ಡಾ. ರಘುವೀರರು ರಚಿಸಿದ ವಿಜ್ಞಾನ ಪರಿಭಾಷಾ ಪದ್ಧತಿಯನ್ನೇ ಬಳಕೆಗೆ ತರಬೇಕು."

ಪ್ರಸ್ತುತ ಗೊತ್ತುವಳಿಯು ನಾನು ವಿಶ್ವವಿದ್ಯಾನಿಲಯಕ್ಕೆ ಅದರ ಬಗ್ಗೆ ಬರೆದ ಕಾಗದದ ದೆಸೆಯಿಂದ ಅಸ್ತಿತ್ವಕ್ಕೆ ಬಂದದ್ದಾದರೂ ಆ ಬಗ್ಗೆ ವಿಶ್ವವಿದ್ಯಾನಿಲಯವು ನನಗೆ ಯಾವ ಸಮಾಚಾರವನ್ನೂ ತಿಳಿಸಲಿಲ್ಲ. ಶ್ರೀ ಪಿ. ಜಿ. ಶಾ ಅವರ ಪ್ರಬಂಧವನ್ನು ಓದುವ ವರೆಗೆ ನನಗೆ ಆ ಯಾವ ಸಂಗತಿಯೂ ತಿಳಿದಿರಲಿಲ್ಲ.

ಗುಜರಾತ್ ವಿದ್ಯಾಪೀಠವು "ವಿಜ್ಞಾನನೀ ಪರಿಭಾಷಾ" ಎಂಬೊಂದು ಪುಸ್ತಕವನ್ನು ಪ್ರಕಟಿಸಿದೆ. ಅದರ ಹೆಸರೇ ವಿಷಯಸೂಚಿಯಾಗಿದೆ. ಗ್ರಂಥಕ್ಕೆ ಆಧಾರಭೂತವಾದ ಅಂಶಗಳನ್ನು ಉಪೋದ್ಘಾತದಲ್ಲಿ ಕೊಡಲಾಗಿದೆ. ಹಾಗೆ ರಚಿಸಿದ ಪರಿಭಾಷೆಯನ್ನು ವಿಜ್ಞಾನದ ಉಪಾಧ್ಯಾಯರೂ ಪಠ್ಯಪುಸ್ತಕಕಾರರೂ ಸ್ವೀಕರಿಸಿದ್ದಾರೆ; ಅಲ್ಲದೆ, ಇದಿಗುಜರಾತಿನಲ್ಲೇ ಅದು ಒಟ್ಟಿನಲ್ಲಿ ಸ್ವಾಗತಿಸಲ್ಪಟ್ಟಿದೆ.

ಈ ಪ್ರತಿಕ್ರಿಯೆ ಮತ್ತು ಸಾರ್ವತ್ರಿಕ ಸ್ವೀಕಾರಗಳಿಂದ ಪ್ರೋತ್ಸಾಹ ಪಡೆದು ಅದರ ವಿಷಯವಾಗಿ ನಾನು ಮುಂಬಯಿ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರಿಗೆಬರೆದೆ(೨೮-೩-೧೯೪೬); ಮತ್ತು ಅದನ್ನು ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಸ್ವೀಕರಿಸಬೇಕೆಂದೂ ಯುಕ್ತ ಅಧಿಕಾರಿಗಳೆದುರು ಅದನ್ನಿಡಬೇಕೆಂದೂ ಕೇಳಿಕೊಂಡೆ. ನನಗೆ ತಿಳಿಸದಿದ್ದರೂ ಇದನ್ನು ಅವರು ಮಾಡಿರಬೇಕು.

ಗುಜರಾತಿ ಮತ್ತು ಇತರ ಭಾಷೆಗಳಲ್ಲಿರುವ ವೈಜ್ಞಾನಿಕ ಪರಿಭಾಷೆಯ ವಿಷಯದಲ್ಲಿ ಸಾಕ್ಷ ವಿಚಾರ ಕಡಿಮೆಯಿದೆಯೆಂಬುದು ಗೊತ್ತುವಳಿಯಿಂದ ತಿಳಿದುಬರುವುದೆಂದು ಹೇಳಬೇಕಾಗಿದೆ. ಅದು ಅತ್ಯಂತ ಸಂಬಂಧಪಟ್ಟ ಮತ್ತು ಮೂಲಭೂತ,ಅಂಶವಾದ ಪ್ರಾಥಮಿಕ,ಮಾಧ್ಯಮಿಕ ಅಥವಾ ಪ್ರೌಢ ವಿದ್ಯಾಭ್ಯಾಸಪಡೆಯುತ್ತಿರುವವರ ಅಗತ್ಯಗಳನ್ನು ಗಣಿಸುವುದಿಲ್ಲ ಮತ್ತು ವಿಜ್ಞಾನದ ಪದ್ಧತಿಪೂರ್ಣ ಅಭ್ಯಾಸವಿಲ್ಲದೆ ವೈಜ್ಞಾನಿಕ ಪದಾರ್ಥಗಳ ಕೊಡುಕೊಳುಗಳಲ್ಲಿ ನಿರತರಾದ ಅನೇಕ ವ್ಯಾಪಾರಿಗಳು, ಗಿರಾಕಿಗಳು ಅಥವಾ ಕಸಬುದಾರರನ್ನು ಅದು ಲೆಕ್ಕಿಸುವುದಿಲ್ಲ. ಇಂಗ್ಲಿಷ್ ಭಾಷೆಯಲ್ಲಿಯೂ ಅಭಿಜಾತ ಭಾಷೆಯಲ್ಲಿಯೂ ವಿಚಾರ ಮಾಡುವ ಮನುಷ್ಯರು ಆ ಗೊತ್ತುವಳಿಯಲ್ಲಿ ತಮ್ಮ ಲಕ್ಷ್ಯವನ್ನು ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕೆ ಮಾತ್ರ ಕೇಂದ್ರೀಕರಿಸಿದ್ದಾರೆ. ಅದು ತರವಲ್ಲ. ಅವರೀಗ ತಮ್ಮ ವ್ಯವಹಾರವನ್ನೆಲ್ಲ ಇಂಗ್ಲಿಷ್ ಭಾಷೆಯ ಮೂಲಕ ಸಾಗಿಸುತ್ತಿದ್ದಾರೆ. ಮಾಧ್ಯಮವನ್ನು ಬದಲಿಸಿದ ಗತ್ಯಂತರವಿಲ್ಲ ಎಂದು ಅವರೀಗ ಅರಿತಿದ್ದಾರೆ; ಅವರು ಪೂರ ದಡ್ಡತನದಿಂದ ತಾತ್ಕಾಲಿಕ ಆಂಗ್ಲಭಾಷೆಯ ಸ್ಥಾನದಲ್ಲಿ ಸುಖವಾಗಿ ಇಡಿ ಭಾರತಕ್ಕೆ ಸರ್ವಸಾಧಾರಣವಾದ ಪರಿಭಾಷೆಯನ್ನು ನಿರ್ಮಿಸಿಬಿಡಬಹುದೆಂದು ಬಗೆಯುತ್ತಾರೆ. ಡಾ. ರಘುವೀರರಿಂದ ಇದನ್ನು ಕಲಿತು ಅವರು ಶಾಲೆಗಳಲ್ಲಿ ಅದು ನಡೆಯಬೇಕೆಂದು ಆಜ್ಞಾಪಿಸಿದರು. ಅದು ವ್ಯಾಕರಣಪದದಲ್ಲಿರುವುದು ಅಥವಾ ಹೊರಗಿನ ಪ್ರಪಂಚದಲ್ಲಿ ಕಾಲಿಟ್ಟೊಡನೆಯೇ ಅದನ್ನು ಮರೆತು ಬಿಡಬೇಕಾಗಿ ಬರುವಂಥ ಪಂಡಿತರನ್ನು ಅದು ನಿರ್ಮಿಸಬಹುದು ಎಂದು ನನ್ನ ನಂಬಿಕೆ.

ಸಾಧ್ಯವಾದಷ್ಟು ಮಟ್ಟಿಗೆ ನಾವು ಪರಿಭಾಷೈಕ್ಯವನ್ನು ಸಾಧಿಸಿಕೊಳ್ಳಬೇಕೆಂಬುದಕ್ಕೆ ನಾನು ಒಪ್ಪುತ್ತೇನೆ; ಅಷ್ಟನ್ನು ಗೊತ್ತುವಳಿ ಸರಿಯಾಗಿ ಹೇಳಿದೆ. ಆದರೆ ಅದಕ್ಕೆ ಸ್ಪಷ್ಟವಾದ, ಸ್ವತಃಸಿದ್ಧವಾದ ಗಡಿಮಿತಿಗಳಿವೆ. ಸರ್ವತ್ರ ಸಾರೂಪ್ಯವಿರಬೇಕೆಂಬ ಅಪೇಕ್ಷೆಯ ಭರದಲ್ಲಿ ಈ ಗಡಿಮಿತಿಗಳನ್ನು ಮರೆತುಬಿಡಲಾಗಿದೆ. ಕೆಲ ಮೂಲಮಿತಿಗಳು ಇಂತಿವೆ:

ಮೊದಲು, ಭಾಷೆಯೆಂದರೆ ಒಂದು ಬಗೆಯ ವ್ಯಾಕರಣಬದ್ಧವಾದಂತೆ ಪರಸ್ಪರ ಅಂಟಿಕೊಂಡ ಶಬ್ದರಾಶಿಯಲ್ಲ, ಅದು ಒಂದು ಜನಾಂಗದ ಜೀವನ ಮತ್ತು ವಿಚಾರಗಳ ಪ್ರಕಾಶಕವಾಗಿದೆ. ಜನರ ಮನಸ್ಸು ಮತ್ತು ಅಗತ್ಯಗಳು ಅವರ ಮಾತಿನಲ್ಲಿ ರೂಪುವಡೆಯುತ್ತವೆ. ಎರಡನೆಯದಾಗಿ ಒಂದು ಜೀವದ್ಭಾಷೆಯೆಂದರೆ ಒಂದು ಇಡಿ ಜನಾಂಗದ ಒಟ್ಟು ಪ್ರಯತ್ನದ ಫಲವಲ್ಲದೆ, ಕೇವಲ ಒಂದು ಚಿಕ್ಕ ಗುಂಪು ಅಥವಾ ವರ್ಗದ ಪ್ರಯತ್ನದ ಫಲವಲ್ಲ. ಹಾಗೆ ಒಂದು ಚಿಕ್ಕ ಗುಂಪಿನದಾದರೆ ಅದು ಎಷ್ಟೇ ಉತ್ತಮವಾದುದಿದ್ದರೂ ಕಲಿತ ಕೆಲವರ ಖಟಾಟೋಪವಷ್ಟೇ ಆಗಬಹುದು. ಹಾಗೆ ಆದರೆ ಮಾತ್ರ ಜನರು ಸಂಸ್ಕೃತಿಹಾನಿಗೊಳಗಾಗುವರು, ಮುಂಬರಿಯದೆ, ಪ್ರಗತಿಹೊಂದದೆ ನಿಲ್ಲುವರು.

ಡಾ. ರಘುವೀರರಂತಹ ಮತ್ತು ಅವರಂತೆಯೇ ವಿಚಾರಮಾಡುವ ಪಂಡಿತರು ಈ ಸರಳ ಸಂಗತಿಯನ್ನು ಕಡೆಗಣಿಸುತ್ತಾರೆ. ಪರಿಭಾಷಾ ರಚನೆಯೆಂಬುದು ತತ್ವವಿಚಾರದವನ ಅಥವಾ ಭಾಷಾಶಾಸ್ತ್ರಕಾರನ ಕಚೇರಿಯಲ್ಲಿ ಮಾಡತಕ್ಕ ಕರ್ತವ್ಯಎಂದುಅವರತಿಳಿವಳಿಕೆ.ಅವರುಯಾವುದಾದರೊಂದು ರೀತಿಯಿಂದ ಸಮಂಜಸವಾಗುವ ಪರಿಭಾಷಾಪದಗಳನ್ನು ಯೋಜಿಸುತ್ತಾರೆ; ಆದರೆ ಅವು ಪ್ರಾಥಮಿಕ ಸತ್ಯತೆಯ ನಿಕಷಕ್ಕೆ ನಿಲ್ಲುವ ಬಗೆಯಿಂದ ಯೋಜಿಸಿದವೆನಿಸಲಾರವು. ಅವರು ಸಾಮಾನ್ಯನ ಭಾಷೆಯ ಹಕ್ಕುಗಳನ್ನು ಬದಿಗೊಟ್ಟು ಅವನ ಜೀವದ್ಭಾಷೆಯ ಕ್ಷೇತ್ರದಲ್ಲಿ ವಿಲಕ್ಷಣವಾದ, ವಿಜಾತೀಯವಾದ ಪದಗಳನ್ನು ನೆಡಲು ಯತ್ನಿಸುತ್ತಾರೆ. ಉದಾಹರಣೆ ಕೊಡುವುದಾದರೆ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಉರ್ದುಗ್ರಂಥವನ್ನು ತೆಗೆದುಕೊಳ್ಳಬಹುದು.

ಮುಖ್ಯವಾಗಿ ಬುಡದಿಂದ ಪ್ರಾರಂರಂಭಿಸಬೇಕೆಂಬುದನ್ನು ನಾವು ಗಮನಿಸಬೇಕು. ಇದು ಸ್ವಾಭಾವಿಕವೂ ಅವಶ್ಯಕವೂ ಆಗಿದೆ. ಅಂದರೆ, ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ವಿದ್ಯಾಭ್ಯಾಸದ ಅವಶ್ಯಕತೆಗಳಿಗೆ ಅಗ್ರಸ್ಥಾನ ಕೊಡಬೇಕು ಎಂದು. ಇದಕ್ಕಾಗಿ ಆಯ್ದುಕೊಂಬ ಪದಗಳು ವಿಶಿಷ್ಟ ಭಾಷೆಗೆ ವಿಶಿಷ್ಟವಾಗಿರಬೇಕು. ಬಹುಪರಿಚಯದ ಆಧಾರದ ಮೇಲೆ ಅವನ್ನು ಉಳಿಸಿಕೊಳ್ಳುವುದು ಮುಖ್ಯವಾದುದು; ಅದರಿಂದ ಸಾರ್ವಜನಿಕ ಮತ್ತು ಪ್ರಾಥಮಿಕ ಶಿಕ್ಷಣದ ಹಿತ ಸಂವರ್ಧನವಾಗುತ್ತದೆ. ಆದುದರಿಂದ ಈ ವಿಧದ ರಾಷ್ಟ್ರೀಯ ವಿದ್ಯಾಭ್ಯಾಸಕ್ಕೆ ಹಾನಿಯೊಡ್ಡದೆ ಸಂಪೂರ್ಣ ಸರ್ವಸಾಧಾರಣವಾದ ಅಖಿಲ ಭಾರತೀಯ ಪರಿಭಾಷಾಪದಗಳನ್ನು ರಚಿಸಲು ಸಾಧ್ಯವಿಲ್ಲ. ನಮ್ಮಲ್ಲಿಯ ಭಾಷೆಗಳಲ್ಲಿ ಮೈತ್ರಿ ಹೆಚ್ಚಿರುವುದರಿಂದ ಅವುಗಳಲ್ಲಿಯ ಬಹಳ ಶಬ್ದಗಳು ಸದೃಶ ಲಕ್ಷಣಗಳುಳ್ಳವಾಗಿರಬಹುದಾಗಿದೆ. ಅದು ನಿಜವಾಗಿಯೂ ಸ್ವಾಗತಾರ್ಹವಾಗಿದೆ. ಆದರೆ ನಾವು ಏಕರೂಪತೆಯನ್ನೊಂದು ಆರಾಧ್ಯವಿಗ್ರಹವನ್ನಾಗಿ ಸ್ವೀಕರಿಸಲಾರೆವು.

ಅಂತಾರಾಷ್ಟ್ರೀಯ ಪರಿಭಾಷಾಪದ್ಧತಿಯ ಹೆಸರನ್ನು ಹಿಡಿದು ಸಾಗಿದ ಕುಣಿವಾಟ ಬಹಳವಾಗಿದೆ. ಅದು ನಿಜವಾಗಿಯೂ ಯುರೋಪಿಯನ್ನರದು; ನಮ್ಮ ಪ್ರಸಂಗದಲ್ಲಿ ಅದು ಇಂಗ್ಲಿಷ್. ವಿವಿಧ ಯುರೋಪಿಯನ್ ಭಾಷೆಗಳಲ್ಲಿಯ ಪರಿಭಾಷೆಗಳು ಒಂದೇ ಆಗಿಲ್ಲವೆಂಬುದನ್ನು ಗಮನಿಸಬೇಕು. ಅವು ತಮ್ಮ ಲ್ಯಾಟಿನ್ ಜನ್ಮತ್ವದಿಂದ ಒಂದನ್ನೊಂದು ಹೋಲುತ್ತಿರಬಹುದು. ಅದರೂ ಅವು ನಮ್ಮ ಮಿತ್ರ ಭಾಷೆಗಳಾದ ಹಿಂದುಸ್ತಾನಿ, ಗುಜರಾತಿ, ಮರಾಠಿ ಮೊದಲಾದವುಗಳಲ್ಲಿರುವಂತೆ ವಿವರಗಳಲ್ಲಿ ಪರಸ್ಪರ ವ್ಯತ್ಯಸ್ತವಾಗಿವೆ. (ನಾನಿಲ್ಲಿ ಸಾಮಾನ್ಯವಾಗಿ ಸರ್ವಸಾಧಾರಣವಾಗಿರುವ ಚಿಹ್ನ, ಪ್ರತೀಕಾದಿಗಳನ್ನು ಹೇಳುತ್ತಿಲ್ಲ.) ವಿಜ್ಞಾನವು ಹೊಸ ವಿಷಯವಾಗಿರುವುದರಿಂದ ನಮ್ಮ ಎಲ್ಲ ಭಾಷೆಗಳೂ ಹೊರಗಿಂದ ಪದಗಳನ್ನು ಎರವು ತೆಗೆದುಕೊಳ್ಳಬೇಕಾಗಿದೆ. ಅದು ಸರಿ. ಅದರಿಂದ ನಮ್ಮ ಭಾಷೆಗಳು ಸಮೃದ್ಧವಾಗುತ್ತವೆ. ಆದರೆ ನಮ್ಮ ಭಾಷೆಗಳ ನಾದ ಮತ್ತು ಬಂಧಗಳನ್ನು ಅವು ಕೆಡಿಸದಿರುವಂತೆ ಎಚ್ಚರಿಕೆಯಿಂದ ಎರವು ತೆಗೆದುಕೊಳ್ಳಬೇಕು.

ಗುಜರಾತ್ ವಿದ್ಯಾಪೀಠ ಪ್ರಕಟಿಸಿದ ಪುಸ್ತಕದಲ್ಲಿ ಮೇಲಿನ ಎಲ್ಲ ಅಂಶಗಳಿಗೂ ಮನ್ನಣೆ ಕೊಡಲಾಗಿದೆ. ಮುಂಬಯಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಅದನ್ನೆಲ್ಲ ನೋಡಿದಂತೆ ಕಾಣುವುದಿಲ್ಲ. ೧೯೪೦ರ ಕೇಂದ್ರ ವೈಜ್ಞಾನಿಕ ಸೂಚನಾ ಸಮಿತಿ ನಿರ್ಣಯಿಸಿದ ನಿಗಮನಗಳನ್ನು ಅವರು ಕಂಡಂತೆ ತೋರುವುದಿಲ್ಲ. ಸಮಿತಿಯ ವರದಿಯಿಂದ ನಿಗಮನಗಳನ್ನು ನಾನೀಗ ಉದ್ಧರಿಸುತ್ತೇನೆ.

"ಆದುದರಿಂದ ಭಾರತೀಯ ವೈಜ್ಞಾನಿಕ ಪರಿಭಾಷೆ ಹೀಗಿರಬೇಕು—

"(೧) ಆಂಗ್ಲರೂಪದಲ್ಲಿರುವ ಅಂತಾರಾಷ್ಟ್ರೀಯ ಪರಿಭಾಷಾಪದ್ಧತಿಯನ್ನು ಇಡಿ ಭಾರತದಲ್ಲಿ ಬಳಸತಕ್ಕದ್ದು.

"(೨) ಹಿಂದುಸ್ತಾನಿ ಅಥವಾ ಆಯಾ ಪ್ರದೇಶದ ದ್ರಾವಿಡ ಭಾಷೆಗಳಿಂದ ತೆಗೆದುಕೊಂಡ ಪದಗಳನ್ನು ಸ್ವೀಕರಿಸತಕ್ಕದ್ದು; ಹಾಗೆ ಮಾಡುವಲ್ಲಿ ಸಂಸ್ಕೃತ, ಪರ್ಶಿಯನ್ ಅಥವಾ ಇತರ ಅಭಿಜಾತ್ಯಭಾಷೆಗಳ ಕಠಿನ ಪದಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಬಿಡಬೇಕು;

"(೩) ವಿಶಿಷ್ಟಭಾಷೆಗಳಿಗೆ ವಿಶಿಷ್ಟವಾಗಿರುವ ಕೆಲ ಪದಗಳನ್ನು ಅವುಗಳ ಸುಪರಿಚಯದ ದೆಸೆಯಿಂದ ಸಾರ್ವಜನಿಕ ಶಿಕ್ಷಣದ ದೃಷ್ಟಿಯಿಂದ ಉಳಿಸಿಕೊಳ್ಳಬೇಕಾಗಬಹುದು. ವಿದ್ಯಾಭ್ಯಾಸದ ಮೇಲಿನ ಅವಸ್ಥೆಗಳಲ್ಲಿ ಒಂದನೆಯ ಮತ್ತು ಎರಡನೆಯ ವರ್ಗದಲ್ಲಿರುವುವುಗಳನ್ನು ಕ್ರಮೇಣ ಮೂರನೆಯ ವರ್ಗದವುಗಳ ಬದಲಾಗಿ ಬಳಸಬಹುದು."

ನನಗೆ ಗೊತ್ತಿದ್ದಮಟ್ಟಿಗೆ, ಈ ನಿಗಮನಗಳನ್ನು ಈ ವರೆಗೆ ಸ್ವೀಕರಿಸಲಾಗಿದೆ. ಮುಂಬಯಿ ವಿಶ್ವವಿದ್ಯಾನಿಲಯವು ಪುನಃ ಈ ಪ್ರಶ್ನೆಯನ್ನು ಪರಿಶೀಲಿಸಿ ಅವರು ತೆಗೆದುಕೊಂಡ ತಪ್ಪೂ ಹಾನಿಕರವೂ ಆದ ನಿರ್ಣಯವನ್ನು ತಿದ್ದುವುದು ಒಳ್ಳೆಯದು.

ಮಗನಭಾಯಿ ಪಿ. ದೇಸಾಯಿ

(೧೩ ನೆಯ ಪುಟದಿಂದ)

ಯುಳ್ಳವರನ್ನು ಅಧಿಕಾರಸ್ಥಾನದಲ್ಲಿ ನಿಲ್ಲಿಸಿ, ನಿರ್ದಿಷ್ಟ ಕಾಲದಲ್ಲಿ ಸಾಧಿಸಬೇಕಾದ ಗುರಿಯನ್ನುಗೊತ್ತುಪಡಿಸಿಬಿಡುವದು. ಅವರು ಗುರಿಯನ್ನು ಮುಟ್ಟಲಾರದೆ ಹೋದರೆ ಈಗ ಮಾಡುವಂತೆ ಅವರನ್ನು ಮೇಲಿನ ಸ್ಥಾನಕ್ಕೆ ತೇರ್ಗಡೆ ಮಾಡದೆ ನೆಟ್ಟಗೆ "ಮನೆಗೆ ಕಳಿಸಿಬಿಡ"ಬೇಕು. ಗಂಡಾಂತರದ ಅವಸ್ಥೆಯನ್ನೆದುರಿಸಲು ಕಠೋರ ಕ್ರಮಗಳೇ ಬೇಕು.

ಕೆಲ ಸಮಯದ ನಂತರ, ಸಂಯುಕ್ತರಾಷ್ಟ್ರಸಂಘದ ಆಹಾರ ಮತ್ತು ಕೃಷಿ ಸಂಸ್ಥೆಯ ಡೈರೆಕ್ಟರ ಜನರಲ್ಲರಾಗಿ ಲಾರ್ಡ್ ಬಾಯ್ಡ ಓರರ ಉತ್ತರಾಧಿಕಾರಿಯಾದ ಶ್ರೀ ನಾರಿಸ್ ಡಾಡರು ಸ್ವಲ್ಪ ಕಡಿಮೆ ಆಶಾದಾಯಕವಾದ ದನಿಯೆತ್ತಿದರು. ಹತ್ತು ವರ್ಷಗಳ ಅವಧಿಯಲ್ಲಿ ನಾವು ಹೊರಗಿಂದ ತರಿಸಬೇಕಾದ ಆಹಾರದ ಪರಿಮಾಣ ೪೦ ಲಕ್ಷ ಟನ್ನಿನಿಂದ ೧೫ ಲಕ್ಷ ಟನ್ನಿಗಿಳಿಯುವಂತೆ ಪರಿಸ್ಥಿತಿಯನ್ನು ಸುಧಾರಿಸಬಹುದೆಂದು ಅವರ ನಂಬಿಕೆಯಾಗಿತ್ತು.

ಕಾಲದ್ವಾಕ್ಕೆ ನಮ್ಮ ದೊಡ್ಡ ಸಂಬಳದ, "ಆಧುನಿಕ, ವೈಜ್ಞಾನಿಕ ಮತ್ತು ಪ್ರಗತಿಪರ" ರೆನಿಸಿದ ಆರಾಮ ಕುರ್ಚಿಯ ತಂತ್ರಜ್ಞರಿಗೆ ಕೆಲ ಉಪದೇಶಗಳನ್ನು ಕೊಡುವ ದಿಟ್ಟತನವನ್ನು ಅವರು ತೋರಿಸಿದರು. ಕೃಷಿಯಲ್ಲಿ ಯಂತ್ರಪ್ರಯೋಗವನ್ನು ಅಡವಿ ಬೆಳೆದ ಭೂಮಿಯನ್ನು ಹೊಸದಾಗಿ ಕೃಷಿಗೆ ಅಣಿಗೊಳಿಸಲಿಕ್ಕೆ ಮಾತ್ರವೇ ಮಿತಗೊಳಿಸಬೇಕೆಂದೂ ಭೂಮಿಯ ಸಾರ ಬಳಿದು ಹೋಗದಂತೆ ಅಂತಸ್ತುಗಳಾಗಿ ಹೊಲಗಳನ್ನು ರಚಿಸಬೇಕೆಂದೂ (terracing) ಕೃತಕ ಗೊಬ್ಬರಗಳನ್ನು ದೊಡ್ಡ ಪ್ರಮಾಣದಲ್ಲಿ ಬಳಸುವ ಬದಲು ಸಾರಜನಕವಾಯುವನ್ನು ಕೊಡುವ ಮತ್ತು ನೀರುಹೀರುವ ಗುಣವುಳ್ಳ ಕ್ಲೋವರ ಹುಲ್ಲುಗಳ ಬೆಳೆಯನ್ನುಪಯೋಗಿಸಬೇಕೆಂದೂ ಅವರು ಸೂಚಿಸಿದರು. ಈ ತತ್ವಗಳನ್ನನುಸರಿಸುವ, ಅಡವಿಗಳ ನಾಶವನ್ನು ಕಠೋರ ಮಿತಿಗೊಳಪಡಿಸುವ ಮೂಲಕ ಭೂಸಾರ ಹಾನಿಯನ್ನು ತಡೆಯುವ ಮತ್ತು ಗುಂಡಿ ಬಾವಿಗಳ ಮೂಲಕ ನೀರಾವರಿಯ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳುವ ಉಪಾಯಗಳಿಂದ ಮಾತ್ರವೇ ಭಾರತಕ್ಕೆ ಕೊನೆಗೆ ತನ್ನ ಆಹಾರ ಸಮಸ್ಯೆಯನ್ನು ಬಿಡಿಸುವ ಸಾಮರ್ಥ್ಯ ಬರಬಲ್ಲದೆಂದು ಅವರು ಧೈರ್ಯದಿಂದ ಹೇಳಿದರು.

"ಅನಾದಿಯಿಂದ ನಡೆದು ಬಂದ ಕೃಷಿ ಪದ್ಧತಿಗಳನ್ನು ತೊರೆದು ಪಾಶ್ಚಾತ್ಯ ರೀತಿಯ ವಿಶಾಲ ಕೃಷಿಯನ್ನು ಬಳಕೆಗೆ ತಂದು ಒಕ್ಕಲುತನದಲ್ಲಿ ಕ್ರಾಂತಿ ಹೂಡುವ" ಪ್ರಯತ್ನ ಮಾಡುವದು ಮರುಳೆಂದು ಕಂಡುಕೊಳ್ಳಲು ಅವರಿಗೆ ತಡಹಿಡಿಯಲಿಲ್ಲ. ಉದ್ಯಮ ರೂಪದ ಕೃಷಿಗೂ ಜೀವನವೃತ್ತಿರೂಪದ ಕೃಷಿಗೂ ಆಕಾಶ ಪಾತಾಳಗಳಷ್ಟು ಅಂತರವಿದೆ. ಅಮೇರಿಕೆಯಲ್ಲಿ ಕೃಷಿಯೂ ಮೋಟಾರು ಉದ್ದಿಮೆಯಂತೆ ಒಂದು ಕಾರಖಾನೆಯೆ. ಆದುದರಿಂದ ಅದರಲ್ಲಿ ಗಮನಿಸಬೇಕಾದ ತತ್ವಗಳೂ ಹೆಚ್ಚು ಕಡಿಮೆ ಕಾರಖಾನೆಯ ತತ್ವಗಳೇ. ಆದರೆ ಭಾರತದಲ್ಲಿ ಕೃಷಿಗೆ ಸಂಬಂಧಿಸಿದ ಇರವು ತೆರುವುಗಳು ಮೂಲತಃ ಭಿನ್ನವಾಗಿರುವದರಿಂದ ಬೇರೆಯ ತತ್ವಗಳನ್ನು ಅನುಸರಿಸಿ ಅವುಗಳನ್ನು ತಡವಬೇಕಾಗುವದು. ಉದಾಹರಣೆಗಾಗಿ ಒಂದು ಹೋಟೇಲಿನಲ್ಲಿ ಅಡಿಗೆ ಮಾಡುವಾಗ ಆಹಾರದ ಯೋಗ್ಯತೆಯನ್ನು ಅಲಕ್ಷಿಸಿಯಾದರೂ ಸರಕುಗಳ ಅಗ್ಗತನವನ್ನೇ ಗಮನಿಸುತ್ತಾರೆ; ಆದರೆ ಮನೆಯಲ್ಲಿ ತಾಯಿ ಮಕ್ಕಳಿಗಾಗಿ ಅಡಿಗೆ ಮಾಡುವಾಗ ಹಾಗೆ ಮಾಡುವದಿಲ್ಲ. ಮೊದಲನೆಯದರಲ್ಲಿ ಅಡುಗೆಯೊಂದು ಉದ್ದಿಮೆ, ಕಾರಖಾನೆಯ ಕೆಲಸ; ಎರಡನೆಯದರಲ್ಲಿ ಅದೊಂದು ಜೀವನವೃತ್ತಿ. ನಮ್ಮ ದೇಶದಲ್ಲಿ ಕೃಷಿಯ ಬಗ್ಗೆ ಕ್ರಮ ಕೈಕೊಳ್ಳುವಾಗ ಈ ಭೇದವನ್ನು ಮನಸಿನಲ್ಲಿಟ್ಟುಕೊಳ್ಳಬೇಕು. ಬಂಡವಳದ ಕೊರತೆಯೂ ಶ್ರಮಶಕ್ತಿಯ ಸಮೃದ್ಧಿಯೂ ಇರುವಲ್ಲಿ ಬಂಡವಳಗಾರ ತತ್ವಗಳನ್ನು ಆಯಾತ ಮಾಡಿಕೊಳ್ಳುವದರಿಂದ ಪ್ರಯೋಜನವಿಲ್ಲ.

—ಜೆ. ಸಿ. ಕುಮಾರಪ್ಪ

ವ್ಯಾಪಾರಲೋಕ

ಮುಂಬಯಿ ಶೇರಪೇಟೆ

ತಾ. ೩೦

ಮುಂಬಯಿ ಡಾಯಿಂಗ್	೯೩೪-೧೩-೦
ಕೋಹಿನೂರು	೨೪೩-೪-೦
ಸ್ವದೇಶಿ	೨೫೪-೮-೦
ಗೋಕಾಕ	೨೨೮-೦-೦
ಸೆಂಚುರಿ	೨೦೬-೪-೦
ಸಿಂಪ್ಲೆಕ್ಸ	೧೪೩-೮-೦
ಟಾಟಾ ಸ್ಟೀಲ ಡೆಫರ್ಡ	೧೧೫೨-೮-೦
ಇಂಡಿಯನ್ ಆಯರ್ನ	೧೯-೫-೦
ಅಸೋ. ಸಿಮೆಂಟ್ಸ	೧೨೮-೪-೦
ಸೆಂಟ್ರಲ ಬ್ಯಾಂಕ್	೭೫-೦-೦
ಇಂಪೀರಿಯಲ್ ಬ್ಯಾಂಕ್(ಪೂರ್ಣ)	೧೭೬೨-೮-೦

ಚಿನ್ನ ಬೆಳ್ಳಿ

ತಯಾರಿ ಚಿನ್ನ	೧೧೫-೨-೦
ವಾಯದಾ ,,	೧೧೪-೬-೦
ತಯಾರಿ ಬೆಳ್ಳಿ	೧೮೧-೧೪-೦
ವಾಯದೆ	೧೮೨-೨-೦

ಎಣ್ಣೆಕಾಳು

ಶೇಂಗಾ	೧೮೮-೧೨-೦
ಅಗಸೆ (ತಯಾರಿ)	೨೯-೧೨-೦
,, ಹೊಸ	೨೯-೦-೦
ಅಗಸೆ ಎಣ್ಣೆ	೧೬-೦-೦

ಹುಬ್ಬಳ್ಳಿ

(ಅ. ಪ್ರೊ. ಮಾರ್ಕೆಟ ಕಮಿಟಿ ಹುಬ್ಬಳ್ಳಿ)

ತಾ. ೨೯

ಕುಸುಬಿ (ಬ. ಮಣಕ್ಕೆ)	೧೩-೮	೦೧೪-೧೦-೦
ಅಗಸಿ	(ಚೀಲಕ್ಕೆ)	೪೦-೪೨
ಔಡಲ	,,	೩೪-೩೬
ಜ. ಹೆಸರು	,,	೪೬-೮-೦
ಕರಿ ಎಳ್ಳು	,,	೬೪
ಬಿಳಿ ಎಳ್ಳು	,,	೮೦-೯೩
ಕಡಲೆ	,,	೫೨-೫೩
ಜ. ತೊಗರಿ	,,	೨೬-೨೮
ಹುರಳಿ	,,	೩೪-೩೫
ಕೆಂ. ಅಲಸಂದಿ	,,	೫೧-೫೩
ಬಿ. ಅಲಸಂದಿ	,,	೫೮-೬೦
ಶೇಂಗಾ (ಹೇರು)		೫೦-೫೫
ಶೇಂಗಾ ಕಾಳು		೮೮-೯೨

ಸಾಂಗಲಿ ಪೇಟೆ

ತಾ. ೨೮

ಅರಿಸಿಣ(ಹೇರು)	೯೫-೧೦೯
ಮೆಣಸಿನಕಾಯಿ(ಹೇರು)	೧೪೦-೨೧೦
ಶೇಂಗಾ(ಖಂಡಿ)	೧೪೫
ಬೆಲ್ಲ(ಹೇರು)	೬೮-೭೩

ಶಿವಮೊಗ್ಗೆ ಅಡಿಕೆ ಪೇಟೆ

ತಾ. ೨೯

ದೇಶಾವರ ನಂ. ೧ (ಮಣಕ್ಕೆ)	೩೦-೩೨
,, ೨	೨೭-೩೦
ರಾಜಾ ಅಲವು	೨೬-೨೮
ತೊರಸಾಲು	೨೩-೨೬
ಚಿಟ್ಟವಂತಿ	೧೭-೧೮
ಚಿಟ್ಟಿ	೧೪-೧೬
ಸೀಗೆಕಾಯಿ	೭-೮

Reg. No. B. 3148

LICENCE No. 3
Licensed to Post without Prepayment

KARMAVEER 4-7-49

ಕರ್ನಾಟಕದಲ್ಲಿ

ಧಾರವಾಡ

ಕಲಘಟಗಿ ತಾಲೂಕು ಬೆಲವಂತರ ಹಿರೇ ... ಶ್ರೀ ಚನ್ನಬಸವೇಶ್ವರ ಶಿವಯೋಗಿಗಳ ... ನೆಯ ಪುಣ್ಯತಿಥಿ ಮಹೋತ್ಸವವು ತಾ. ೨೮ ... ಶ್ರೀ ಮಠದಲ್ಲಿಯೂ ವಿಜಾಪುರ ಜಿಲ್ಲೆಯ ...ಣಾಳ ಗ್ರಾಮದಲ್ಲಿ ಶಿವಯೋಗಿಗಳ ...ವಲ ಗುರುಪುತ್ರ ಶ್ರೀ ಮಲ್ಲಯ್ಯನವರು ...ಜಾರಿ ಇವರ ಗೃಹದಲ್ಲಿಯೂ ವಿಜೃಂಭಣೆ ...ಯಿಂದ ಸಾಂಗವಾಯಿತು.

ಜಾತೀಯ ದೃಷ್ಟಿಯಿಂದ ವಿವಾಹಗಳಾ...ವ ಬದಲು ರಾಷ್ಟ್ರೀಯ ದೃಷ್ಟಿಯಿಂದಾದರೆ ...ವ್ಯ ಸ್ವಾತಂತ್ರ್ಯವು ಐಕ್ಯದ ಬಲದಿಂದ ...ನ್ನಷ್ಟು ಭದ್ರವಾದೀತೆಂಬ ಅಭಿಪ್ರಾಯ ...ನ್ನು ಶ್ರೀ ಜಗದ್ಗುರು ಉರವಕೊಂಡ ...ಜಾ ಸ್ವಾಮಿಗಳು ಬ್ಯಾಡಗಿಯಲ್ಲಿ ನಡೆದ ...ಶ್ರೀ ಕುರುವತ್ತೆಪ್ಪನವರ ಮಗನ ಮದುವೆಗೆ ...ಳಿಸಿದ ಸಂದೇಶದಲ್ಲಿ ವ್ಯಕ್ತಗೊಳಿಸಿದ್ದಾರೆ.

ಮುಂಬಯಿ ಕೂಲಿಕಾರ ಸಂಘಾಧಿಕಾರಿ...ಗಳಾದ ಶ್ರೀ ದಾತಾರರ ಮುಂದೆ ಧಾರವಾಡದ ...ಬೀಡಿ ಕೆಲಸಗಾರ ಯೂನಿಯನ್ನಿನವರು ತಮ್ಮ ...ಡೆಯರಾದ ರಹಿಮಾನ್ ಬೀಡಿ ಕಾರಖಾ...ನೆಯ ಶ್ರೀ ವಾಸನ ಕೊಪ್ಪ ಅವರ ಮೇಲೆ ...ಕೆಲ ದೂರುಗಳನ್ನು ಮಂಡಿಸಿದ್ದು ಶ್ರೀ ದಾತಾ...ರರು ಸಹಾಯದ ಅಶ್ವಾಸನವಿತ್ತರು.

ವಿಜಾಪುರದ ಎಂ. ಎಲ್. ಎ. ಗಳಾದ ಶ್ರೀ ಬಿ. ಆರ್. ಹುಜರೆಯವರ ಮೇಲೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸು (ತಾ. ೨೬) ಶಿಸ್ತಿನ ಕ್ರಮ ಕೈಕೊಂಡು ೩ ವರ್ಷಗಳ ವರೆಗೆ ಅವ...ರನ್ನು ಕಾಂಗ್ರೆಸ್ಸಿನಿಂದ ಹೊರಗೆ ಹಾಕಿತು. ಶ್ರೀ ಸದಾಶಿವಪ್ಪ ತೋಳನೂರ ಮತ್ತು ಸಿದ್ಧರಾಮಪ್ಪ ದುಬಲಗುಂಡಿಯವರ ಮೇಲೂ ಮೂರು ವರ್ಷಗಳ ಬಹಿಷ್ಕಾರ ಹೊರಿಸ...ಲ್ಪಟ್ಟಿತು.

ಗದಗದ ನಗರಸಭೆಯ ಚೀಫ್ ಆಫೀಸರ್ ಶ್ರೀ ಎಸ್. ಆರ್. ಹಿರೇಮಠರನ್ನು ಅಸಭ್ಯ ತನವೇ ಮೊದಲಾದ ಆರೋಪ ಹೊರಿಸಿ ಕೆಲಸ ದಿಂದ ತಿತ್ತೊಗೆಯಬೇಕೆಂದು ನಗರ ಸಭೆಯ ರಿಕ್ವಿಜಿಶನ್ ಸಭೆಯಲ್ಲಿ ನಿರ್ಧರಿಸಲ್ಪಟ್ಟಿತು.

೩ ದಿನಗಳಿಂದ ನಡೆದ ಧಾರವಾಡ ಕಸ ಗುಡಿಸುವವರ ಸಂಪು ತಾ|| ೨೩ಕ್ಕೆ ಕೊನೆ ಗೊಂಡಿತು. ಬೇಡಿಕೆಯಲ್ಲಿ ೧೫ ರೂಪಾಯಿ ಗಳನ್ನು ಒಡನೆ ಕೊಡಲು ನಗರಸಭೆ ಒಪ್ಪಿತು.

ಧಾರವಾಡದಲ್ಲಿ ಒಂದು ವೈದಿಕ ಸಂಶೋ ಧನ ಸಂಸ್ಥೆಯನ್ನು ಸ್ಥಾಪಿಸುವ ಪ್ರಯತ್ನ ನಡೆದಿದ್ದು ಶ್ರೀ ಅಲೂರ ವೆಂಕಟರಾವ್, ಶ್ರೀ ಆರ್. ಎಸ್. ಪಂಚಮುಖಿ, ಶ್ರೀ ಉದ್ಯಾ ವರ, ಪ್ರೊ. ಜಹಾಗೀರದಾರರನ್ನೊಳಗೊಂಡ ಸಮಿತಿ ರಚಿಸಲ್ಪಟ್ಟಿದೆ.

ಗದಗ ಹುಬ್ಬಳ್ಳಿ ರಸ್ತೆಯಲ್ಲಿ ಒಂದು ಮೋಟಾರು ಟ್ರಕ್ಕು ಒಂದು ಚಕ್ಕಡಿಗೆ ಹಿಂದಿ ನಿಂದ ಢಿಕ್ಕಿ ಹೊಡೆದು ಚಕ್ಕಡಿಯಲ್ಲಿದ್ದ ೧೮ ಜನರಲ್ಲಿ ಒಂದು ಮಗು ಹಾಗು ಒಂದು ಎತ್ತು ತತ್ಕ್ಷಣ ಮೃತವಾದವು. ಉಳಿದವರಿಗೂ ಗಾಯ ಗಳಾಗಿವೆ.

ಧಾರವಾಡ ಕಲೆಕ್ಟರ ಡಾ. ಬಿ. ಬೆಂಜಾ ಮಿನ್ನರಿಗೆ ಬಡೋದೆಗೆ ವರ್ಗವಾಗಿದ್ದು ಅವರ ಸ್ಥಾನಕ್ಕೆ ಶ್ರೀ ಬಿ. ಎಂ. ಚೌಧರಿ ಎಂಬ ವರು ಬರಲಿದ್ದಾರೆ.

ಉತ್ತರ ಕನ್ನಡ

ಕುಮಟೆಯಲ್ಲಿ ಕಳೆದ ವಾರ ಉದ್ಘಾಟಿಸ ಲ್ಪಟ್ಟ ಕೆನರಾ ಕಾಲೇಜಿಗೆ ಶ್ರೀ ಎಸ್. ಎ. ಗೋರೆಯವರು ಪ್ರಿನ್ಸಿಪಾಲರಾಗಿದ್ದಾರೆ. ಅವರು ಪ್ರಸಿದ್ಧ ಗ್ರಂಥಕರ್ತರೂ ಲಾಯಿಬ್ರೆರಿ ಡಿಪ್ಲೋಮಾ ಪಡೆದವರೂ ಇದ್ದಾರೆ.

೧೯೪೮ ಸೆಪ್ಟೆಂಬರದಲ್ಲಿ ಸೆರೆಮನೆಯಿಂದ ತಪ್ಪಿಸಿಕೊಂಡು ಹೋಗಿದ್ದ ನಾಗ್ಯಾ ಗುಜಾ ಪ್ಯಾಳಸೇಕರನೆಂಬ ಕಮ್ಯುನಿಸ್ಟ ಸ್ವಾನಬದ್ಧ ನನ್ನು ಹೊನ್ನಾವರ ತಾಲೂಕಿನ ಕೆಳಗನೂರ ನಲ್ಲಿ ಸಬ್ ಇನ್ಸ್‌ಪೆಕ್ಟರ್ ಇಮಾಮ ಸಾಹೇಬರು ಬಂಧಿಸಿದ್ದಾರೆ. ಅವನೊಡನೆ ಓಡಿದ್ದ ಜೂಜಾ ಎಂಬ ಇನ್ನೊಬ್ಬ ಕೈದಿಯ ಪತ್ತೆಯಿಲ್ಲ.

ಬಳ್ಳಾರಿ

ದಿವಂಗತ ಇಜಾರಿ ವೀರಬಸಪ್ಪನವರ ನಿಧನದ ನಿಮಿತ್ತ ಹರಪನಹಳ್ಳಿ, ಹೊಸಪೇಟೆ ಮೊದಲಾದೆಡೆಗಳಲ್ಲಿ ದುಃಖಸೂಚಕ ಸಭೆಗಳು ನಡೆದವು.

ಘಟಪ್ರಭಾ ನೀರಾವರಿ ಯೋಜನೆಯ ಕಾರ್ಯಾರಂಭ

೮ ವರ್ಷಗಳಲ್ಲಿ ೩ ಲಕ್ಷ ಎಕರೆಗೆ ನೀರಾವರಿ ಸೌಕರ್ಯ

ಬೆಳಗಾಂವ ಜಿಲ್ಲೆಯಲ್ಲಿ ಘಟಪ್ರಭಾನದಿಯ ನೀರಾ ಯೋಜನೆಯ ಉದ್ಘಾಟನವನ್ನು ಕಳೆದ ವಾರಾಂತ್ಯದಲ್ಲಿ ಮುಂಬಯಿ ಸರಕಾರದ ಚೀಫ ಎಂಜಿನಿಯರರಾದ ಶ್ರೀ. ಎಸ್. ಪಿ. ಗುಜರರು ಮಾಡಿದರು.

ಈ ಯೋಜನೆಗಾಗಿ ೫ಕೋಟಿ ೫೦ಲಕ್ಷರೂ. ವೆಚ್ಚದ ಅಂದಾಜು ಮಾಡಲಾಗಿದ್ದು ೮ವರ್ಷ ಗಳಲ್ಲಿ ಇದು ಪೂರ್ತಿಯಾಗಿ ಕಾರ್ಯಕ್ಕಿಳಿಯು ವದು.

ಧೂಪದಾಳ ಬಳಿಯಲ್ಲಿ ಘಟಪ್ರಭಾ ಅಣೆ ಕಟ್ಟಿನಿಂದ ೮೦ಮೈಲು ಕಾಲುವೆ ತೆಗೆಯಲಾಗು ವದು. ಈ ಕಾಲುವೆಯಿಂದ ಬೆಳಗಾಂವ,ವಿಜಾ ಪೂರ ಜಿಲ್ಲೆಗಳಲ್ಲಿ ಕೂಡಿ ೧ ಲಕ್ಷ ೨೫ ಸಾವಿರ ಎಕರೆ ಭೂಮಿಗೆ ನೀರಾವರಿ ಸೌಕರ್ಯದೊರೆತು ೪೦ ಸಾವಿರ ಟನ್ನ ಅಹಾರಧಾನ್ಯ ಬೆಳೆಯುವ ದೆಂದು ಅಂದಾಜುಮಾಡಲಾಗಿದೆ. ಕಾಲುವೆಯ ಯೋಜನೆ ಪೂರ್ತಿಗೊಳಿಸಲು ೪ ವರ್ಷ ಅವಧಿ ಹಿಡಿಯುವದೆಂದು ಅಂದಾಜು ಮಾಡ ಲಾಗಿದೆ. ಯೋಜನೆಯ ಈ ಭಾಗವು ಪೂರ್ತಿ ಯಾದ ನಂತರ ಧೂಪದಾಳದಿಂದ ಪಶ್ಚಿಮಕ್ಕೆ ೨೫ ಮೈಲು ಅಂತರದ ಮೇಲೆ ಘಟಪ್ರಭಾ ನದಿಗೆ ಇನ್ನೊಂದು ಅಣೆಕಟ್ಟು ಕಟ್ಟುವದೂ ಅದ ರಿಂದವಿದ್ಯುತ್ ಶಕ್ತಿ ನಿರ್ಮಾಣ ಮಾಡುವದೂ ನೀರಾವರಿಗೆ ನೀರನ್ನು ಒದಗಿಸುವದೂ ಯೋಜ ನೆಯ ಎರಡನೆಯ ಮೆಟ್ಟಲು. ಈ ಯೋಜ ನೆಯು ಸಂಪೂರ್ಣವಾಗಿ ಕಾರ್ಯರೂಪಕ್ಕಿಳಿ ದಾಗ ೩ ಲಕ್ಷ ಎಕರೆ ಭೂಮಿಗೆ ನೀರಾವರಿ ದೊರೆತು ೧ ಲಕ್ಷ ಟನ್ನ ಧಾನ್ಯ ಉತ್ಪತ್ತಿಯಾಗು ವದೆಂದೂ ನಿರೀಕ್ಷಿಸಲಾಗಿದೆ.

ಇತರ ನೀರಾವರಿ ಯೋಜನೆಗಳು

ಇದಲ್ಲದೆ ಮುಂಬಯಿ ಸರಕಾರದವರು ೧೫ ಕೋಟಿ ಒಟ್ಟು ವೆಚ್ಚ ತಗಲಬಹುದಾದ ಬೇರೆ ನಾಲ್ಕು ನೀರಾವರಿ ಯೋಜನೆಗಳ ಕೆಲಸವನ್ನು ಪ್ರಾರಂಭಿಸಿದ್ದಾರೆ. ಈ ಎಲ್ಲ ನೀರಾವರಿ ಯೋಜನೆಗಳಿಂದ ಒಟ್ಟು ೬ ಲಕ್ಷ ಎಕರೆ ಭೂಮಿಗೆ ನೀರಾವರಿ ಸೌಕರ್ಯ ದೊರೆತು ೨ ಲಕ್ಷ ೫೦ ಸಾವಿರ ಟನ್ನ ಆಹಾರ ಧಾನ್ಯ ಹೆಚ್ಚಿ ಗೆ ಉತ್ಪತ್ತಿಯಾಗುವದು.

ಮೇಲಿನ ಯೋಜನೆಗಳಲ್ಲದೆ ಸರಕಾರದವರು ೨೦ ಕೋಟಿ ರೂ ವೆಚ್ಚದ ಬೇರೆ ೧೦ ನೀರಾವರಿ ಯೋಜನೆಗಳ ಪರಿಶೀಲನೆ ನಡೆಸಿದ್ದಾರೆ. ಈ ೧೦ ಯೋಜನೆಗಳು ಕಾರ್ಯರೂಪಕ್ಕಿಳಿದದ್ದಾ ದರೆ ೮ ಲಕ್ಷ ಎಕರೆ ಭೂಮಿಗೆ ನೀರಾವರಿ ದೊರೆತು ೨ ಲಕ್ಷ ೫೦ ಸಾವಿರ ಟನ್ನ ಆಹಾರ ಧಾನ್ಯ ಬೆಳೆಯುವ ಅಂದಾಜು ಮಾಡಲಾಗಿದೆ.

ಕನ್ನಡ ಸಂಸ್ಥಾನಗಳು

ಮೈಸೂರು ಸಂಸ್ಥಾನದ ವಾರ್ಷಿಕ ವರ ಮಾನದಲ್ಲಿ ನೇಕಡಾ ೨೫ ರಷ್ಟನ್ನು ಅಂದರೆ ರೂ. ೨೪೮ ಲಕ್ಷವನ್ನು ವಿದ್ಯಾಶಾಖೆಗಾಗಿ ವೆಚ್ಚ ಮಾಡಲಾಗಿದೆ. ವಿಶ್ವವಿದ್ಯಾಲಯಕ್ಕೆ ಕೊಡು ವದರ ನೂರರಷ್ಟು ಹಣವನ್ನು, ಅಂದರೆ ೧೧೬ ಲಕ್ಷ ರೂಪಾಯಿಗಳನ್ನು ಪ್ರಾಥಮಿಕ ಶಿಕ್ಷಣಕ್ಕೆ ಕಳೆದ ವರ್ಷ ಕೊಡಲಾಯಿತು. ೧೯೪೫-೪೬ ರಲ್ಲಿ ಇಷ್ಟು ಹಣ ಕೊಟ್ಟಿರಲಿಲ್ಲ.

ಶಿವಮೊಗ್ಗೆಯ ಮಲೆನಾಡು ಅಡಿಕೆ ಮಾರಾ ಟದ ಸಹಕಾರಿ ಸಂಘದ ಸಭೆಯಲ್ಲಿ ಅ. ಭಾ. ಅಡಿಕೆ ಕೇಂದ್ರ ಸಮಿತಿ ಮತ್ತು ಅಡಿಕೆ ಸಂಶೋಧನ ಕೇಂದ್ರಗಳ ಕಚೇರಿಗಳನ್ನು ಶಿವ ಮೊಗ್ಗೆಗೆ ವರ್ಗಾಯಿಸಬೇಕೆಂದು ಕೇಳುವ ಗೊತ್ತುವಳಿಯಾಯಿತು.

೧೯೪೭ ಜೂನ್ ೨೦ ಕ್ಕೆ ಶಿವಮೊಗ್ಗೆಯಲ್ಲಿ ನಡೆದ ಜಾತೀಯ ಗಲಭೆಯ ಸಂಬಂಧದಲ್ಲಿ ಸೆಶನ್ಸ್‌ಜಜ್ಜ ಶ್ರೀ ತಿಮ್ಮರಾಯ ಶೆಟ್ಟಿಯವರು ೧೧ ಮುಸಲ್ಮಾನರಿಗೆ ತಲಾ ೪ ವರ್ಷ ಶಿಕ್ಷೆ ಕೊಟ್ಟು ೧೦ ಜನರನ್ನು ನಿರ್ದೋಷಿಗಳೆಂದು ತೀರ್ಮಾನಿಸಿದರು.

ಮೈಸೂರು ಮಂತ್ರಿಮಂಡಲದಲ್ಲಿ ಅಗಸ್ಟ್ ತಿಂಗಳಲ್ಲಿ ದಿವಾಣ ಹುದ್ದೆ ರದ್ದಾದ ನಂತರ ಮಹತ್ವದ ಕೆಲ ಬದಲಾವಣೆಗಳಾಗಬಹು ದೆಂದೂ ಶ್ರೀ ಡಿ. ಎಚ್. ಚಂದ್ರಶೇಖರಯ್ಯ ನವರು ವಿಶ್ವವಿದ್ಯಾಲಯದ ಉಪಕುಲಪತಿ ಗಳಾಗಿ ನೇಮಕ ಹೊಂದಿ, ಪಾಮಿಡಿ ಸುಬ್ಬ ರಾಮ ಶೆಟ್ಟರು ತಮ್ಮ ವ್ಯಾಪಾರ ವ್ಯವ ಸಾಯಕ್ಕೇ ಮರಳಿ, ತೆರವಾಗಬಹುದಾದ ಸ್ಥಳ ಗಳಿಗೆಶ್ರೀ ಕೆ. ಹನುಮಂತಯ್ಯ ಮತ್ತುಇನ್ನೊ ಬ್ಬರು ಸೇರಿಸಿಕೊಳ್ಳಲ್ಪಡಬಹುದೆಂದೂ ವದಂತಿ.

ಜುಲೈಯಲ್ಲಿ ಮಹಾರಾಜರವರ ವರ್ಧಂತ್ಯು ತ್ಸವದ ಸಮಯದಲ್ಲಿ ಮೈಸೂರಿಗೆ ಭೆಟ್ಟಿಕೊಡ ಲಿರುವ ಭಾರತದ ಮುಖ್ಯ ಸೇನಾಪತಿ ಜನರಲ್ ಕಾರ್ಯಪ್ಪನವರಿಗೆ ಪೌರಸಭೆಯವರು ಮಾನಪತ್ರವನ್ನು ಅರ್ಪಿಸಬೇಕೆಂದು ಹಿರ್ಣ ಯಿಸಿ ೧೦೦೦ ರೂಪಾಯಿ ಮಂಜೂರು ಮಾಡಿ ದ್ದಾರೆ.

ಬೆಂಗಳೂರಲ್ಲಿ ನಾಗರಿಕರಲ್ಲಿ ಶಿಸ್ತು ಸಂಘ ಟನ ಶಕ್ತಿಗಳನ್ನುಂಟುಮಾಡುವ ಸಲುವಾಗಿ ತಾ. ೨೦ ರಿಂದ ೬ ದಿನ ನಾಗರಿಕರಿಗೆ ಮಿಲಿಟರಿ ಶಿಕ್ಷಣ ಕೊಡುವ ವರ್ಗಗಳು ನಡೆದವು.

ಮೈಸೂರು ನ್ಯಾಯ ವಿಧಾಯಕ ಸಭೆಯಲ್ಲಿ ಮಹಮದ ಇಮಾಮರ ನಾಯಕತ್ವದಲ್ಲಿ ಏಳು ಜನರನ್ನೊಳಗೊಂಡ ವಿರುದ್ಧ ಪಕ್ಷವೊಂದು ಅಧಿ ಕೃತವಾಗಿ ಸ್ಥಾಪಿತವಾಗಿದೆ. ಶ್ರೀ ಎಸ್. ಚನ್ನಪ್ಪ, ಡಾ. ಮುಲ್ಲಪ್ಪ ಮೊದಲಾದವರು ಅದ ರಲ್ಲಿದ್ದಾರೆ.

ರಾಯಚೂರಲ್ಲಿ ಮಸೀದೆಗಳ ಮುಂದೆ ವಾದ್ಯಘೋಷ ಸಂಬಂಧದ ತಕರಾರಿನ ಬಗ್ಗೆ ಮಿಲಿಟರಿ ಗವರ್ನರ ಚೌಧರಿಯವರು ಹುಕುಮು ವಿಧಿಸಿದ್ದು ನಿರ್ದಿಷ್ಟ ವೇಳೆಗಳನ್ನು ಗೊತ್ತುಪಡಿಸಿ ಅಗ ಮಾತ್ರ ಮಸೀದೆಗಳ ಮುಂದೆ ವಾದ್ಯಘೋಷ ಸಲ್ಲವೆಂದು ಸಾರಿ ದ್ದಾರೆ.

ದಕ್ಷಿಣ ಕನ್ನಡ

ಮಂಗಳೂರಿನ ಗವರ್ನ್ಮೆಂಟು ಕಾಲೇಜಿಗೆ ವಿದ್ಯಾರ್ಥಿನಿಯರನ್ನು ಸೇರಿಸಿಕೊಳ್ಳಬಾರ ದೆಂದು ಮದ್ರಾಸ ಸರಕಾರವು ಆಜ್ಞೆ ಹೊರಡಿ ಸಿತ್ತು. ಆದರೆ ಈಗ ಹಿಂದಿನಂತೆ ವಿದ್ಯಾ ರ್ಥಿನಿಯರನ್ನು ಸೇರಿಸಿಕೊಳ್ಳಬಹುದೆಂಬ ಆಜ್ಞೆಯ ಮೂಲಕ ಆ ಆಜ್ಞೆಯನ್ನು ಹಿಂತೆ ಗೆದುಕೊಂಡಿದ್ದಾರೆ.

ಅಖಿಲ ಭಾರತ ಅಡಿಕೆ ಫೆಡರೇಶನ ಕಾರ್ಯ ದರ್ಶಿಗಳು ಕೇಂದ್ರ ಸರಕಾರದ ಕೃಷಿ ಮಂತ್ರಿ ಶ್ರೀ ಜೈರಾಮದಾಸ ದೌಲತರಾಮರಿಗೊಂದು ಮನವಿ ಮಾಡಿ, ಆ ಮೂಲಕ ಅಡಿಕೆ ಕಮಿ ಟಿಯ ಸದಸ್ಯರ ಸಂಖ್ಯೆಯಲ್ಲಿ ಕೆಲವೊಂದು ತಿದ್ದುಪಡಿ ಸೂಚಿಸುತ್ತಾ, ಅಡಿಕೆ ಬೆಳೆಯುವ ವವರಿಗೆ ಅ ಸ್ಥಾನ ಸಿಗಬೇಕೆಂದು ಹೇಳಿದ್ದಾರೆ.

ಬೇಸಾಯದ ಬಗ್ಗೆ ಅಡಿಕೆ ಬೇಸಾಯಗಾರರು ತಮ್ಮಲ್ಲಿಟ್ಟುಕೊಳ್ಳುವ ಅಕ್ಕಿ ಭತ್ತಗಳನ್ನು ಸರಿಯಾಗಿ ಉಪಯೋಗಿಸುವುದಕ್ಕಾಗಿ ಬೇಸಾ ಯಗಾರರಿಂದ ಸೆಕ್ಯುರಿಟಿ ಹಣವನ್ನೂ ಆ ಕುರಿತಾತೊಂದು ಬಾಂಡನ್ನೂ ಕೇಳಿದೆ. ಅವರು ಉಳಿಸಿಕೊಳ್ಳುವ ಭತ್ತ ಮುಡಿಗೆ ರೂ. ೩ ಮತ್ತು ಅಕ್ಕಿ ಮುಡಿಗೆ ರೂ. ೬ ಸೆಕ್ಯು ರಿಟಿ ಕೊಡಬೇಕೆಂದು ಈಗಾಗಲೆ ಬೇಸಾಯ ಗಾರರಿಗೆ ನೋಟೀಸು ಹೋಗಿದೆ. ಈ ಕುರಿತು ಅಡಿಕೆ ಬೇಸಾಯಗಾರರ ಸಂಘದವರೊಡನೆ ಸಂಘಾದ ನಡೆಸುತ್ತಿದ್ದಾರೆ. ಕೊನೆಯ ತೀರ್ಮಾನ ಬರುವ ವರೆಗೆ ಎಲ್ಲರೂ ಸೆಕ್ಯುರಿಟಿ ಕಟ್ಟಲು ಕಾಯಬೇಕಾಗಿ ಕೇಳಿಕೊಂಡಿದ್ದಾರೆ.

ಜಿಲ್ಲೆಯ ಭತ್ತದ ಸಸಿಗೆ ಬಿದ್ದಿರುವ ಹುಳು ಗಳ ವಿಚಾರವಾಗಿ ಮದ್ರಾಸು ಸರಕಾರವು ವಿವ ರವಾದ ವರದಿಯೊಪ್ಪಿಸಲು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿಕೊಂಡಿರುವರಲ್ಲದೆ ಕೊಯಮುತ್ತೂರಿನ ಕೃಷಿ ಸಂಶೋಧನಾಧಿ ಕಾರಿಗಳು ಕೂಡಲೇ ಈ ಜಿಲ್ಲೆಗೆ ಬಂದು ಹುಳುಗಳ ನಾಶದ ಕುರಿತು ಪರ್ಯಾಲೋಚಿಸ ಬೇಕಾಗಿ ತಂತಿ ಮೂಲಕ ತಿಳಿಸಿದ್ದಾರೆಂದೂ ತಿಳಿದುಬಂದಿದೆ.

ಉಡುಪಿಯ ಕಡೆಕಾರು ಗ್ರಾಮದಲ್ಲಿ ಕೊರಗ ಪೂಜಾರಿಯ ಪತ್ನಿ ಸಂಕಿ ಪೂಜಾರ್ತಿಯೆಂಬ ವಳು ಎರಡು ಗಂಡು ಶಿಶುಗಳನ್ನೂ ಒಂದು ಹೆಣ್ಣು ಶಿಶುವನ್ನೂ ಕಳೆದ ದಿನಾಂಕ ೧೭ ರಂದು ಹಡೆದಿರುವಳು. ಈ ಮೂರು ಮಕ್ಕಳೂ ಟಾಣಂತಿಯೂ ಆರೋಗ್ಯವಾಗಿದ್ದಾರೆ.

ಉಡುಪಿ ಸರ್ಕಲ್ ಕಾಂಗ್ರೆಸ್ ಸಮಿತಿಯ ಸಭೆಯು ಶ್ರೀ ಬಿ. ಕೃಷ್ಣಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರುಗಿದಾಗ ಕಾರ್ಕಳ, ಉಡುಪಿ, ಕುಂದಾಪುರ ತಾಲೂಕುಗಳ ಕುಂದಾಪುರ ವಿಭಾಗಕ್ಕೆ ಒಂದು ಸಬ್ ಕೋರ್ಟು ಅವಶ್ಯವಿದೆಯೆಂದೂ, ಸರಕಾರವು ಈ ಕೋರಿಕೆಯನ್ನು ಕೂಡಲೇ ಮಾನ್ಯ ಮಾಡ ಬೇಕೆಂದೂ ಸರಕಾರವನ್ನು ಕೇಳಿಕೊಳ್ಳ ಲಾಯಿತು.

ಕುಂಬಳೆಯ ಶಿಕ್ಷಾಭಿವೃದ್ಧಿ ಕ್ಷೇತ್ರದೊಳ ಗಿರುವ ಎಲ್ಲಾ ಶಾಲೆಗಳ ಉಪಾಧ್ಯಾಯರು ತಮ್ಮ ಬಿಡುವಿನ ಸಮಯದಲ್ಲಿ ಶಿಕ್ಷಾಭಿವೃದ್ಧಿ ಕಾರ್ಯವನ್ನು ಜನರಲ್ಲಿ ಪ್ರಚಾರ ಮಾಡ ಬೇಕೆಂಬ ಹುಕುಮನ್ನು ವಿದ್ಯಾಖಾತೆಯವರು ಹೊರಡಿಸಿ ಉಪಾಧ್ಯಾಯರಿಗೆ ತಿಳಿಸಿರುತ್ತಾರೆ.

ಬೆಳಗಾವಿ

ಬೆಳಗಾವಿ ಕೇಂದ್ರದಿಂದ ಎಸ್. ಎಸ್. ಸಿ ಪರೀಕ್ಷೆಗೆ ಕುಳಿತ ಕಂಚುಗಾರಕಟ್ಟಿ ವಿ. ಎಸ್. ಎಂಬ ವಿದ್ಯಾರ್ಥಿಯ ನಂಬರು ಪಾಸ್ ಪಟ್ಟಿ ಯಲ್ಲಿ ಕಾಣಿಸದಿದ್ದರೂ ಅವನು ತರಿಸಿಕೊಂಡ ವಿವರವಾದ ಗುಣಗಳ ಯಾದಿಯಲ್ಲಿ ಪಾಸ್ ಎಂದು ಬರೆದಿದೆಯಂತೆ. ಆದರಿಂದ ಅವನೀಗ ಉಭಯ ಸಂಕಟಕ್ಕೆ ಗುರಿಯಾಗಿದ್ದಾನೆ.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.